REGISTERED NO. M. 1393. ೨೪ ಪುಟಗಳು. ಈ ಪ್ರತಿ ಒಂದಾಣೆ

ಸಮಸ್ತಾವನಿತಲೇಷು ಭ್ರಾತೃತನುಹೀಭಾಗಃ ಪ್ರಶಾಸನ್ಮಹೀ
ಲೇಸ್ಯಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಸ್ತಸ್ತದ್ವದವಿಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ಮೋಽನ್ವಹಂ
ಭೂದ್ವಿಶ್ವಜನೀನವೃತ್ತಿಚತುರಶ್ಮ್ರೀಕಂಠಕಂಠೀರವಃ ॥

KANTEERAVA
THE ONLY KANARESE
BI-WEEKLY.

ನರರ ಕುಲಗಳೊಳಾರ್ಯವಂಶವ್ವು, । ಧರೆಯೊಡೆಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ಕರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸ್ತಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ಜೂನ್ ತಾರೀಕು ೧೬ನೇ ಮಂಗಳವಾರ ಸಂಚಿಕೆ ೨೩.
VOL. XVIII MANGALORE, TUESDAY, JUNE 16, 1936. NO. 23.

ಅಮೃತಾಂಜನ

ಸರ್ವರೋಗನಿವಾರಣಿ

(Regd.)

ತಲೆನೋವು

ತಲೆನೋವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿನೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾಡ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ.

ಮಂಗಳೂರಲ್ಲಿ ಶಾಖಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು

ಮತ್ತು

ಬೊಂಬಾಯಿ ನಗರ ಮತ್ತು ಅದರ ಉಪನಗರಗಳಿಗೆ ಚೀಫ್ ಏಜಂಟರು.

13-12-1935—ನಮ್ಮ ರಜತೋತ್ಸವ ವರುಷ.

——ಪ್ರಕಟಣೆ.——

ಪುತ್ತಿಯಾರದಲ್ಲಿ, ತಾಲೂಕು ಆಫೀಸು ರಸ್ತೆಯಲ್ಲಿ, ಪುತ್ತಿಯಾರಾ ಪೋಸ್ಟಾಫೀಸಿನ ಎದುರುಗಡೆಯಲ್ಲಿರುವ "ಸೌಮ್ಯಾಲಯಂ" ಎಂಬ ಹೊಸ ಬಂಗಲೆಯನ್ನು ನಾವು ಪಡಕೊಂಡು, ನಮ್ಮ ಕಲ್ಲಿಕೋಟೆ ಬ್ರಾಂಚ್ ಆಫೀಸನ್ನು ಅಲ್ಲಿ ತಾ. 14-3-36ರಲ್ಲಿ ತೆರೆದಿರುವೆವೆಂದು ನಮ್ಮ ಯಾವತ್ತೂ ಕೆಲಸಗಾರರಿಗೂ ಏಜಂಟರಿಗೂ ಪೊಲಿಸಿದಾರರಿಗೂ ತಿಳಿಸಲು ಸಂತೋಷಪಡುತ್ತೇವೆ. ನಮ್ಮ ಮಲಬಾರು ಜಿಲ್ಲಾ ಏಜಂಟರಾದ ಮಿ. ಸಿ. ಶಂಕರನ್ ನಾಯರರ ಆಫೀಸು, ಹಜೂರು ರಸ್ತೆಯಲ್ಲಿದ್ದುದು ಮೊಕೂಪು ಮಾಡಲ್ಪಟ್ಟು, ಈ ಹೊಸ ಬ್ರಾಂಚ್ ಆಫೀಸಿನಲ್ಲಿಯೇ ಸಮ್ಮಿಲನನಾಗುವುದು. ಈ ಹೊಸ ಆಫೀಸು ಅನುಕೂಲ ಸ್ಥಳದಲ್ಲಿದ್ದು, ವಿಶಾಲವಾಗಿ ಸೌಕರ್ಯಗಳುಳ್ಳುದಾದ್ದರಿಂದ ,ದಿನೇ ದಿನೇ ಮಲಬಾರು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ನಮ್ಮ ವಿಮಾಕಾರ್ಯದ ದೆಸೆಯಿಂದ ಈ ಹೊಸ ಕಟ್ಟಡವನ್ನು ಪಡೆಯುವ ಅವಶ್ಯಕತೆ ಕಂಡಿದ್ದು, ನಮ್ಮ ಪೊಲಿಸಿದಾರರಿಗೆ ಮತ್ತಷ್ಟು ಒಳ್ಳೆಯದಾಗಿ ನಮ್ಮ ಕಾರ್ಯಸೇವೆಯನ್ನು ಸಲಿಸಲನುಕೂಲವಾಗುವುದೆಂಬ ಭರವಸೆ ಇದೆ. ನಮ್ಮ ಆಶ್ರಯದಾತರೂ ಹಿತಚಿಂತಕರೂ ಆದಷ್ಟು ತ್ವರ್ಯದಲ್ಲಿ "ಸೌಮ್ಯಾಲಯ"ವನ್ನು ಸಂದರ್ಶಿಸಬೇಕಾಗಿ ವಿನಂತಿ. ಎಲ್ಲ ಪತ್ರವ್ಯವಹಾರವನ್ನೂ ಹಣಪಾವತಿಗಳನ್ನೂ ಚೆಕ್ಕುಗಳನ್ನೂ ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕುದು.

ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್,
ಬೊಂಬೇ ಲೈಫ್ ಆಫೀಸು,
ಪುತ್ತಿಯಾರ ಪೋಸ್ಟು (ಕಲ್ಲಿಕೋಟೆ—ಮಲಬಾರು)

ನಮ್ಮ ಕಂಪೆನಿಯೊಂದಿಗೆ ವ್ಯವಹಾರನಿರುವವರ ಸೌಕರ್ಯಕ್ಕಾಗಿ ನಮ್ಮ ಟೆಲಿಗ್ರಾಫ್ ವಿಳಾಸವನ್ನು "Kochikar—Calicut" ಎಂದು ರಿಜಿಸ್ಟರ್ ಸಹ ಮಾಡಿಸಿರುತ್ತಿವೆ.

ಸಿ. ಶಂಕರನ್ ನಾಯರ್, ಮಲಬಾರ್ ಜಿಲ್ಲಾ ಏಜಂಟ್,
ಇವರ ಸವಿನಯ ಆಮಂತ್ರಣ.

ಕೊಚ್ಚಿಕಾರ್ ಬ್ರದರ್ಸ್,
ತಾ. 1—3—1936.

ESTD:—1906.

THE CANARA BANKING CORPORATION UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed Rs. 3,50,000—0—0
Paid up Rs. 2,88,320—0—0
Reserve and other funds Rs. 3,70,694—0—0.

Fixed deposit rates up to 5% p. a.

16 5/1936.

Head Office:— UDIPI.

Branches:—1. Udipi, 2. Coondapoor, 3 Car Street—Mangalore, 4. Shimoga, 5. Madras 6. Bunder—Mangalore, 7. Mercara and 8. Virarajendrapet.

ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—ಮದ್ರಾಸು. ಪೋಸ್ಟು ಬಾಕ್ಸು ನಂಬ್ರ 182.

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಓಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. **ಪಾಲಿಸಿಯ ಶರತ್ತುಗಳು ಅತ್ಯಾಕರ್ಷಕ.**

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಏಜಂಟರು ಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಜಂಟರಾಗಲಿಚ್ಛಿಸುವವರು ಈ ವಿಳಾಸಕ್ಕೆ ಬರೆಯಬೇಕು:—ಕೆ. ಶಂಕರನಾರಾಯಣ ಕಿಣಿ, ಡಿಸ್ಟ್ರಿಕ್ ಆರ್ಗನೈಜರ್, ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್ಶುರೆನ್ಸ್ ಸೊಸೈಟಿ, ಲಿಮಿಟೆಡ್, ಮಾರುತಿ ವೀಥಿಕಾ, ಉಡುಪಿ, (ದ. ಕ).

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ್ ಲೋಕಲ್‌ಬೋರ್ಡು ಓಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, C/o ಕೂರ್ಗ್ ಕೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ, ಕೊಡಗು.

(3) ವೈ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಚಾಮರಾಜ ಟೌನ್, ಮಧ್ಯತಾಸು.

Pomona Sprayers

Here is a very useful Sprayer for Agriculturists, landholders, farmers, for spraying chemicals to the infected trees even to the height of 80 ft. from the ground level. It is strongly built so as to give a satisfactory service for many



years and is imported from Germany specially to meet the needs of Estate owners for spraying chemicals to the infected trees.

Price each Sprayer Rs. 33—0—0
Spray Controller ,, 7—8—0

BASEL MISSION BOOK DEPOT,
MANGALORE.

ಕಸಿ ಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತವೆ. ಒಂದು ಮರದಲ್ಲಿ ಸಾವಿರಗಟ್ಟಿ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ರುಚಿಕರ; ಕ್ಯಾಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣಸತ್ವ ಮತ್ತು ವಿಟಮಿನ್ ತುಂಬಾ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿಗಿಡಗಳೂ ದೊರೆಯುತ್ತವೆ.

ಕ್ರಯ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು:—

ಮಂಗಳೂರಿನಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಡ ಶೋಪ್ ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಅಂಡ್ ಕೊ., ರಥಬೀದಿಯಲ್ಲಿಯೂ, ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಮೋನ್ಸ್ಟ್ರೇಟರಲ್ಲಿಯೂ, ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
12, 9—6. **ಕಾಪು ಪೋಸ್ಟು, ದ. ಕನ್ನಡ.**

VASANTHI HARMONIUMS FOR MELODY AND DURABILITY.

ಶುದ್ಧ ಮತ್ತು ಮಂಜುಳ ಧ್ವನಿಯಿಂದ ಕೂಡಿರುವ ವಸಂತಿ ಹಾರ್ಮೋನಿಯಂನ್ನು ನಿಮ್ಮ ಗೃಹಗಳಲ್ಲಿ ಉಪಯೋಗಿಸಿ, ಸಂಗೀತಸುಖವನ್ನು ಪಡೆಯಿರಿ. ಸಿಂಗಲ್, ಡಬ್ಬಲ್, ಟ್ರಿಬ್ಲ್, ಪೋರ್ಟಬ್ಲ್, ಕಾಲಿನ ಫೋಲ್ಡಿಂಗ್ ವಗೈರೆ ಎಲ್ಲಾ ತರದ ಹಾರ್ಮೋನಿಯಂಗಳು ತಯಾರಿಸಲ್ಪಡುವುವು.

ವಸಂತಿ
ಹಾರ್ಮೋನಿಯಂ ವರ್ಕ್ಸ್,
ಹಂಪನಕಟ್ಟೆ, ಮಂಗಳೂರು.



MUSIC IS THE CHARM OF LIFE

and Vasanthi Harmoniums supply that charm.

VASANTHI HARMONIUM WORKS,
Hampankatta, Mangalore.

Specially constructed in our workshop. Well Tuned & Fitted to withstand Indian Climate.

Proprietor:—

ATTAVAR BABOO.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶಾರೀರಕ ಯೋಗ್ಯತೆಯ ರಮ್ಯವಾದ ಅನುಭವವಾಗಿದೆ. ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣುಪಾಗಿಯೂ ಇರಿಸುತ್ತದೆ.

ಇದರ ಕಾರಣವೇನೆಂದರೆ, ಬಿ. ಪಿ.. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಂಗಳೂರು.

GOVT. SOAP FACTORY, BANGALORE.

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯಮೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/-ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಅಭ್ಯಂಗಕ್ಕೆ ಪ್ರಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ವ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ೩.



Encourage Indian Concerns,

Solve Unemployment,

By Insuring or Representing

THE CENTRAL

Mutual Life Assurance Society, Ltd.

BOMBAY

(POLICY-HOLDERS' OWN)

(Incorporated in India under Co's Act 1913)

WHICH OFFERS, WHAT IS BEST IN INSURANCE

WISE MEN INSURE

With The Central Mutual Because

The Policy-holders are themselves the share-holder of the Company & all the profits go with policy-holders only

For Particulars & Agency terms please apply to:—

The Pioneer General Insurance Agency of West Coast,

Car Street, MANGALORE, South India.

OR

The Secretaries, Graham Building, Bombay No. 1.

ಈ ವಾರದ ಕಥೆ—

ಕಳವು.

ಲೇಖಕ:—ಶ್ರೀ. ವಿ. ಎನ್. ಕಾಮತ್ (ಬಾಂಧವ ಬಳಗ)

'ಹುಂ!' ಎಂದರು ರಘುನಾಥರಾಯರು. ಅವರು ತನ್ನ ಕುರ್ಚಿಯಲ್ಲಿ ಕೂತಿದ್ದು ಎದುರುಗಡೆ ಗೋಡೆಗೆ ತೂಗುತ್ತಿರುವ ಚಿತ್ರವೊಂದನ್ನು ನೋಡುತಿದ್ದರು. ಆ ಚಿತ್ರವು ಬಹು ಬೆಲೆ ಬಾಳುವ ಚಿತ್ರವಾಗಿತ್ತು. ಚಿತ್ರದಲ್ಲಿನ ರಘುನಾಥರಾಯರನ್ನು ಕಂಡರೆ ಅವರಿಗಾಗದು. ಅದು ತನ್ನಂತೆ ತೋರುವುದೇ ಇಲ್ಲ ವೆಂದು ರಾಯರ ಅಭಿಮತ. ರಾಯರು ಮಾಡಿದ ಪರೋಪ ಕಾರಗಳ ಸ್ಮಾರಕವಾಗಿ ಅವರಿಗೆ ಅದಾರೋ ಬಹುಮಾನವಾಗಿ ಇತ್ತಿದ್ದರು. ಅದನ್ನು ಬಂಗಾರದ ಕಟ್ಟಿನ ಕನ್ನಡಿಯಲ್ಲಿ ಇರಿಸಿ ದ್ದರು. ಜನರೆಲ್ಲರೂ ಆ ಚಿತ್ರದ ಅಂದವನ್ನು ತುಂಬ ಹೊಗಳು ವರಾದರೂ ರಾಯರಿಗೆ ಅದನ್ನು ಕಂಡೊಡನೆ ಮೈಯು ಕಂಪನ ಗೊಳ್ಳುವುದು.

ರಘುನಾಥರಾಯರು ನೋಡಲು ಕಿರಿಯವರಂತೆ ಕಾಣು ತಿದ್ದರಾದರೂ, ಅವರು ಇನ್ನು ನಾಲ್ವತ್ತನೆ ವರ್ಷವನ್ನು ಕಾಣು ವುದು ಈ ಜನ್ಮದಲ್ಲಿ ದುಸ್ಸಾಧ್ಯವಾಗಿತ್ತು. ನವಿಲಿನ ಹಿಂಡಿನಲ್ಲಿ ಕಾಗೆಯ ಮರಿಯೊಂದು ತಿರುಗುತ್ತಿರುವಂತೆ ಅವರ ಹಲ್ಲುಗಳೆಡೆ ಗಳಲ್ಲಿ ಕೆಲವೊಂದು ಕೃತಕ ಹಲ್ಲುಗಳಿದ್ದು, ಈಗಣ ಆಂಗ್ಲ ವೈದ್ಯ ಪಂಡಿತರ ಮಹಾತ್ಮೆಯನ್ನು ಬೆಳಗಿಸುತ್ತಿರುವಂತಿದ್ದವು. ಇಷ್ಟಿದ್ದರೂ ಅವರು ದೃಢಕಾಯಿಗಳು.

'ಹುಂ!' ಎಂದರವರು ಪುನಃ,

ಆ ಚಿತ್ರದ ಬಳಿಯಲ್ಲಿಯೇ ಮತ್ತೊಂದು ಚಿತ್ರವಿತ್ತು, ಅದು ರಾಯರ ಪತ್ನಿಯಾದ ತಿಲೋತ್ತಮಮ್ಮನ ಸ್ವಂತ ರಚನೆ ಯಾಗಿತ್ತು. ಅದನ್ನು ನೋಡಿದಲ್ಲಿ ಜನರ ಮನಸ್ಸಿನಲ್ಲಿ ಮಳೆ ಗಾಲದ ಮತ್ತು ಸೂರ್ಯಾಸ್ತಮಾನದ ಭಾವಗಳು ಒಮ್ಮೆಯೇ ಮೂಡುತಿದ್ದವು. ಹೀಗಿದ್ದುದರಿಂದಲೇ ನೋಟಕರ ಹಲ್ಲುಗಳೆಡೆ ಯಿಂದ 'ಏನೂ, ಅಷ್ಟೊಂದು ಚೆನ್ನಾಗಿ ಕಾಣೋಕಿಲ್ಲ' ಎಂಬ ವಾಕ್ಯವು ಹಲವು ಬಾರಿ ಹೊರಬಿದ್ದುದನ್ನು ಅವಳೇ ಕಿವಿಯಾರೆ ಕೇಳಿ ಸಂತಾಪಗೊಂಡಿದ್ದಳು. ಅವಳೂ ರಾಯರ ಚಿತ್ರವನ್ನು ಮೂಸಿಸಲು ಇದೇ ಮುಖ್ಯವಾದ ಕಾರಣವಾಗಿತ್ತು.

ರಾಯರು ಎದ್ದರು—ಆದರೆ ತನ್ನ ಪತ್ನಿಯ ಆಗಮನವನ್ನ ರಿತು—ಪುನಃ ಕುಳಿತು ಒಂದು ಪತ್ರಿಕೆಯನ್ನು ಓದಲಾರಂಭಿಸಿ ದರು. ತಿಲೋತ್ತಮಮ್ಮನು ಬಂದು ತಾನೂ ಒಂದು ಕುರ್ಚಿ ಯಲ್ಲಿ ಆಸೀನಳಾದಳು. ಅವಳು ಬಂದವಳೇ ಆ ಚಿತ್ರದತ್ತ ತಿರುಗಿ 'ಹುಂ!' ಎಂದಳು.

ರಾಯರು ಈ ಓಂಕಾರವನ್ನೂ ಸಂಪೂರ್ಣ ಕೇಳಿದ್ದವ ರಾದರೂ, ಕೇಳದವರಂತೆ ಮತ್ತೂ ಓದುವುದರಲ್ಲಿಯೇ ಇದ್ದರು. ಆದರೆ ಅವರ ಪತ್ನಿ ಸುಮ್ಮನಿರುವ ಹೆಂಗಸಾಗಿದ್ದಿಲ್ಲ.

'ಆ ಚಿತ್ರ ತಂದಂದಿನಿಂದ ನಂಗೆ ಸೌಖ್ಯವೆಂಬೋದಿಲ್ಲಾ—ಅದೇಕೋ ನಾ ಕಾಣೆ!' ಎಂದು ಜಪಮಾಲೆಯನ್ನು ಹಿಡಿದು ಸಹಸ್ರನಾಮವನ್ನುಚ್ಚರಿಸುವ ತಪಸ್ವಿನಿಯಂತೆ ಮಾತುಗಳನ್ನು ರಾಗದಿಂದ ಸರಾಗವಾಗಿ ಹೇಳಿಬಿಟ್ಟಳು.

'ಹುಂ,' ಎಂಬ ಏಕ ಶಬ್ದವೊಂದು ಪತ್ರಿಕೆಯತ್ತಣಿಂದ ಹೊರಟು, ಕೋಣೆಯನ್ನೆಲ್ಲಾ ಸುತ್ತಿ ಬಳಲಿ ಎತ್ತಲೋ ಮಾಯ ವಾಗಿಬಿಟ್ಟಿತು.

'ಅದೊಂದಪಶಕ್ನುದಂತಾಗಿರೋದಲ್ಲಾ!' ಎಂದು ಕೊಂಚ ಅವಮಾನಿತಳಾದ ಅವಳು ನುಡಿದಳು.

'ಹುಂ.' ಏಕಾಕ್ಷರ ಪದವೊಂದು ಹಾರ್ಮೋನಿಯಂ ಪೆಟ್ಟಿಗೆ ಯಿಂದ ಹೊರಟ ಶಬ್ದದಂತೆ ಹೊರಟಿತು.

'ನಿನ್ನೆ ನಾನೆದ್ದವಳೇ ಅದನ್ನು ಕಂಡೇ ಕಂಡೆ. ನಿನ್ನೆ ಹಿಡೀ ದಿವ್ಸ ಹೊಟ್ಟೆ ನೋವು!'

'ಹುಂ.'

'ಅದನ್ನು ಯಾಕೆ ಸುಡೋಕಿಲ್ವೋ!'

'ಹೂಂ!'

ಪತ್ರಿಕೆಯು ರಾಯರ ಕೈಯಿಂದ ತಪ್ಪಿ, ಬಂಧನದಿಂದ ಬಿಡುಕಿದೆನೆಂದು ತಣ್ಣಗಾದ ನೆಲದ ಮೇಲೆ ವಿಕಾರವಾಗಿ ಹರಡಿ ಕೊಂಡಿತು.

'ಹೂಂ!' ಎಂಬ ನಿನಾದವು ದೊಡ್ಡ ದೊಡ್ಡ ವಜ್ರದೋಲೆ ಗಳಿಂದ ಅಲಂಕೃತವಾದ ಆಕೆಯ ಕಿವಿಗಳನ್ನು ಹೊಕ್ಕಿತು. ಅವಳು ತನ್ನ ದೃಷ್ಟಿಯನ್ನು ಅವರ ದೃಷ್ಟಿಯತ್ತಕಡೆ ನಡೆಸಿದಳು.

'ನನ್ನನ್ನೆ ಸುಡುವುದಿಲ್ಲವೇಕೆ? ನನ್ನ ಆ ಮುದ್ದು ಚಿತ್ರವನ್ನು ಕಂಡರೆ ನಿನಗೆ ಆಗುವುದಿಲ್ಲವೆಂದು ನನಗೆ ಗೊತ್ತು!' ತಾನು ಅದನ್ನು ಹಗೆಯಂತೆ ಕಾಣುತಿದ್ದರೂ, ಅದನ್ನು 'ಮುದ್ದು' ಎಂದು ಕರೆದುಬಿಟ್ಟರು.

'ನಿಮ್ಮನ್ನು ಕಂಡೆ, ನನಗಾಗುವುದಿಲ್ವೆಂದುಸುರಿದೆನೇ ನಾ....'

ಅಳುವಿನ ತಟ್ಟ ಧ್ವನಿಯು ರಾಯರ ಕಿವಿಗಳಿಗೆ ತೊಡಕು ಕೊಡಲಾರಂಭಿಸಿತು.

'ನಿನಗೆ ಅಳಬೇಕೆಂದು ಹೇಳಿದೇನೆ ನಾ?' ಎಂದರು ರಾಯರು.

'.....'

'ಆಯಿತೇ? ಇನ್ನಾದರೂ ನಿಲ್ಲಿಸು....'

* * * * *

ಮನೆಯ ಬೇರೊಂದು ಕೋಣೆ. ಹೆಂಗಸರ ವಿವಿಕ್ತ ಕೋಣೆಯೆಂದು ಹೇಳಬಹುದು. ಆದರೂ ಕುರ್ಚಿಯೊಂದರ ಮೇಲೆ ರಾಘವೇಂದ್ರನು ಕುಳಿತಿರುವನು. ಅವನ್ನು ತಿಲೋತ್ತಮಮ್ಮನ ಒಡಹುಟ್ಟಿದಾತ. ಅಂತೆಯೇ ಬುದ್ಧಿಯೂ ಅಷ್ಟೊಂದು ವಿಕಾಸವಾಗಿದ್ದಿಲ್ಲ.

ತಿಲೋತ್ತಮಮ್ಮನ ಬರವನ್ನು ಕಂಡ ರಘುವು ತಟ್ಟನೆದ್ದು 'ತಿಲೂ, ನಿನ್ನೆ ನನಗೆ ಭಾರಿ ಸ್ವಪ್ನ!' ಎಂದನು.

ಆಕೆಗೆ ಇದು ಕೇಳಲೇ ಇಲ್ಲವೆಂದು ಆಕೆಯ ನಡತೆಯಿಂದ ತಿಳಿಯುವುದು. ಅವಳು ಒಂದು ಕುರ್ಚಿಯನ್ನು ಸೆಳೆದು ರಘುವು ಕುಳಿತಿದ್ದಲ್ಲಿಗೆ ಇರಿಸಿ, ತಾನು ಕೂತು, 'ರಘು, ನಿನ್ನೊಡನೆ ಒಂದು ಮಾತು ಇದೆ, ಕೂತುಕೊ.' ಎಂದಳು.

ರಘುವು ಕೂತನು.

'ರಘು, ನಿಂಗೆ ಇಪ್ಪತ್ತು ವಯ್ಯಾಯವಾಯಿತು.'

'ಹೌದು, ಮೊನ್ನೆ ಪೂರ್ತಿಯಾಯಿತಪ್ಪೆ.'

'ನಿನ್ನಿಷ್ಟಂದ ಆಗುವಂತಹ ಕೆಲ್ಸವೊಂದು ನೀನು ಮಾಡ ಬೇಕು.'

'ನನ್ನಿಷ್ಟಂದ?'

ಬಾಲ್ಯಪ್ರಾಯದಿಂದಲೂ ಭಾಂದಸನಾದ ರಘುವಿಗೆ ಕೆಲ ಸದ ಮಾತನ್ನೆತ್ತಿದರಾಗದು.

'ಹೌದು, ನಿನ್ನಿಷ್ಟಂದ್ಲೇ ಆಗಬೇಕು. ರಘು ಮಾಡ್ತಿಯಾ ಅಂತ ಭರವಸೆಯನ್ನೊಡು.'

'ತಿಲೂ, ನಿನ್ನ ಕೆಲ್ಸ ಮಾಡೋಕೆ ನಾನು ಯಾವಾಗ್ಲೂ ಹಿಂಜರಿದಿನೆ? ಮೊನ್ನೆ ಅಲ್ವೆ ಪೇಟೆಗೆ ಹೋಗಿ ಸಾಮಾನು ತಂದದ್ದು.'

'ಹಾಗಾದ್ರೆ ಮಾಡ್ತಿಯಾ?'

'ನಿಜಾ. ನನ್ಮೇಲಿ ಒಂದು ಬೊಟ್ಟು ಬಿಸಿ ರಕ್ತ ಇದ್ರೆ ಮಾಡ್ತೀನಿ.'

'ಹಾಗೆದ್ರೆ, ಈಪತ್ತು ರಾತ್ರ್ಯೊ.....'

ಎರಡು ಮೂರು ತಿಂಗಳುಗಳಿಂದ ಕತ್ತರಿಸದೆ ಬಿಟ್ಟಿದ್ದ ಆತನ ತಲೆಕೂದಲುಗಳು ಕೊಂಚ ನೆಟ್ಟಗಾದುವು.

'ರಾತ್ರ್ಯೊ?'

'ರಾತ್ರ್ಯೊಯೆಂದೊಡ್ನೆ ಭೆದ್ರಿಬಿಟ್ಟೆಯಲ್ಲಾ. ರಘು, ಪೂರ್ಣಾ ಹೆಳ್ತಿನಿ ಕೇಳು. ನಿನ್ಭಾವಾನಾ ಚಿತ್ರಾ ಉಂಟು ಗೊತ್ತೊ? ಅದನ್ನು ಈ ದಿನಾ ರಾತ್ರೆ, ಅವ್ರು ಮಲ್ಗಿಬಿಟ್ಟಾಗಾ ತೆಗೆದು ನಮ್ಮ ಸರಕಾರಿ ಭಾವೀಲಿ ಬಿಸಾಡಿ ಬರ್ಬೇಕು. ತಿಳಿಯಿತೇನಾ ಕೆಲ್ಸ?'

'ರಾತ್ರ್ಯೊ ಚಿತ್ರಾನ ಬಾವೀಲಿ ಬಿಸಾಡಬೇಕೂ? ನನ್ನೊಡ್ನೆ ಬೇರೆ....'

'ರಘು ನಿನ್ಗೆ ಅಷ್ಟು ಭಯವೆ?'

'ಅಲ್ಲ ತಿಲೂ, ಭಾವಾನ ಕಂಡ್ರಾಗದೆ ನಿನ್ಗೆ?'

'ಹುಚ್ಚಾ! ಭಾವಾನ ಕಂಡ್ರೆ ಆಗ್ದೇನೊ! ಅವ್ರ ಆ ಚಿತ್ರಾ ಕಂಡ್ರೆ ನನಗೇನೋ ಆಗುತ್ತೆ. ತಲೆಕುಂಕುಮವಲ್ವೆ ಹೆಂಗಸ್ರ ಹೆಗ್ಗಳಿಕೆ. ಹುಚ್ಚಾನ ಹಾಗೆ ಆಡಬೇಡ. ಮಾಡ್ತಿಯೇನು?'

೨

ರಾಯರು ಆ ದಿನ ಅದೇನೋ ಅಸಮಾಧಾನದಿಂದ ಕುಳಿತಿ ದ್ದರು. ಅವರು ಆ ದಿನ ಒಬ್ಬ ಕೈದಿಯ ಮೇಲಣ ಆರೋಪಣೆ ಯನ್ನು ಉಪಾಯದಿಂದ ತೆಗೆದು, ನಿರಪರಾಧಿಯೆಂದು ಹೇಳಿ, ಆತನ ಬಿಡುಗಡೆಗೆ ಕಾರಣಭೂತರಾಗಿದ್ದರು. ಅಪಾದಿತ—ರಾಮು. ಆ ಊರಿನ ಪ್ರಸಿದ್ಧ ತುಂಟ. ಆತನನ್ನು ಹುಡುಗ ರೆಲ್ಲರೂ 'ಪೋಲಿ ರಾಮು' ಎಂದು ಹೆಸರೆತ್ತಿ ಕರೆಯುತಿದ್ದರು. ಆ ಊರಿನಲ್ಲಿ ಕಳವುಗಳು ತುಂಬ ಆಗುತಿದ್ದವು. ಆದರೆ ಕಳ್ಳರಾ ರೆಂದು ಪತ್ತೆಯಾಗಿದ್ದಿಲ್ಲ. ಆದರೆ ರಾಮುವನ್ನು ಸಂಶಯ ಬಿದ್ದ ಪೋಲೀಸರು ಕೈದುಮಾಡಿದ್ದರು. ರಾಯರು ತಮ್ಮ ಸ್ವಪ್ರಯೋ ಜನಕ್ಕಾಗಿ ಅವನನ್ನು ಜೈಲುವಾಸದಿಂದ ಕಾಪಾಡಿದರು.

ಸುಮಾರು ಆರು ಗಂಟೆಯ ಮಬ್ಬು. ರಾಯರು ತನ್ನ ಕುರ್ಚಿಯಲ್ಲಿ ತಿತಿಕ್ಷೆಯಿಲ್ಲದೆ ಕೂತಿದ್ದು ಪತ್ರಿಕೆಯ ಪುಟಗಳನ್ನು ಅತ್ತ ಇತ್ತ ಮಗುಚಿ ಹಾಕುತಿದ್ದರು. ಅವರು ಸುಮ್ಮನಿರಲಾರ ದಾದರು. ಅಷ್ಟರೊಳಗೆ ಬಾಗಿಲು ತಟ್ಟಿದ ಸದ್ದಾಯಿತು. ರಾಯರು ಬಾಗಿಲು ತೆರೆದರು. ರಾಮುವು ಒಳಹೊಕ್ಕನು.

'ಬಂದೆಯಾ ಕೊನೆಗೆ?' ಎಂದು ಸಂತುಷ್ಟಿಗೊಂಡ ರಾಯರ ಆತ್ಮವು ನುಡಿಯುತಿತ್ತೊ ಎಂಬಂತೆ—ಸೋಮವಾರ ಮನೆ ಮನೆ ತಿರುಗುವ ದಾಸರ ಶಂಖದ ನಿನಾದದಂತೆ—ದಡಬಡೆಯಲಾರಂಭಿ ಸಿತು. ರಾಯರು ಕೊನೆಗೆ ತನ್ನ ಕುರ್ಚಿಯಲ್ಲಿ ಕುಳಿತರು. ಮುಖ್ಯಾಧಿಕಾರಿಗಳ ಅಪ್ಪಣೆಯನ್ನು ಹಾರೈಸುತ್ತಿರುವ ಪೋಲೀ ಸಿನವನಂತೆ ರಾಮುವು ರಾಯರ ಕುರ್ಚಿಯ ಬಳಿ ಬಂದು ನಿಂತನು. ರಾಯರು ನೆಗಾಡಿದರು—ರಾಮುವೂ ನಕ್ಕನು.

'ಬಚಾವು ಮಾಡಿದ್ರಿ ರಾಯ್ರೆ, ನೀವ್....'

'ಅದಂತಿರಲಿ. ಈಗ ನೀನು ಮಾಡಬೇಕಾಗಿರುವ ಕಾರ್ಯ ವದೇನೆಂದು ಗೊತ್ತೆ?'

'ನಂಗ್ಹೇಗೊತ್ತೊ ಸ್ವಾಮಿ?, ಅರ್ಧ ಗಜ ದೂರ ಮಲಗಿರು ವವನೊಬ್ಬನನ್ನು ಎಬ್ಬಿಸುವನೊ ಎಂಬಂತೆ ರಾಮುವು ನುಡಿದನು.

'ಎಲಾ! ಸ್ವರ ಸ್ವಲ್ಪ ತಗ್ಗಲಿ,' ಎಂದು ಬೆಚ್ಚಿಬಿದ್ದ ರಾಯರೆಂದರು. ಅನಂತರ—'ನೀನು ಮಾಡಬೇಕಾವ ಸಂಗತಿ ಯಿಷ್ಟೆ. ಈ ದಿನ ರಾತ್ರಿ ಸಾಧಾರಣ ಒಂದು ಗಂಟೆ ಸಮಯಕ್ಕೆ ಬಂದು ಅಲ್ಲಿರುವ-ಆ ಚಿತ್ರವನ್ನೆ ಜಾರಿಸಿ ಓಡಿ ಹೋಗಬೇಕು. ಅಷ್ಟೆ,' ಎಂದರು.

ರಾಮುವಿನ ದೃಷ್ಟಿಯು ಚಿತ್ರದತ್ತಕಡೆ ಹರಿಯಿತು. ಅದರ ಚವುಕಟ್ಟಿನ ಹೊಳಪನ್ನು ಕಂಡ ಆತನಿಗೆ ಚಿತ್ರವನ್ನು ಕಾಣಬೇಕಾದ ಅವಶ್ಯವು ತೋರಲೇ ಇಲ್ಲ. ಬಂಗಾರದ ಕಟ್ಟು! ಅದಕ್ಕೆ ಕ್ರಯು ವೆಷ್ಟು ಬರಬಹುದೆಂದು ಆತನ ವಚನೋಕ್ತ ಸಂಖ್ಯಾನವಾಯಿತ.

'ಆದರೆ ಒಂದಿರುವುದು....'

ರಾಮುವಿನ ಕಣ್ಣುಗುಡ್ಡುಗಳು ಕುಣಿಕೆಯಿಂದ ಹೊಂ ಬಂದಿದ್ದು, ಆ ಕಟ್ಟಿನ ಸ್ವರ್ಣರಜಸ್ಸನ್ನೆ ಸ್ವೀಕರಿಸುತಿದ್ದುವು.

'ಆ ಚವುಕಟ್ಟನ್ನು ಬಿಟ್ಟು ಚಿತ್ರವನ್ನೆ ಹರಿದುಬಿಡಬೇಕು. ದೂರ ತೆಗೆದುಕೊಂಡು ಹೋಗಿ ಅದನ್ನು ಸುಡಬೇಕು.'

ಬಿಸಿಬಿಸಿ ಲೋಹವನ್ನು ಕಿವಿಯೊಳಗೆ ಸುರಿವಂತಾಯಿತು ರಾಮುವಿಗೆ.

'ಏನೇಂದಿರೀ?'

'ಚವುಕಟ್ಟು ನನಗೆ ಬೇಕು. ಆ ಚಿತ್ರವನ್ನು ನೀನು ರಾತ್ರೆ ಹರಿದು ತೆಗೆದು ಸುಡಬೇಕು, ಮತ್ತು ನಾಳೆ ಮುಂಜಾನೆ ಬಂದು ಬಹುಮಾನವನ್ನು ಪಡೆಯಬೇಕು ತಿಳಿಯಿತೆ?' ಎಂದು ನಗುತ್ತ ರಾಯರು ನುಡಿದರು.

'ಹುಂ,' ಎಂದು ರಾಮು ಹೊರಡಲುದ್ಯುಕ್ತನಾದನು. ಬಾಗಿಲನ್ನು ತೆರೆದು ಹೊರಹೊರಟನು. ಬಾಗಿಲು ದೊಡ್ಡ ಶಬ್ದ ದಿಂದ ಮುಚ್ಚಲ್ಪಟ್ಟಿತು.

ಒಂದೆರಡು ನಿಮಿಷಗಳೊಳಗೆ ರಾಮು ಪುನಃ ಬಂದನು.

'ರಾಯ್ರೆ, ಅದಾವ ಧಾರಿಯಿಂದ ಭರಬೇಕೂ? ಅದನ್ನು ಹೇಳ್ಲಿಲ್ಲವಲ್ಲಾ.'

'ನನ್ನ ಓದುವ ಕೋಣೆಯ ಮೂರನೆ ಕಿಟಿಕಿ ಬಾಗಿಲನ್ನು ತೆರೆಯುವೆನು....'

* * * * *

ಆ ರಾತ್ರೆ ರಾಯರ ಸವಾರಿ ಬೇಗ ಹಾಸಿಗೆಯನ್ನು ಸೇರಿತು. ತಾನು ಬೆಳಕನ್ನೀಯುವೆನೆಂದು ಬಲು ಹೆಮ್ಮೆಯಿಂದ ಎಂದೂ ಹಿಗ್ಗುತಿದ್ದ ಅವರ ಕೋಣೆಯಲ್ಲಿನ ದೀಪದ ದರ್ಪವು ಅಂದು ತಗ್ಗಿತು—ಆ ದಿನ ಅದೂ ಕತ್ತಲಲ್ಲಿ ತೂಗಾಡಬೇಕಾ ಯಿತು. ರಾಯರಿಗೆ ನಿದ್ದೆ ಹತ್ತುವುದುಂಟೆ-(ಅಥವಾ ನಮ್ಮ ಈಗಣ ಲೇಖಕರು ನುಡಿಯುವಂತೆ, ನಿದ್ರಾದೇವಿಯ ಜೋಗುಳ ಹಾಡಿನ ಸಂತಸವನ್ನು ಪಡೆಯಲು ರಾಯರು ಆ ದಿನ ಸಿದ್ಧ ರಾಗಿದ್ದಿಲ್ಲ) ನಿದ್ರಾದೇವಿಗೂ ರಾಯರಿಗೂ ಆ ರಾತ್ರೆಗೆ ಮಾತ್ರ ಹಂಗಾಮಿ ಜಗಳವಾಗಿತ್ತು.

(ಉಸಿರು ಪುಟಕ್ಕೆ ಮುಂದರಿಯುವುದು)

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP
YOU TO SAVE MONEY SENSIBLY.

THE PALAI CENTRAL BANK, LTD,
(INCORPORATED IN TRAVANCORE.)
BUNDER ROAD, MANGALORE.
London Agents— Lloyds Bank, Ltd.
New York— National City Bank of New York.

ವರ್ಷಾಂತರಗಳ ಪ್ರಯತ್ನವೂ, ಸಾಹಸವೂ ತಾಜಾ ವಜ್ರಗಳ ಬದಲು ಈ ಯೋಗ್ಯ ಸಾಧನವನ್ನು ಕಲ್ಪಿಸಿದೆ.

MODERN DIAMONDS

SUBSTITUTE FOR REAL DIAMONDS

ಅದರ ಅದ್ವಿತೀಯವಾದ ಸೌಂದರ್ಯವೂ ಕಣ್ಣನ್ನು ಕೊರೈಸುವ ಬಿಳಿ ಪ್ರಕಾಶವೂ ಕೂಡಲೇ ಚಿತ್ತವನ್ನು ಆಕರ್ಷಿಸುತ್ತದೆ.

ಶ್ರೀಮತಿ ಸರೋಜಿನಿದೇವಿಯವರ ಅಭಿಪ್ರಾಯ:

"ಮೊಡರ್ನ್ ಡಾಯಮಂಡ್ಸ್"ಗಳು ವೈಜ್ಞಾನಿಕ ಚಾತುರ್ಯದ ಬಹಳ ನಾಜೂಕಾದ ಮಾದರಿಗಳಾಗಿವೆ... ಇವುಗಳಲ್ಲಿ ಕಣ್ಣುಗಳನ್ನು ಸೆಳೆಯುವ ಪ್ರಕಾಶದ ಶುಭ್ರತೆಯಿದೆ. ಎಲ್ಲಿ ಹೆಂಗಸರು ವಜ್ರಗಳನ್ನು ಧಾರಾಳವಾಗಿ ಉಪಯೋಗಿಸುವರೋ ಮುಖ್ಯವಾಗಿ ಆ ದಕ್ಷಿಣದಲ್ಲಿ ಕಲಾ ವಿಜಯವಾದ ಈ "ಮೊಡರ್ನ್ ಡಾಯಮಂಡ್ಸ್"ಗಳು ವಿಸ್ತಾರವಾಗಿಯೂ, ಸುಲಭವಾಗಿಯೂ ಮಾರಿಹೋಗುವದೆಂದು ನಾನು ನಂಬುತ್ತೇನೆ.

ನೀವು ಅಪೇಕ್ಷಿಸಿದಲ್ಲಿ ನಮ್ಮ ಸಚಿತ್ರ ಮಾಹಿತಿ ಪತ್ರವನ್ನೂ ಪ್ರಶಂಸಾ ಪತ್ರಗಳ ಪ್ರತಿಯನ್ನೂ ಅತ್ಯಾನಂದದಿಂದ ಕಳುಹಿಸಿಕೊಡುವೆವು.

C. C. Acharyulu & Son,

Jewellers for over a century,

63, Ponnappa Chetty Street,

Post Box No. 543, Park Town, Madras.

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ **"ಕಾಫಿ ಕಲ್ಸರ್"** ಶೀರೆಗಳನ್ನೇ ಉಪಯೋಗಿಸಿರಿ!

ಕಡಿಮೆ ಬೆಲೆಗೆ-ತರತರದ ಬಣ್ಣದ-ನಮೂನೆವಾರು ಅಂಚಿನ-ಶೀರೆಗಳು!

ಒಮ್ಮೆ ಬಂದು ನಮ್ಮ ಆಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಪೈ ಬ್ರದರ್ಸ್—ಉಡುಪಿ.

ದಿ ಕರ್ನಾಟಕ ಡ್ರಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್ ಏಜಂಟರು:—**ಸೂಜಿಕರ್ಕರ್ ಬ್ರದರ್ಸ್—ಮಂಗಳೂರು.**



ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪—೦—೦
೨೫ ,, ಯುರೋಪ ,, ,, ೫—೦—೦
೨೫ ,, ಹೂವಿನ ಬೀಜಗಳು ೫—೦—೦

ಗಿಡಗಳು.

೧೨ ಜಾತಿ ಹೂವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦—೦—೦

ನಿಂಬೆ, ಕೊಡಗು ಕಿತ್ತಳೆ, ಚೇಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೇವು, ಪಿಚ್ಚಿಸ್, ಅಂಜೂರ, ಪ್ರಾಪ್ಸಿ ಗಿಡಗಳು ಡಜನ್ ೧ಕ್ಕೆ ೯—೦—೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨—೦—೦

ಪಾರಿಜಾತ, ನಂದಿವರ್ಧನ, ದಾಸಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬—೦—೦

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,

ಇಂಟರ್‌ನ್ಯಾಷನಲ್ ಸೀಡ್ ಕಂಪೆನಿ,

ಲಾಲ್‌ಬಾಗ್ ಫೋಟ್ಸ್ ರೋಡ್,

ಬೆಂಗಳೂರು ಸಿಟಿ.

ಅಶೋಕ್

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಆದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾತಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕ್ಲಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಜೋದ್ಲಾಲ್, ಕಟ್ಟಿಯ ಸಿಮೆಂಟ್ ಮತ್ತೂ ಇಂಡಸ್ಟ್ರೀಯಲ್ ವರ್ಕ್ಸ್ ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ವಿಕ್ಟುವೆರಿಯಾದ ಶ್ರೀ. ಜಿ. ಎಸ್. ಮಾಡಕೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮುಚ್ಚಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ತೂಗುಸಿಳ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚುತಿರಬೇಕೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಳವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,

9, Forbes Street, Fort, BOMBAY. **Raikhad, AHMEDABAD.**

ಅಥವಾ ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

ಲೋಧ್ರ

ಸ್ತ್ರೀಯರಿಗೆ ಆರೋಗ್ಯಭಾಗ್ಯವನ್ನು ಪ್ರಸಾದಿಸುವ 'ಅವ್ಯರ್ಥಮಣಿ'.

ಕೇಸರೀ ಕುಟೀರಂ, ಎಗ್ಮೋರು, ಮದ್ರಾಸ್.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವೆ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ

ದ್ರಾಕ್ಷಾಮೃತ

ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರಗಳಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕೆಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರ್ತುಪು ಬೇಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವೃಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ಸಪುಂಸಕತ್ವ ಇದ್ದರೆ ಅದು ಹೋಗಿ ಪುಸಯಸ್ಸನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧವ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರೆ ತಿಳಿದೀತು.

ಪ್ರಮಾಣ:—ಸಸಿಕಸಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧೫ ರೂ. ೩.ಬಾ. ಬೆಲೆ ೪೫ ರೂ.
೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಪ್ಪ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು-ಮಿಜಾರಕರ ಬ್ರದರ್ಸ್, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್,
ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ.
ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ-ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊರ್ಸ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

ಛತ್ರಪತಿಯ ಅಭ್ಯುದಯ.

(ಲೇಖಕ:—ಶ್ರೀ. ಐರೋಡಿ ಯಜ್ಞನಾರಾಯಣ ಉಡುಪ, ಮುಖ್ಯ ಉಪಾಧ್ಯಾಯ, ಕೊರಗಿ ಸ್ಕೂಲ್, ಕುಂದಾಪುರ)

ಭಾರತಭೂಮಿಯಲ್ಲಿ ಹರಿಯುವ ನದಿಗಳೆಲ್ಲಾ ಪುಣ್ಯವಾಹಿನಿಗಳೆಂದೂ, ಇಲ್ಲಿಯ ಪ್ರಕೃತಿಮಾತೆಯ ವಿಹಾರಭೂಮಿಗಳೆಲ್ಲಾ ನಂದನವನಗಳೆಂದೂ, ಸಸ್ಯಶ್ಯಾಮಲೆಯಾದ ತಾಯಿಯ ಪುತ್ರರೆಲ್ಲಾ ವೀರಾಗ್ರಣಿಗಳೆಂದೂ, ಭೂಖಂಡಗಳಲ್ಲೆಲ್ಲಾ ಭರತಖಂಡವೇ ಮೇಲಾದುದೆಂದೂ, ಹಾಡಿ-ಹಾರಿ, ಹಿಗ್ಗಿ ಹೆದಿನಾರಾದ ಕವಿ-ಲೇಖಕ-ವಾಗ್ಮಿಗಳು ನಮ್ಮಲ್ಲಿ ಹಲವರಿದ್ದರು. ಇದು ಪೊಳ್ಳು ನುಡಿಗಳಲ್ಲ; ಅಕ್ಷರಶಃ ಸತ್ಯ. ಸನಾತನ ಭಾರತೀಯರಿಗೆ ಸ್ವದೇಶ-ಸ್ವಧರ್ಮ-ಸ್ವಭಾಷೆ-ಸ್ವಜನರಲ್ಲಿ ಅಖಂಡ ಪ್ರೇಮವಿದ್ದಿತ್ತು. ಇದರ ಜೊತೆಗೆ ಉಗ್ರಬ್ರಹ್ಮಚರ್ಯಪಾಲನವನ್ನು ಮಾಡಿ ಗೃಹಸ್ಥಧರ್ಮವನ್ನು ಕೈಕೊಳ್ಳುತ್ತಿದ್ದುದರಿಂದ, ಗೃಹಸ್ಥಾಶ್ರಮರಥದ ಗಾಲಿಗಳಾದ ಪತಿಪತ್ನಿಯರು ಸಂಸಾರ ಸುಖದುಃಖಗಳಿಗೆ ಹಿಗ್ಗಿತಗ್ಗದೆ—ಜೀವನದ ಮುಗ್ಗಟ್ಟುಗಳಿಗೆ ಬೆದರದೆ—ಜೀವನದಲ್ಲೊಂದು ಗುರಿಯನ್ನಿಟ್ಟುಕೊಂಡು ಸಾಧನೆಯನ್ನು ಮಾಡಿ ಸಿದ್ಧಿಯನ್ನು ಪಡೆದು, ಅದರೊಂದಿಗೆ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಮಡಿಲಲ್ಲಿ ಹಾಕಿಕೊಳ್ಳುತ್ತಿದ್ದರು. ಆ ಕಾಲದ ರಾಜರ ಭುಜಗಳಲ್ಲಿ ವೀರಶ್ರೀಯೂ, ಬ್ರಾಹ್ಮಣರ ಮುಖದಲ್ಲಿ ತಪಶ್ರೀಯೂ ಸರಿಮಿಗಿಲಾಗಿ ರಾಜಿಸುತ್ತಿದ್ದುದರಿಂದ, ಉಳಿದ ಎರಡು ವರ್ಣಗಳವರೂ, ಬ್ರಾಹ್ಮಣಕ್ಷತ್ರಿಯರನ್ನು ಅನುಸರಿಸಿ ಅವರ ಕಾರ್ಯಗಳಿಗೆ ಅರ್ಪಿತಪ್ರಾಣರಾಗುತ್ತಿದ್ದರು. ಇದರಿಂದ ದೇಶದಲ್ಲಿ ಮೇಲುಕೀಳುಗಳ ಗೊಂದಲವಿಲ್ಲದೆ ಶಾಂತತೆ ನೆಲಸಿತ್ತು. 'ರಾಜಾ ಪ್ರತ್ಯಕ್ಷ ದೇವತಾ' ಎಂಬುದು ಅಂದಿನ ಶಾಂತಿಯ ತಣ್ಣೆಳಲಿನಲ್ಲಿ ಸುಖದ ಸವಿಯೂಟವನ್ನು ಉಣ್ಣುತ್ತಿದ್ದ ಪ್ರಜೆಗಳ ಕಂಠದಿಂದ ಹೊರಹೊಮ್ಮುತ್ತಿದ್ದ ನಲ್ನುಡಿಯಾಗಿತ್ತು. ಆ ಸವಿಗನಸಿನ ಕಾಲವು ಸಿಡಿದೊಡೆದು ಹೋಯಿತು; ಕಾಲಚಕ್ರವು ಒಂದು ಸುತ್ತು ಸರ್ರನೆ ಉರುಳಿತು. ಸತ್ಯಧರ್ಮಗಳು ಕಾಲನ ಕರಾಳ ಗರ್ಭದಲ್ಲಿ ಅಡಗಿ ಮಾಯವಾಗಿ ಹೋಯಿತು. ಇಂದ್ರಿಯನಿಗ್ರಹವು ನಪುಂಸಕರ ಮಂತ್ರವಾಯಿತು. ಪ್ರತಿಯೊಂದು ವ್ಯಕ್ತಿಯೂ ಸ್ವಾರ್ಥಕ್ಕಾಗಿ ಹೆಣಗತೊಡಗಿತು. ಆ ಸಮಯವನ್ನೇ ನಿರೀಕ್ಷಿಸುತ್ತಿದ್ದ ಮುಸಲ್ಮಾನರು ಭರತಖಂಡವನ್ನು ಹೊಕ್ಕು, ಭರತಮಾತೆಯ ಮಂಗಳಸೂತ್ರಕ್ಕೇ ಕೈಹಾಕಿ ಹರಿದು ಚೆಲ್ಲತೊಡಗಿದರು. ಮಾತೆಯು ಅಳುಮೋರೆಯಿಂದ 'ರಕ್ಷಿಸಿರಿ, ರಕ್ಷಿಸಿರಿ' ಎಂದು ಬೊಬ್ಬಿಡಲಾರಂಭಿಸಿದಳು. ಕೇಳುವವರಾರು? ಮಕ್ಕಳು ತಮ್ಮ ಸಂಸಾರದ ಚಿಕ್ಕಣಗಳ ಹಿತಕ್ಕಾಗಿ ನೆರೆಯವರ ಕತ್ತನ್ನು ಹಿಸುಕಿ, ತಮ್ಮ ಡೊಳ್ಳನ್ನು ಬೆಳೆಸಿಕೊಳ್ಳುತ್ತಿರಲು, ಸನಾತನಮಾತೆಯ ಆರ್ತನಾದವನ್ನು ಕೇಳುವವರಾರು? ಅವಳ ಹೃದಯದ ದುಃಖಾನಲವನ್ನು ನೊಂದಿಸಿ ಶಾಂತಮಾಡುವವರಾರು?

ಕ್ರಿ. ಶ. ೧೧೯೫ರಲ್ಲಿ ಪೃಥ್ವೀರಾಜನು ಸ್ತ್ರೀನಿಮಿತ್ತವಾಗಿಯೂ, ಜಯಚಂದನು ಮಾತ್ಸರ್ಯದ ಹೊಡೆತಗಳಿಂದಲೂ ಭಾರತಮಾತೆಯನ್ನು ಸ್ಥಾನೇಶ್ವರ ಕ್ಷೇತ್ರದಲ್ಲಿ ಮುಸಲ್ಮಾನರಿಗೆ ಕೊಟ್ಟುಬಿಟ್ಟರು. ಅಂದಿನಿಂದ ಭಾರತಮಾತೆಯು ಅಸ್ವತಂತ್ರಳಾದಳು. ಕಂಡಕಂಡವರು ಮಾತೆಯನ್ನು ಅಪಮಾನಪಡಿಸುತ್ತ ಹರಿದು ಹಂಚಿಕೊಳ್ಳುತ್ತಿರಲು, ನಿರಾಧಾರೆಯಾದ ತಾಯಿಯು ಹಣೆಚಚ್ಚಿಕೊಳ್ಳುತ್ತಾ ಮೂಲೆಮುಗ್ಗಾಗಿ ಮುದುರಬೇಕಾಯಿತು. ತಾಯೊ! ಭುವನೇಶ್ವರೀ! ನನ್ನ ಜನ್ಮಭೂಮಿಯನ್ನು ಪರಕೀಯರ ಪದತಲದಲ್ಲೇಕೆ ಕೆಡೆದೆ?

ಮುಸಲ್ಮಾನರ ಧಾಳಿಗಳ ಮಧ್ಯದಲ್ಲೇ ಹಲವು ಸ್ವತಂತ್ರ ರಾಜ್ಯಗಳು ತಲೆಯೆತ್ತಿ, ಪ್ರದೇಶೀಯರ ಧಾಳಿಯ ಪ್ರವಾಹಕ್ಕೆ ದಂಡೆಯನ್ನು ಒಡ್ಡಲು ಯತ್ನಿಸಿದುವು. ಈ ಪ್ರಯತ್ನಕ್ಕೆ ಔತ್ತರೇಯರೂ ದಾಕ್ಷಿಣಾತ್ಯರೂ ಸಮಭಾಗಿಗಳು; ಎರಡು ಬಣದವರೂ ಹಾಸುಹೊಕ್ಕಾಗಿ ಯತ್ನಿಸಿದವರು.

ಉತ್ತರದಲ್ಲಿ ಮುಸಲ್ಮಾನರು ಜನರ ರಕ್ತವನ್ನು ಹೀರಿ ಹಿಪ್ಪೆಮಾಡಿ ದಕ್ಷಿಣಕ್ಕೆ ನುಗ್ಗತೊಡಗಿದರು. ಈ ಸಮಯದಲ್ಲೇ ಮಹರ್ಷಿ ವಿದ್ಯಾರಣ್ಯರ ಜನ್ಮವಾಗಿ ಮುಸಲ್ಮಾನರಿಂದ ಕಂಗಾಲಾಗಿದ್ದ ಜನ್ಮಭೂಮಿಯನ್ನು ಕಿತ್ತು ದೇಶೀಯರ ಕೈಗೇ ಕೊಟ್ಟರು. ಅವರು ಪುಕ್ಕರ ಎದೆಯಲ್ಲಿ ವೀರರಸವನ್ನೂ, ಬ್ರಾಹ್ಮಣರ ಎದೆಯಲ್ಲಿ ವೇದರಸವನ್ನೂ ಹಿಂಡಿ, ಮುಸಲ್ಮಾನರ ಎದುರು ಸಡ್ಡು ಹೊಡೆದು ನಿಲ್ಲುವ ಶಕ್ತಿಯನ್ನು ಧಾರೆಯೆರೆದರು. ಅಂಥವರ ಪುಣ್ಯ-ಶಕ್ತಿಗಳು ೧೫೬೫ನೇ ಇಸವಿಯಲ್ಲಿ, ತಾಳೀಕೋಟೆಯ ಕಾಳಗದ ಕಣದಲ್ಲಿ ಬಯಲಾಯಿತು. ಪುನಃ ದೇಶದಲ್ಲಿ ಗದ್ದಲ; ತಳಮಳ. ಬಡವರ ಗೋಳಾಟ; ಶ್ರೀಮಂತರ ಚೆಲ್ಲಾಟ. ಸಜ್ಜನರು ಗಿರಿಗುಹೆಗಳಲ್ಲಿ ಶ್ವಾಸಧಾರಣೆಮಾಡಿಕೊಂಡು ಲೋಕಮಾತೆಯ ಆರಾಧನೆಗೆ ಆರಂಭಿಸಿದರು. ಎಷ್ಟಾದರೂ ತಾಯಿಯಲ್ಲವೇ? ಮಕ್ಕಳ ಮೇಲಿನ ಮಮತೆಯು ಸ್ರವಿಸಿತು ಎಂಬುದಕ್ಕೆ ದೃಷ್ಟಾಂತವಾಗಿ ಶಾ. ಶಕ ೧೫೯೪ (ಕ್ರಿ. ಶ. ೧೬೭೭)ನೇ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ಬಿದಿಗೆ ಗುರುವಾರದಲ್ಲಿ ತನ್ನ ಅಂಶಿಕನೊಬ್ಬನನ್ನು ಮಹಾರಾಷ್ಟ್ರಕ್ಕೆ ದಾನಮಾಡಿದಳು. ಇವನೇ ಛತ್ರಪತಿ ಶಿವಾಜಿ!

ಶಿವಾಜಿಯು ಗಾಳಿ ಬಂದತ್ತ ಕೊಡೆ ಹಿಡಿಯುವ ಷಹಾಜಿಯ ಮಗನಾಗಿದ್ದನು. ಷಹಾಜಿಯು ದೇವಗಿರಿಯ ಅರಸು ಮನೆತನದ ಜಾದವವಂಶೋದ್ಭವಳಾದ ಜೀಜಾಬಾಯಿಯನ್ನು ಮದುವೆಯಾದನು. ಈಕೆಯು ಮುಸಲ್ಮಾನರ ಹುಟ್ಟುಹಗೆಯಾಗಿದ್ದುದರಿಂದ, ತನ್ನ ಪತಿಗೆ ವೈಜ್ಞಪುರಾಜನ ಚಾಕರಿಯನ್ನು ಬಿಡಲು ಒತ್ತಾಯಮಾಡುತ್ತಿದ್ದಳು. ಷಹಾಜಿಯು ಹೆಂಡತಿಯ ಮಾತಿಗೆ ಸೊಪ್ಪುಹಾಕುತ್ತಿರಲಿಲ್ಲ. ಹೀಗೆ ಇವರಿಬ್ಬರ ವೈಮನಸ್ಯದ ಪರಿಣಾಮವಾಗಿ ಕ್ರಿ. ಶ. ೧೬೧೦ರಲ್ಲಿ ಷಹಾಜಿಯು ತುಕಾಬಾಯಿಯನ್ನು ಲಗ್ನವಾದನು.

ಜೀಜಾವು ವೀರನಾರಿ. ಅವಳು ಸ್ವಧರ್ಮಕ್ಕೆ—ಸ್ವದೇಶಕ್ಕೆ ಮುಸಲ್ಮಾನರಿಂದಾಗುವ ಉಪಹತಿಗಾಗಿ ನೊಂದುಬೆಂದು ದೇವರೊಡನೆ ದುರ್ಜನರ ಶಾಸ್ತಿಗಾಗಿ ಶಕ್ತಿಯನ್ನು ಬೇಡುತ್ತಿದ್ದಳು. ಷಹಾಜಿಗೆ ಜೀಜಾಬಾಯಿಯ ಈ ಮನೋಧರ್ಮ ಸರಿಬಾರದೆ ಬಾಲಕೃಷ್ಣ ಪಂತ ಹನುಮಂತೇ, ಶ್ಯಾಮರಾವ್ ನೀಲಕಂಠ, ರಘುನಾಥ ಬಲ್ಲಾಳ ಕೊರಡೇ, ಸೋನೋ ಪಂತ ದಬೀರ ಎಂಬ ನಾಲ್ವರು ಸೇನಾಪತಿಗಳೊಂದಿಗೆ ಜೀಜಾಬಾಯಿಯನ್ನು ಶಿವನೇರಿ ದುರ್ಗಕ್ಕೆ ಕಳುಹಿಸಿದನು. ಮುಂದೆ ಜೀಜಾವು ಕ್ರಿ. ಶ. ೧೬೩೭ರಲ್ಲಿ ಮತ್ತು ೧೬೪೪ರಲ್ಲಿ ಪತಿಸಾನ್ನಿಧ್ಯವನ್ನು ಸೇರಿ, ಕೆಲವೇ ದಿನಗಳಲ್ಲಿ ಪುನಃ ಅಗಲುವಂತಾಯಿತು. ಕಾರಣ, ಒಬ್ಬೊಬ್ಬ ಚರಿತ್ರಕಾರರು ಒಂದೊಂದು ವಿಧವಾಗಿ ಹೇಳಿದರೂ, ನಿರ್ಬಿಡೆಯ ಸ್ವಭಾವದ ಹೆಣ್ಣುಮಗಳ ಶಿಸ್ತು ಷಹಾಜಿಗೆ ಮೆಚ್ಚುಗೆಯಾಗುತ್ತಿರಲಿಲ್ಲವೆಂಬುದೇ ಪ್ರಬಲ ಕಾರಣವಿರಬೇಕು; ಅಲ್ಲದೆ ಷಹಾಜಿಯು ಯಾವಾಗಲೂ ಯುದ್ಧರಂಗದಲ್ಲೇ ಗುಡ್ಡುಗಾಡುತ್ತಿರಬೇಕಾಗಿದ್ದುದರಿಂದ ಇಬ್ಬರನ್ನು ಕಟ್ಟಿಕೊಂಡು ಅಲೆಯುವುದು ಅವನಿಗೆ ಕ್ಷೇಮವಾಗಿಯೂ ಕಂಡಿರಲಾರದು. ಜೀಜಾಬಾಯಿಯು ಶಿವನೇರಿ ದುರ್ಗದಲ್ಲಿದ್ದರೂ ಪತಿಯ ಧ್ಯಾನಾಸಕ್ತೆಯಾಗಿದ್ದು, ಮಹಾನುಭಾವೆ ಶಿವಾಯಿಯನ್ನು ಆರಾಧಿಸುತ್ತಿದ್ದಳು. ಪತಿಗೆ ಯುದ್ಧರಂಗದಲ್ಲಿ ಕ್ಷೇಮವನ್ನು ನೀಡೆಂದೂ, ಸ್ವಧರ್ಮ-ಸ್ವದೇಶಸಂರಕ್ಷಕನಾದೊಬ್ಬ ಪುತ್ರನನ್ನು ದಾನವಾಡೆಂದೂ ತಾಯಿಯನ್ನು ಹಗಲಿರುಳು ಬೇಡುವಳು. ಮಾತೆ ಶಿವಾಯಿಯು ಜೀಜಾಬಾಯಿಯ ಹಂಬಲವನ್ನು ಪೂರೈಸಿದಳು. ಜೀಜಾಬಾಯಿಯೂ ಶಿವಾಯಿಯ ಅನುಗ್ರಹದಿಂದ ಹುಟ್ಟಿದ ಮಗನಿಗೆ ಶಿವಾಜಿ ಎಂದೇ ನಾಮಕರಣಮಾಡಿದಳು. ಶಿವಾಜಿಯು ತನ್ನ ಬಾಲ್ಯಕಾಲದ ಹತ್ತು ವರ್ಷಗಳನ್ನು ಶಿವನೇರಿ ದುರ್ಗದಲ್ಲೇ ಕಳೆದನು.

ಷಹಾಜಿಯು ಕರ್ನಾಟಕದ ದಂಡಯಾತ್ರೆಯಲ್ಲಿ, ವಿಜಯಮಾಲೆಯನ್ನು ಕೊರಳಿಗಿಕ್ಕಿಕೊಂಡು ಬಂದೊಡನೆಯೇ ಮಗನ ಮದುವೆಯ ಪ್ರಸ್ತಾಪವನ್ನೆತ್ತಿದನು. ಶಿವಾಜಿಯು, ಮದುವೆಯು ಪೂನೆಯಲ್ಲಾಗುವುದಾದರೆ ತನ್ನ ಒಪ್ಪಿಗೆ ಇದೆಯೆಂದೂ ತಿಳಿಸಿದನು. ಷಹಾಜಿಗೆ, ಬಿಜಾಪುರದಲ್ಲೇ ಮದುವೆಯ ಸಮಾರಂಭವನ್ನು ನಡೆಸುವ ಮನಸ್ಸಿದ್ದರೂ, ಶಿವಾಜಿಯ ಹಟವನ್ನು ಬಲ್ಲವನಾದುದರಿಂದ ಕ್ರಿ. ಶ. ೧೬೪೦ರಲ್ಲಿ ಪೂನೆಯಲ್ಲೇ ನಿಂಬಳಕರ ವಂಶದ ಸಯಿಬಾಯಿಯನ್ನೂ ಕೊಟ್ಟು ಮದುವೆ ಮಾಡಿದನು. ಸುಲ್ತಾನನಿಗೆ ಈ ಮದುವೆಯಿಂದ ಅಸಮಾಧಾನವಾಯಿತೆಂದು ತಿಳಿದು ಸುಲ್ತಾನನ ಸನ್ನಿಧಿಯಲ್ಲೇ ಪುನಃ ಶಿವಾಜಿಗೆ ಸೊಯಿರಾಬಾಯಿಯನ್ನು ಕೊಟ್ಟು ಮದುವೆ ಮಾಡಿದನು. ಹೀಗೆ ೧೬ ವರ್ಷಗಳೊಳಗೇ ಇಬ್ಬರು ಹೆಂಡಿರ ಗಂಡನಾದರೂ ಬ್ರಹ್ಮಚರ್ಯಕ್ಕೆ ತಿಲಮಾತ್ರ ಭಂಗವನ್ನು ತಂದುಕೊಳ್ಳಲಿಲ್ಲ. ಆಗಿನ ಅವನ ಪ್ರಸನ್ನ ಮುಖಮುದ್ರೆ, ಪರರ ಅಂತರ್ಯವನ್ನು ತಿಳಿಯುವ ಕಣ್ಣುಗಳು, ಕಬ್ಬಿಣದ ಲಾಳ ಮುಂಡಿಗೆಯಂತಿರುವ ಕೈಕಾಲುಗಳು, ಪ್ರಶಸ್ತವಾದ ಎದೆ, ತುಂಬಿದ ಕೊರಳು ಜನರನ್ನು ಮೋಹಿಸುತ್ತಿದ್ದುವು. ಇವನು ಹೆಂಡಿರೊಂದಿಗೆ ಹರಟೆಹೊಡೆಯುತ್ತಾ ಒಂದು ನಿಮಿಷವನ್ನಾದರೂ ಕಳೆದಿರುವನೆಂದು ಯಾವ ಚರಿತ್ರಕಾರನೂ ಉಲ್ಲೇಖಿಸಿಲ್ಲ.

ಚಿಕ್ಕಂದಿನಲ್ಲಿ ಶಿವಾಜಿಯ ಶಿಕ್ಷಣವು ಜೀಜಾಬಾಯಿ ಮತ್ತು ದಾದಾಜಿ ಕೊಂಡದೇವನೆಂಬ ಬ್ರಾಹ್ಮಣನಿಂದಲೇ ವಿಶೇಷವಾಗಿ ನಡೆಯಿತು. ಜೀಜಾಬಾಯಿಯು, ಮಗನಲ್ಲಿ ಸಣ್ಣ ತಪ್ಪು ಕಂಡರೂ ತಿದ್ದಲು ಎಂದೂ ಬೇಸರಪಡುತ್ತಿರಲಿಲ್ಲ. ಕಾರಕೂನ ದಾದಾಜಿ ಕೊಂಡದೇವನೂ ಶಿವಾಜಿಯನ್ನು ಶಾರೀರಕ, ಮಾನಸಿಕ ಮತ್ತು ಆತ್ಮಿಕ ಶಿಕ್ಷಣದಲ್ಲಿ ಚೆನ್ನಾಗಿ ನುರಿದು, ಭವ್ಯವೀ ಛತ್ರಪತಿಯಲ್ಲಿರಬೇಕಾದ ಗುಣಗಳ ಬಿತ್ತನೆಯು ಕೆಲಸವನ್ನೆಲ್ಲಾ ವ್ಯವಸ್ಥೆಯಿಂದ ಮಾಡಿದ್ದನು. ಇದರ ಸಂಗಡ ತಾನು ಮಾಡುವ ಜಹಗೀರಿನ ಪ್ರತಿಯೊಂದು ಕೆಲಸಕ್ಕೂ ಶಿವಾಜಿಯೊಡನೆ ಯೋಚಿಸುತ್ತಿದ್ದನು. ಆಗಾಗ ಜಹಗೀರಿನ ಅನುಭವಗಳನ್ನೂ, ಮಾವಳಿಗಳ ನಿಷ್ಕಲ್ಮಷ ಪ್ರಭುಭಕ್ತಿಯನ್ನೂ ವಿವರಿಸಿ ಹೇಳುತ್ತಿದ್ದನು. ಶಿವಾಜಿಗೂ, ಪೂರ್ವದ ಪುಣ್ಯಕಥೆಗಳ ವಾಚನದಲ್ಲಿ ಗಾಢಪ್ರೇಮವಿತ್ತು. ವೀರಪುರುಷರ ಚರಿತ್ರೆಯನ್ನು ಓದುವಾಗ ಅವನ ಧಮನಿಗಳಲ್ಲಿ ರಕ್ತವು ಚಿಲಿಮಿಲಿ ನಲಿದಾಡಿ, ವೀರಾವೇಶದಿಂದ ಮೈಮರೆಯುತ್ತಿದ್ದನು.

ಪಾಶ್ಚಾತ್ಯ ಲೇಖಕರನೇಕರು ಶಿವಾಜಿಯು ಅನಕ್ಷರಜ್ಞನೆಂದು ವಾದಿಸುವರು. ಇದು ಬುದ್ಧಿವಂತರ ವಿಚಾರಗಳಾದರೂ ಬುದ್ಧಿವಂತಕೆಯ ವಿಚಾರಗಳಲ್ಲ. ಗ್ರಾಂಟ್ ಡಫ್ ಮಹನೀಯರು ಶಿವಾಜಿಗೆ ರುಜು ಹಾಕ್ಕುವಷ್ಟು ಅಕ್ಷರಜ್ಞಾನವೂ ಇದ್ದಿಲ್ಲವೆಂದು ಬರೆದಿರುವರು. ಇದು ಅಸಂಬದ್ಧ ಪ್ರಲಾಪವೆಂದು ಚಿಟ್ಣೀಸನ ಬಖರ್ ಗ್ರಂಥದ ಒಲನೇ ಪುಟದಿಂದ ತಿಳಿಯುತ್ತದೆ. ಮಾ ರಾಜವಾಡೆಯವರ ಮಹಾರಾಷ್ಟ್ರ ಚರಿತೆಯು ನಾಲ್ಕನೆ ಸಂಚಿಕೆಯ ಆನೇ ಪುಟದಲ್ಲಿ ಶಿವಾಜಿಗೆ ಉರ್ದು, ಫಾರ್ಶಿ ಭಾಷೆಗಳ ಜ್ಞಾನವು ಚೆನ್ನಾಗಿಯೂ, ಸ್ವಲ್ಪ ಮಟ್ಟಿಗೆ ಸಂಸ್ಕೃತದ ಜ್ಞಾನವೂ ಇತ್ತೆಂದು ಬರೆದಿರುವರು. ಕೆ. ಎ. ಕೇಲೂಸ್ಕರರು ಶಿವಾಜಿಯ ಜೀವನಚರಿತೆಯ ೨೬ನೇ ಪುಟದಲ್ಲಿ, ಶಿವಾಜಿಯು ಕವಿತಾಪ್ರಿಯನೆಂದೂ, ತಾನೇ ಕೆಲವು ಕವಿತೆಗಳನ್ನು ಬರೆದಿರುವನೆಂದೂ ಬರೆದಿರುವರು. ಇದು ಸುಳ್ಳೆನ್ನಲು ಸಾಧ್ಯವಿಲ್ಲ. ಕವಿತೆಗೆ ವಿದ್ವತ್ತು ಬೇಡವೆಂಬುದನ್ನು ಕರ್ನಾಟಕ ದಾಸಕೂಟದವರ ಕೃತಿಗಳಿಂದಲೇ ಸಮರ್ಥಾನಪಡಬಹುದು. ಶಿವಾಜಿಯು ಮುಂದೆ ಶ್ರೀ ಸಮರ್ಥರ ಮತ್ತು ಅವರ ಶಿಷ್ಯರ ಸಹವಾಸದಲ್ಲಿ ಕಾಲಕಳೆಯುತ್ತಿದ್ದುದರಿಂದ ಅವರ ಅನುಗ್ರಹದಿಂದ ಇವನಲ್ಲಿ ಕವಿತಾಬೀಜವು ಮೊಳಿಕೆ ಒಡೆದಿದ್ದರೂ ಒಡೆದಿರಬಹುದೆಂದು ಅನ್ನಿಸುತ್ತದೆ.

ಶಿವಾಜಿಗೆ ಚಿಕ್ಕಂದಿನಿಂದಲೂ ಮುಸಲ್ಮಾನರೆಂದರೆ ಆಗದು. ಒಮ್ಮೆ ತಂದೆಯ ಜಿಲಾತ್ಕಾರಕ್ಕೆ ಕಟ್ಟುಬಿದ್ದು ಬಿಜಾಪುರಕ್ಕೆ ಹೋದಾಗ ರಾಜಧಾನಿಯಲ್ಲಿ ನಡೆಯುವ ಗೋವಧೆಯನ್ನು ಕಂಡು ರೊಚ್ಚಿಗೆದ್ದು ಆ ಕಟುಕರವನನ್ನೇ ತನ್ನ ಖಡ್ಗಕ್ಕೆ ಬಲಿಹಾಕಿಕೊಂಡಿದ್ದನು. ಇನ್ನೊಂದು ಸಲ ಜ್ವರ ಬಂದು ಒಂದು ಹೊಳೆಯ ದಂಡೆಯಲ್ಲಿ ವಾಲಗಿರುವಾಗ, ಅದರ ಇನ್ನೊಂದು ದಂಡೆಯಲ್ಲಿ ನಡೆಯುವ ಗೋವಧೆಯನ್ನು ಕಂಡು ಮೈಮರೆತು, ಹೊಳೆಯು ನೆರೆಯಿಂದ ತುಂಬಿ ಹರಿಯುತ್ತಿದ್ದರೂ ಲಕ್ಷ್ಯಮಾಡದೆ ಹೊಳೆಯನ್ನು ಈಜಿ ದಾಟಿ ಕಟುಕರವನಿಂದ ಗೋವನ್ನು ಬಿಡಿಸಿದನು. ಇದರಿಂದ ಮುಸಲ್ಮಾನರಿಗೆ ಶಿವಾಜಿಯು ಹೆಸರನ್ನು ಕೇಳಿದರೂ ಆಗದು. ಇದರಿಂದ ಷಹಾಜಿಯು ಮಗನನ್ನು ಬಿಜಾಪುರದಲ್ಲಿಟ್ಟುಕೊಂಡರೆ ಅಪಾಯ ಬಂದೀತೆಂದು ಅವನನ್ನು ತನ್ನ ಜಾಗೀರ್ದಗೇ ಸಾಗಹಾಕಿದನು. ಶಿವಾಜಿಗೆ, ಮುಸಲ್ಮಾನರಿಂದ ದೂರ ಬಂದುದರಿಂದ ಮನಸ್ಸಿಗೆ ಒಂದು ಬಗೆಯ ನೆಮ್ಮದಿ ಸಿಕ್ಕಿತು. ಅವನು ಸಹ್ಯಾದ್ರಿಯ ಆಯಕಟ್ಟಿನ ಸ್ಥಳಗಳ ಪರಿಚಯವನ್ನೆಲ್ಲಾ ಮಾಡಿಕೊಂಡು, ತನ್ನ ಜಹಗೀರಿನ ಮಾವಳಿಗಳಿಗೆಲ್ಲಾ ಯುದ್ಧಶಿಕ್ಷಣವನ್ನು ಕೊಟ್ಟು, ಅವರನ್ನು ಕರೆದುಕೊಂಡು ಗಿರಿಕಂದರಗಳಲ್ಲಿ ವಾಸವಾಡುತ್ತಿದ್ದನು. ಬಿಜಾಪುರದ ಕಡೆಗೆ ಹೋಗುವ ಸುಲ್ತಾನನ ಆಶ್ರಿತರನ್ನು ಕಂಡೊಡನೆಯೇ ಹದ್ದಿನಂತೆ ಎರಗಿ ಅವರನ್ನು ಸುಲಿಯತೊಡಗಿದನು. ಇದರಿಂದ ಧನಸಂಗ್ರಹವೂ ಆಯಿತು. ತಾನಿನ್ನೂ ಹೆಚ್ಚಿನ ಕೆಲಸಗಳಿಗೆ ಕೈಹಾಕಬೇಕಾದರೆ ನಂಬಿಕೆಯ ತರುಣರ ಸೈನ್ಯವನ್ನು ಬೆಳೆಸಿಕೊಳ್ಳಬೇಕೆಂದು ಅದಕ್ಕಾಗಿ ಯತ್ನಿಸತೊಡಗಿದನು. ಅವನನ್ನು ಕಂಡ ತರುಣರೆಲ್ಲಾ ಅವನ ಬಲೆಗೆ ಬಿದ್ದೇಬಿಡುತ್ತಿದ್ದರು; ತಂದೆತಾಯಿಗಳನ್ನು ಅಗಲಿ ತಿಂಗಳುಗಟ್ಟಲೆಯಾಗಿ ಶಿವಾಜಿಯ ಸಂಗಡ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದರು. ಈ ಜನಸಂಗ್ರಹದ ಪ್ರಯತ್ನದಿಂದ ಶಿವಾಜಿಗೆ ಎಂಟೊಂಬತ್ತು ದಿನಗಳ ವರೆಗೆ ಮನೆಗೆ ಹೋಗಲು ಆಗುತ್ತಿರಲಿಲ್ಲ. ಗುಡ್ಡಗವಿಗಳಲ್ಲಿ ಕಾಯಿಕಸರುಗಳನ್ನು ತಿಂದುಕೊಂಡು ಸಂಗಾತಿಗಳೊಂದಿಗೆ ಗುಪ್ತಾಲೋಚನೆಗಳನ್ನು ನಡೆಸುತ್ತಾ ಇರುತ್ತಿದ್ದನು. ಮಗನನ್ನು ಕಾಣದೆ ಜೀಜಾಬಾಯಿಯು ಆಗಾಗ ಅಧೀರಳಾಗುತ್ತಿದ್ದಳು. ಮಗನಿಗೆ ಪುಂಡತನಕ್ಕಾಗಿ ಗಟ್ಟಬೆಟ್ಟಗಳಲ್ಲಿ ಅಲೆಯಬೇಡವೆಂದಳು. ದಾದಾಜಿಯಿಂದ ಹೇಳಿಸಿದಳು. ಮುಸಲ್ಮಾನರನ್ನು ಪ್ರತ್ಯಕ್ಷ ದ್ವೇಷಿಸಬೇಡವೆಂದು ಆಪ್ತರಿಂದ ಹೇಳಿಸಿದಳು. ಆದರೂ ಶಿವಾಜಿಯು ದಾರಿಗೆ ಬರುವ ಸದರು ಕಾಣಿಸಲಿಲ್ಲ. ಮಾತೆಯೇ ಮಗನಿಗೆ ಮೊಲೆಯ ಹಾಲಿನೊಂದಿಗೆ ಮುಸಲ್ಮಾನದ್ವೇಷವನ್ನು ಕಲಸಿ ಕುಡಿಸಿರುವಾಗ, ಅದನ್ನು ಜೀರ್ಣಿಸಿಕೊಂಡ ಶಿವಾಜಿಯು ಮರೆತುಬಿಡುವನೆ? ಕೆಲವು ದಿನಗಳಿಗೊಮ್ಮೆ ಮನೆಗೆ ಬರುತ್ತಿದ್ದವನು ತಿಂಗಳುಗಟ್ಟಲೆ ಮನೆಗೆ ಬರುವುದನ್ನೇ ನಿಲ್ಲಿಸಿಬಿಟ್ಟನು.

(೧೬ನೇ ಪುಟಕ್ಕೆ ಮುಂದುವರಿಸಿಯಾಗಿದೆ.)

ಹೊಸ ಪುಸ್ತಕ.

೧. **ನನ್ನ ಗೃಹಿಣಿ**:-(ಸೋಸಲ) ಪುಟ ೧೫೦; ಬೆಲೆ ೧೦ ಆಣೆ.
೨. **ಹೋದ್ಯಪುರದ ಜೋಜಿಗರಾಯ**:—(ಪೊಲಿಟಿಕಲ್) ಪುಟ ೪೩೨; ಬೆಲೆ ೨ ರೂ.
೩. **ಮೋಜಿನ ಜೀವನ**:—(ಡಿಟೆಕ್ಟಿವ್) ಪುಟ ೨೨೪; ಬೆಲೆ ೧—೪—೦ ರೂ.

ಇವುಗಳ ಜೊರತು ನಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೆದಾರಿ ನಾವೆಲ್ಲುಗಳೂ, ಚರಿತ್ರೆ, ನಾಟಕ, ಪಾರಮಾರ್ಥಿಕ ಪುಸ್ತಕಗಳೂ ದೊರೆಯುತ್ತಿವೆ.

ಶ್ರೀ ಶೇಷಾಚಲ ಪ್ರೆಸ್ಸು,
ಪೋಸ್ಟು ಆನಂದವನ, (ಜಿ. ಧಾರವಾಡ.)

ಸೂಚನೆ:- ಆರ್ಡರು ಕಳುಹಿಸುವವರು 'ಕಂಠೀರವ' ಪತ್ರಿಕೆಯ ಹೆಸರು ಬರೆಯಬೇಕು.

ತೊಣ್ಣೆಗೆ ಅದ್ಭುತ ಔಷಧಿ
(ರಿಜಿಸ್ಟರ್ಡ್)

ಗುಣ ದೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಠ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ಮೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜೆಕ್ಷನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಠ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:— ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಠರೋಗ ನಿರ್ಮೂಲಿನಿ** ಯನ್ನು ಇಬ್ಬರು ಕುಷ್ಠರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಆಶ್ಚರ್ಯವಾಗಿತ್ತು. ಲಕ್ಷ್ಮಿ ಮತ್ತು ಕಂಪೆನಿಯವರ ಸಿದ್ಧೌಷಧ ದಿಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಠ ರೋಗದ ಮೊಳಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಬೇಕು.
ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರೆ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಟೇರ್, ಆರ್. ಎಸ್. ಪೋಸ್ಟ್.

ಬಿಳೇ ತೊನ್ನು—
ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidiya Raj Akhila Kishori Ram,
No. 223, P. O., Katri Sorai. (GAYA).
3, 11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಆರ್. ಮಾರ್ಟಿನ್ಸ್‌ರ
ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿದಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವಿಕೆಯು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ಸುಲಭವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಸಿವಿಲ್ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಪತ್ರಗಳಲ್ಲಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟೆಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೇಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.

Head Office: **MADRAS.** | ESTABLISHED: 1906. | Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L.,
Managing Director.

OR

PANGALKAR BROTHERS,
DISTRICT & GENERAL AGENTS,
KODIALBAIL, MANGALORE.

THE TRAVANCORE NATIONAL BANK, LIMITED.

Head Office: ALLEPPEY.
London Agents: MIDLAND BANK LTD.

Bombay Office:—25-27, Church Gate Street, Fort, BOMBAY. MADRAS OFFICES: (1) 164, Broadway, (2) 183, Mount Road, (3) Luz-Corner, Mylapore & (4) Vepery (No. 1, Purasawalkam High Road).

BRANCHES EVERYWHERE IN SOUTH INDIA.

We have pleasure to announce that this Bank is now in a position to handle business on the following centres also:—

AGRA	CALCUTTA	HYDERABAD (Deccan)	LUCKNOW
AHMEDABAD	CAWNPORE	HYDERABAD (Sind)	RAICHUR
AMINABAD (Lucknow)	DACCA	JAMNAGAR	RANGOON
AMRITSAR	DELHI	KARACHI	SAMBHAR LAKE
AURANGABAD	GORAKHPORE	LAHORE	SECUNDERABAD

SURAT and other centres in Northern India.

ENQUIRIES SOLICITED.

Alleppey, 10th January 1936.

K. C. Eapen, B. A.,
Managing Director.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೬೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. **ಮುಸ್ಕ್ ಲವೆಂಡರ್**-ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯುಳ್ಳ ಸೆಂಟು.

೩. **ಅನಂಸ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ರಿಲಿಯಂಟಾಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಕವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. **ದ್ರಾಕ್ಷಾಸವ**-ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಆರ್ಥಾಮೇತಿಹಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಪೈನ್-ಹಂಟರ್**—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳ ಗೋಸ್ಕರ ಕುಡಿಯತಕ್ಕ ಔಷಧ.

೯. **ರತ್ನಾಂಜನ ಪೇನ್ ಬಾಮ್**—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. **ಕ್ರೀಸೋರಿಂಗಾ**—ಕಪ್ಪು ಆಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. **ಹಿಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**—ಕೇಶಗಳಿಗೋಸ್ಕರ ಗುಲಾಬಿಯು ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, ೩.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

(೪ನೇ ಪುಟದಿಂದ)

ರಾಯರ ಗಡಿಯಾರಕ್ಕೆ ಆದಾಗ ತಾನು ಹನ್ನೆರಡು ಗಂಟೆಗಳನ್ನು ಹೊಡೆದಿರುವುದಿಲ್ಲವಾಗಿ ನೆನಪು ಹುಟ್ಟಿ, ಆಗ ಒಂದೂವರೆ ಗಂಟೆಗಳಷ್ಟು ಸಮಯವಾಗಿದ್ದರೂ, ಭಾರೀ ಶಬ್ದದ ವಿಜ್ರಂಭಣೆಯನ್ನು ಮಾಡಿ ಹನ್ನೆರಡು ಗಂಟೆಗಳನ್ನು ಸೂಚಿಸಿತು. ಆದರೆ ರಾಯರಿಗೆ ನಿಜ ಸಮಯವು ಗೊತ್ತಿತ್ತು. ಘಂಟಾರವವು ನಿಂದೊಡನೆ ರಾಯರಿಗೆ ತಮ್ಮ ವಾಚನಕೋಣೆಯಿಂದ ಸದ್ದು ಕೇಳಿಸಿತು. ರಾಯರಿಗೆ ಪರಮಾನಂದವಾಗಿ, ಅವರು ಹಾಸಿಗೆಯಲ್ಲಿ ಹಾರಿ ಹಾರಿ ಆನಂದಪಡುತ್ತಿದ್ದರು. ಅರ್ಧಗಂಟೆಯು ತನಕ ಅಗಾಗ್ಯೆ ಎಂಬಂತೆ ಸದ್ದಾಗುತಿತ್ತು. ಕೊನೆಗೆ ನಿಂತುಹೋಯಿತು. ತದನಂತರ ಶಾಂತಿ, ನಿಶ್ಶಬ್ದ, ನೀರವ.

ಎಷ್ಟೋ ಸಮಯದಿಂದ ವೈಷಮ್ಯದಿಂದ ಕಾಣುತ್ತಿದ್ದ ಆ ನೀಚ ವಸ್ತುವು ಇಂದಿಗೆ ಸಂಪೂರ್ಣ ನಾಶಗೊಂಡಿತು ಎಂದು ರಾಯರು ಆನಂದದ ಸುರಿಮಳೆಯಲ್ಲಿ ನೆನೆನೆನೆದರು. ಇನ್ನು ರಾಮುಗೆ ಬಹುಮಾನವಾಗಿ ಆದೇನನ್ನು ಕೊಡುವುದೆಂಬ ಆಲೋಚನೆಯಲ್ಲಿ ರಾಯರು ಬಿದ್ದರು—ಅಷ್ಟರಲ್ಲಿ ನಿದ್ರಾದೇವಿಯು ಮೆಲ್ಲಮೆಲ್ಲನೆ ಹೆಜ್ಜೆಗಳನ್ನಿಡುತ್ತ ಬಂದು ಕೊನೆಗೆ ಆತನನ್ನು ದೃಢವಾಗಿ ಆಲಿಂಗಿಸಿಬಿಟ್ಟೇ ಬಿಟ್ಟಳು.

ರಾಯರು ಫಕ್ಕನೆ ಎಚ್ಚೆತ್ತರು. ಪುನಃ ಸದ್ದು! 'ಅಷ್ಟು ಕುತಂತ್ರಿಯಾದ ರಾಮು ಇನ್ನೂ ಪಟವನ್ನು ತೆಗೆಯಲು ಸಂಕಟ ಪಡುತ್ತಿರುವನೆ? ಇಲ್ಲ, ಇಲ್ಲ. ಇದೊಂದು ಸಂಪೂರ್ಣ ಬೇರೆಯಾದ ವ್ಯಕ್ತಿಯಾಗಿಂಬೇಕು. ಅಥವಾ ಅವನೆ ಆಗಿರಬಹುದೆ?' ಎಂದು ರಾಯರು ಚಿಂತಾಭಿಮುಖರಾಗಿ ಬಿದ್ದರು. ಆಗ ಯಾರೋ ಬಿದ್ದ ಸದ್ದಾಯಿತು. 'ಅರೇ....ಬಿದ್ದನೊ? ಅಂತೂ ನಾನು ಕೆಳಗೆ ಸರಿಯುವುದು ಸರಿಯಲ್ಲ....'

ರಾಯರು ಕಣ್ಣು ತೆರೆದೆ ನಿದ್ರಿಸುತಿದ್ದರು.

೩

ಪ್ರಾತಃಕಾಲವಾಗಿ ಎರಡು ಗಳಿಗೆಯಾದೊಡನೆ ರಾಯರ ಗಡಿಯಾರವು ಐದು ಗಂಟೆಯನ್ನು ಚೆನ್ನಾಗಿ ಬಡೆಯಿತು. ಅದರ–ರಣಭೇರಿಯನ್ನು ಒದೆದುದ್ಭವಿಸುವ ಶಬ್ದವನ್ನು ಮಿಗಿಲುಗೊಳಿಸುವ—ಶಬ್ದಕ್ಕೆ ರಾಯರು ಎಚ್ಚೆತ್ತರು. ಎದ್ದು ಬೇಗನೆ, ನಿನ್ನೆ ರಾತ್ರೆಯ ಅವಸ್ಥೆಯೆಲ್ಲ ಸರಾಗವಾಗಿ ನಡೆದಿರುವುದೊ ಎಂದು ನೋಡಲು ಆತುರವಟ್ಟು ತಮ್ಮ ಪಟವಿದ್ದ ಕೋಣೆಗೆ ಓಡಿದರು. ಹೋಗುವಾಗ ರಾಮುವಿಗೆ ಆದೇನು ಬಹುಮಾನವನ್ನು ಕೊಡುವುದೆಂದು ನಿರ್ಧರಿಸುತ್ತಲೇ ನಡೆದರು.

ರಾಯರು ತಮ್ಮ ಕೋಣೆಯನ್ನು ಮುಟ್ಟಿದೊಡನೆ ಗೋಡೆಯನ್ನು ನೋಡಿಬಿಟ್ಟರು. ಅಂದಿಗೆ ಸರ್ವಸಾಧಾರಣವಾಗಿ ಇಪ್ಪತ್ತೈದು ವರ್ಷಗಳಿಂದ ತನ್ನ ಕಡುವೈರಿಯಾದಂತಹ ಆ ಚಿತ್ರವು ಮಾಯವಾಗಿರುವುದನ್ನು ಕಂಡೊಡನೆ ರಾಯರಿಗೆ ಪರಮಾನಂದವಾಗಿ, ಅವರು ತಮ್ಮ ಸದನುಲಾನಂದವನ್ನು ತಡೆಯಲಾರದೆ ಕಣ್ಣೀರು ಸುರಿದರು. ಮನಸ್ಸಿನಲ್ಲಿ ತಮ್ಮ ಭಾವೀ-ಯೋಧನಾದ ರಾಮುವನ್ನು ಕೊಂಡಾಡಿ, ವಂದಿಸಿದರು. ಕೊನೆಗೆ ಆನಂದದಿಂದ ನಿಲ್ಲಲಾರದೆ ಕುರ್ಚಿಯನ್ನು ಸೆಳೆದು ಅದರ ಮೇಲೆ ಕುಳಿತರು. ಆ ಬಳಿಕ.....

ಅದೇನು?

ಮುರಾಸುರನಂತಹ ರಾಕ್ಷಸನೆನಿಸಿದ ಆ ಚಿತ್ರವನ್ನು ಕೃಷ್ಣನಂತಹ ರಾಮುವು ಕೊಂದು ಬೂದಿ ಮಾಡಿರುವನೆಂದು ನಂಬಿ ಆತನನ್ನೂ ಮುರವೈರಿಯೆಂದು (ಮನಸ್ಸಿನಲ್ಲಿ) ಕರೆಯುತ್ತ ಆತನ ಗುಣಗಳನ್ನು ಹೊಗಳಿದ ರಾಯರ ತಲೆಗೆ ಒಮ್ಮೆ ವಜ್ರಾಹತಿಯ ಅನುಭವವಾಯಿತು!

ಅದೇನು?

ರಾಯರು ಭೂಕಂಪದ ಪ್ರದೇಶದಲ್ಲಿ ಬಿದ್ದಂತಾದರು. ಅಷ್ಟರ ತನಕ ಸುರವಾಸಕ್ಕಿಂತ ಅಮೋಘವಾದ ಸುಖವನ್ನು ತಮ್ಮ ಮನೆಯೊಳಗೆ ಬೆಳಿಗ್ಗೆ ಎದ್ದೊಡನೆಯೆ ಅನುಭವಿಸುತ್ತಿದ್ದ ಅವರು, ಕೈಲಾಸ ಪರ್ವತದ ಶಿಖರದಿಂದ ಇಪ್ಪತ್ತೊಂಬತ್ತು ಸಾವಿರ ಅಡಿ ಕೆಳಗೆ ಧುಮುಕಿ ಬಿದ್ದಂತಾದರು.

ಅದೇನು?

ಅವರು ಕುಳಿತಿದ್ದ ಕುರ್ಚಿಯ ಮುಂಗಡೆಯಲ್ಲಿರುವ ಮೇಜಿನ ಮೇಲೆ, ಜನ್ಮಜನ್ಮಾಂತರಕ್ಕೂ ಅವರು ಎರಕ ಪಡದ ಆ ಚಿತ್ರವು ಶಯನ ಮಾಡುತಿತ್ತು. ಅದರ ಬಳಿಯಲ್ಲಿಯೇ ಒಂದು ಕಾಗದ, ಅದು ಅಲೇಖವಾಗಿರದೆ, ಅದರ ಮೇಲೆ ಮಸಿಯಿಂದ ಬರೆದ ಅಕ್ಷರಗಳು ಕಾಣುತ್ತಿದ್ದುವು. ರಾಯರು ತೆಗೆದು ಓದಿದರು. ಅದರಲ್ಲಿ ಹೀಗಿತ್ತು.

'ರಾಯ್ರೆ, ತುಂಬಾ ಕೃತಜ್ಞ. ದಯಾಳು ಎಂದು ಕರೆವೆ. ತಮ್ಮ ಇಚ್ಛೆ ಮೇರೆಗೆ ಚಿತ್ರಾ ತೆಗೀತಿದ್ದಾಗ, ಆ ಚಿತ್ರಾ ತಮ್ದು ಎಂತಾ ಕಂಡುಬಂತು. ಆದ್ರಿಂದ ಅದರ ಚವುಕಟ್ಟನ್ನು ಮಾತ್ರ ತೆಗೆದು ಚಿತ್ರಾ ಬಿಟ್ಟು ಹೋದೆ. ನಿಮ್ಮ ಬವುಮಾನಾ ನಂಗೆ ಅಗತ್ಯವಿಲ್ಲಾ. ಬೇಕಾದ ಬೆಳ್ಳಿ ಪಾತ್ರೆ ಸಾಮಾನ ತೆಗಿದಿದ್ದೀನಿ. ಆಯುಷ್ಮಂತರಾಗಿರ್ರಿ. ತುಂಬಾ ಉಪ್ಕಾರಾಯ್ತು.

(ಸಹಿ) ರಾಮು.'

* * * * *

'ನಾ೩ಹನ್ತಪ್ಪಿ ಬಿದ್ದೆಂಹೀನೇ?'

'ಮತ್ತೇನ್ಮೂರ್ಖಾ! ನನ್ನಾ ಪ್ರೀತಿಯ, ಮುದ್ದು ಚಿತ್ರಾನ ಹಡ್ದೆ. ಒಂದು ತಿಂಗ್ಳು ತಾಗಿರುತ್ತೆ ಅದನ್ನ ಬಿಡಿಸೋಕೆ. ಅದನ್ನು ಹರ್ದು ತೆಗ್ದೆ ಕಡು ಪೆಗ್ಗಾ!'

'ನಂಗ್ಗೇನು ಗೊತ್ತು ತಿಲೂ....ಅಲ್ಲಿ ಬೇರೆ ಚಿತ್ರಾ ತೋಚೋಕಿಲ್ಲಾ ಎಂತ ಇದನ್ನಾ ಹರಿದೆ. ನಾನು ಅಷ್ಟಲ್ಲೆ ಬಿದ್ದು ಬಿಡ್ಬೇಕೆ ಕುರ್ಚಿಯಿಂದಾ....ಅದಕ್ಕಾಗಿ ಓಡಿದೆ ನನ್ನ ಕೋಣೆಗೆ....'

'ಥೂ! ನಿನ್ನಾ ಬುದ್ಧಿಗಷ್ಟು ವ್ಹುಂಕು ಬಿತ್ತೆ? ಈಗವ್ರು ಕೇಳದೆ ಬಿಡೋಕಿಲ್ಲಾ!'

'ತಿಲೂ....ಹೂಂ....ಹೂಂ....ಭೂಂ....ತಿಲೂ....ನಂಗೆ.... . . ಭೂಂ...'

ಹೊಸ ಊಟದ ಹಬ್ಬ.

ವರ್ಷಕಾಲವು ಕಳೆದು ಶರತ್ಕಾಲವು ಕಾಲಿಟ್ಟಿತು. ಪ್ರಕೃತಿಯು ಎಲ್ಲೆಲ್ಲಿಯೂ ಹೊಸ ಗರುಕೆಗಳಿಂದ ಹಸರುಹಸರಾಗಿ ಶೋಭಿಸುತ್ತಾ ಜನಗಳಿಗೆ ತಂತಮ್ಮ ಕೆಲಸಕಾರ್ಯಗಳಲ್ಲಿ ಉತ್ಸಾಹ, ಆನಂದವನ್ನುಂಟುಮಾಡುತ್ತಿರುವುದು.

ಕೃಷಿಕರು ತಾವು ಶ್ರಮಪಟ್ಟು ೩ ತಿಂಗಳು ಮಾಡಿದುದರ ಫಲವನ್ನು ಸಂತೋಷದಿಂದ ಅನುಭವಿಸುವ ಸಮಯ.

ಕೆಲವರು ಬೆಳೆಯನ್ನು ಕೊಯ್ದಿದಾಯಿತು. ಮತ್ತೆ ಕೆಲವರು ಕೊಯ್ಯುತ್ತಿರುವರು. ಇನ್ನು ಕೆಲವರು ಬತ್ತವನ್ನು ಒತ್ತರೆ ಮಾಡಿ, ಕುಟ್ಟಿ, ಅಕ್ಕಿಯನ್ನು ಮಾಡಿಯಾಯಿತು. ಮತ್ತೆ ಕೆಲವರಲ್ಲಿ ನೆಂಟರಿಷ್ಟರನ್ನು ಕೂಡಿ ಹೊಸ ಅಕ್ಕಿಯನ್ನು ಉಣ್ಣುವ ಗದ್ದಲ.

ಬೇಸಾಯದ ಖರ್ಚಿಗೋಸ್ಕರ ಒತ್ತೆ ಇಟ್ಟ ನಗಗಳನ್ನೆಲ್ಲಾ ಬಿಡಿಸಿ ತಂದಾಯಿತು.

ಈ ಹೊತ್ತು ರಂಗೇ ಗೌಡನ ಮನೆಯಲ್ಲಿ ಹೊಸ ಊಟ. ಆಸುಪಾಸಿನ ನೆಂಟರಿಷ್ಟರನ್ನೆಲ್ಲಾ ಕರೆದಿದ್ದಾರೆ.

ಮನೆಯ ಯಜಮಾನನಾದ ರಂಗೇ ಗೌಡನು ಊಟಕ್ಕೆ ಕುಳಿತುಕೊಳ್ಳುವ ಮೊದಲು ಎಲ್ಲರನ್ನು ಕರೆದು ಹೀಗೆಂದನ್ನು,—

'ಬನ್ರಪ್ಪೊ! ಯಲ್ಲಾರು ಬನ್ರಿ! ಹೊಟ್ತುಂಬ ಹಿಟ್ಕೊಟ್ಟು ನನ್ಮುನ್ಯಾಪಾಡ್ದ 'ನನ್ಮುಪ್ಪ'ಗೆ ಅಡಿಬದ್ದು ನನ್ಮುನ್ವ ಹೇಳ್ಕೊಟ್ಟಾಡ ಹಾಡನ ಬನ್ರಿ. ಆ ಮೇಲೆ ಉಣ್ಣನ' (ಹೊಟ್ಟೆ ತುಂಬಾ ಹಿಟ್ಟನ್ನು ಕೊಟ್ಟು ಕಾಪಾಡಿದ ನನ್ಮುಪ್ಪ (ಅಂದರೆ ದೇವರಿ)ಗೆ ಅಡ್ಡ ಬಿದ್ದು ನಮ್ಮ ಅಜ್ಜಿ ಹೇಳಿಕೊಟ್ಟ ಹಾಡು ಹೇಳೋಣ, ಆ ಮೇಲೆ ಊಟ ಮಾಡೋಣ) ಎಂದು ಎಲ್ಲರನ್ನೂ ಸೇರಿಸಿ ತಮ್ಮ ಯನ್ನು ಬಡಿಯುತ್ತಾ ಹಾಡನ್ನು ಹಾಡುವರು.

ಎಲ್ಲರೂ–ಕೈಮುಗುದೆ ನಮ್ದೇವ್ರೆ ಕೈಮುಗುದೆ ।
ನಿಬ್ದುಯಾ ನಮ್ಮೇಲೆ ಬಲು ದಯಾ ॥ ಪ ॥

ರಂಗೇ ಗೌಡ–ಬತ್ತೆಲ್ಲ ಅಕ್ಕಾತು । ಹೊತ್ತೆಲ್ಲ ಸರಿಯಾತು ಒತ್ತಿಟ್ಟ
ನಗವೆಲ್ಲ ಬಂದಾಯ್ತಿ ॥ ನನ್ಮಾಕೆ ॥ ದೊತ್ತಿಟ್ಟ
ನಗವೆಲ್ಲ ಬಂದಾಯ್ತಿ ॥ ೧ ॥

ಹಸನಾದ ಹಸುಗೊಳು । ಹೊಸ ಕರ ಈವಾಯ್ತಿ ಬಸ
ವಣ್ಣ ಬಲು ಗದ್ದೆ ಹೂಡ್ಯಾತು ॥ ನನ್ಮುನೆ ॥ ಬಸವಣ್ಣ
ಬಲು ಗದ್ದೆ ಹೂಡ್ಯಾಯ್ತಿ ॥ ೨ ॥

ರಂಗೇ ಗೌಡನ ಹೆಂಡತಿಯಾದ ಕೆಂಚವ್ವನು—

ಕೆಂಚವ್ವ–ರಾಟೆಯ ಸುತ್ತುತಿವ್ನಿ । ದಾರಾವ ತೆಗಿತಿವ್ನಿ ಸೋ
ಮಾರ ಸಂತೆಗೆ ವೈತಿವ್ನಿ ॥ ನಾನನ್ನ ॥ ಸೋಮವಾರ
ಸಂತೆಗೆ ವೈತಿವ್ನಿ ॥ ೩ ॥
ಮಾಸಿದ ಬಟ್ಟೆಲ್ಲ । ಗಸಗಷ ಒಗದಾಯ್ತಿ, ಗೋಸಾಲೆ
ಸಂದಾಗಿ ತೊಳದಾಯ್ತಿ ॥ ನನ್ಮಾಕ್ಕ ॥ ಗೋಸಾಲೆ
ಸಂದಾಗಿ ತೊಳದಾಯ್ತಿ ॥ ೪ ॥

ಕೆಂಚವ್ವ–ರಾಗಿಯ ಹಿಟ್ಮಾಡಿ । ಜ್ವಾಳದ್ರೊಟ್ಟಿ ಮಾತಿ,
ಕಾರಾದ ಚಟ್ಣಿಯನರದಿವ್ನಿ ॥ ನಾಂಚ್ಕೊಂಬೊಕ್ ॥
ಕ್ಯಾರಾದ ಚಟ್ಣಿಯನರದಿವ್ನಿ. ॥ ೫ ॥

ರಂಗೇ ಗೌಡ:–ಕಾಸೊಂದು ಸಾಲಿಲ್ಲ । ಹೇಸಿಕೆ ಮಾತಿಲ್ಲ,
ವೊಸೆ ಮೇಲ್ಕಯ್ಹಾಕಿ ನಾನೀಗ ॥ ತಿರಗ್ಬಲ್ಲೆ ॥
ವೊಸೆ ಮೇಲ್ಕೈಯ್ಹಾಕಿ ತಿರಗ್ಬಲ್ಲೆ ॥ ೬ ॥

ಕೆಂಚವ್ವ–ನೆಂಟರಾ ಇಷ್ಟರ । ಕರದಿವ್ನಿ ನಮ್ಮನ್ಕೆ
ಕಾಸಿದಂಬಲಿ ಪಾಯ್ಸ ಮಾಡಿವ್ನೀ ॥ ಕಮ್ಮಕ್ಕೆ ॥
ಕಾಸಿದಂಬಲ್ಲಿ ಪಾಯ್ಸ ಮಾಡಿವ್ನಿ ॥

ಎಲ್ಲರು–ಮುಂದೆಲ್ಲ ಉಡುಟ್ಟು । ಶಾದಾಗಿ ಆಗವ್ರೆ ನಿಮ್ಮ
ಡಿಗೆ ಅಡ್ಬಿದ್ದು ಶರಣೆಂಬೆ ॥ ಬೆಟ್ಟಪ್ಪ ॥ನಿಮ್ಮಡಿಗೆ
ಅಡ್ಬಿದ್ದು ಶರಣೆಂಬೆ ॥



ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ
ಜಗತ್ಪ್ರಸಿದ್ಧ
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಆಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ. ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಯ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ, ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆಳುಪು ಹರಿಯುವಿಕೆ ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

CONO KILLER REGD. ORIGINAL TRADE MARK

ಸಕಲ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ವಿಕ್ರಯಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

DIAMONDS! DIAMONDS!
BEST BRILLIANCY!

K. R. K. SHET,
Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಅಪೂರ್ವ ಲಾಭ! ಒಳ್ಳೇ ಸಮಯ!! ತೀರಾ ಬೆಲೆ ಕಡಿಮೆ!!!

ಜಾತಕ ಪತ್ರಿಕೆ.

ಕ್ರಯ ರೂ. ೨-೦-೦.

ತಮ್ಮ ತಮ್ಮ ಮನೆಯಲ್ಲಿ ಜನಿಸಿರುವ ಬಾಲಕರ ಹುಟ್ಟಿದ ಸಂವತ್ಸರ, ಮಾಸ, ತಿಥಿ, ವಾರ, ಜನನವೇಳೆಯನ್ನು ಬರೆದು ಕಳಿಸಿದರೆ ನಾವು ಜನನ ಕಾಲವನ್ನು ಸ್ಥಿರ ಮಾಡಿಕೊಂಡು ಜನ್ಮಲಗ್ನ ಕುಂಡಲಿ ಅಂಶಕುಂಡಲಿ ದಶಸಿರ್ಣಯ ಮೊದಲಾದ ಗಣಿತಗಳನ್ನು ಮಾಡಿಕೊಂಡು ಮೊಗುವಿಗೆ ನಕ್ಷತ್ರ ದೋಷ, ಬಾಲಾರಿಷ್ಟ ದೋಷವನ್ನು ಶೋಧಿಸಿ, ಇದ್ದರೆ ಶಾಂತಮಾಡುವ ಕ್ರಮ, ಮೊಗುವಿಗೆ ಜನನಾದಿಯಾಗಿ ಆಯುಷ್ಯದ ವರಿಗೂ ಇಪ್ಪಿಪ್ಪತ್ತೇ ವರುಷಗಳಲ್ಲಿ ಉಂಟಾಗುವ ಬಾಲಾರಿಷ್ಟ ನೈಲಿ ದಡಾರ ಮುಟ್ಟುದೋಷ ಕಾಮಿಲೆ ಯಾವತ್ತು ಪೀಡೆಗಳ ವಿಷಯವನ್ನು ಯಾವ ಮೂಲಕ ಉಂಟಾಗುವ ಕಂಟಕಗಳ. ವಿಷಯವನ್ನು ತಂದೆ ತಾಯಿಗೆ ಉಂಟಾಗುವ ಪೀಡೆ ವಿಷಯವನ್ನು ಬರೆದು ಜಾತಕ ಪತ್ರಿಕೆಯನ್ನು ತಯಾರುಮಾಡಿ ಕಳಿಸುತ್ತೇವೆ. ಪ್ರತಿ ಒಬ್ಬರು ತಮ್ಮ ತಮ್ಮ ಮಕ್ಕಳ ಜಾತಕ ಪತ್ರಿಕೆಯನ್ನು ಬರೆಯಿಸಿ ಮನೆಯಲ್ಲಿ ಇಟ್ಟುಕೊಂಡರೆ ಮುಂದೆ ಆ ಮಕ್ಕಳ ವಿವಾಹ ಮುಂತಾದ ಸಮಸ್ತ ಕಾರ್ಯಗಳಿಗೆ ಬಹಳ ಅನುಕೂಲವಾಗುತ್ತೆ. ಪ್ರತಿ ಒಬ್ಬರು ತಮ್ಮ ಮಕ್ಕಳಿಗೆ ಬರೆಯಿಸಿ ಇಟ್ಟುಕೊಳ್ಳುವ ದೆಶೆಯಿಂದ ಚಾರ್ಜನ್ನು ಬಹಳೇ ಕಡಿಮೆ ಇಟ್ಟಿರುತ್ತದೆ. ಅಲ್ಲದೆ ಈ ಜಾತಕ ಪತ್ರಿಕೆಗಳಿಂದ ಬಂದ ಹಣದಲ್ಲಿ ಕೆಲವು ಭಾಗ ಹಣವನ್ನು ಇಲ್ಲಿ ಸ್ಥಾಪಿಸಿರುವ ಶ್ರೀ ಪಂಚಮ ಜಾರ್ಜ ಸ್ಮಾರಕದ ಪಾಠಶಾಲಾಕ್ಕೆ ಏರ್ಪಡಿಸಿರುತ್ತೇವೆ. ಬಾಲಕರ ಎಲ್ಲಾ ಪೀಡೆಗಳ ಪರಿಹಾರದ ಉದ್ಧರಣೆಯನ್ನು ಕ್ರಯವಿಲ್ಲದೆ ಕಳಿಸುತ್ತೇವೆ. ಉದ್ಧರಣೆ ಸಹಿತ ಜಾತಕ ಪತ್ರಿಕೆಗೆ ಚಾರ್ಜು ರೂ. ೨—೦—೦.

ವಿಳಾಸ:— ಮೇನೇಜರ್,
ಟಿ. ಹೆಚ್. ಎಂ. ಅಂಡು ಕೊ.,
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಪ್ರತ್ಯಕ್ಷಫಲ ಪಂಚ ಸಿದ್ಧಿ

ಇದು ರಾಯಚೂರು ಭೀಮಾವಧೂತರು

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಶಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯಂದು ಸಿದ್ಧಿ ಮಾಡಿಕೊಂಡು ಬರೆದಿರುವರು.

೧-ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ ಮಂತ್ರ ಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳ ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨-ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಅಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು, ವ್ಯಾಪಾರ ವೃದ್ಧಿ, ದಾರಿದ್ರ್ಯ ನಿವಾರಣ, ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩-ನೇದು ಜ್ಯೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜ್ಯೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪-ನೇದು ಔಷಧ ಪ್ರಕರಣದಲ್ಲಿ ಯಾವಯಾವ ಗಿಡಮೂಲಿಕೆಗಳಿಂದ ಯಾವಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಟಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿವಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ, ಗ್ರಹಪೀಡಾ ನಿವಾರಣ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವೈರಿ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನೂ ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ, ದ್ರವ್ಯಗಳೂ ವೈದ್ಯರೂ, ಜ್ಯೋತಿಷ್ಯರೂ, ಮಾಂತ್ರಿಕರೂ, ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾ ಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರಾ ಕಡಿಮೆ ಮಾಡಿ ಇರುವೆವು. ಬೆಲೆ ಎರಡು ರೂಪಾಯಿ, ಟಪಾಲು ಹಾಸಲು ಸೇರಿ. ಸಮ್ಮ ವಿಳಾಸ:—

ಕೆ. ಸುಬ್ರಮಣ್ಯ ಪ್ರಭು,
ಶ್ರೀ ವೆಂಕಟೇಶ್ವರ ಬುಕ್ ಡಿಪೋ, ಬಳ್ಳಾರಿ.

ಸೊಕ್ಕಿದ ನಡಗಳಿಗೆ ಪಟುತ್ವವೀವುದು

ಜೀರ್ಣಶಕ್ತಿ ಮತ್ತು ದೇಹಬಲ ಹೆಚ್ಚಿಸುವ ಔಷಧಗಳಲ್ಲಿ ಅಲೆಂಬಕ್ ಹೆಮೋ ದ್ರಾಕ್ಸೋಮಾಲ್ಸ್ ಶ್ರೇಷ್ಠವಾದದ್ದು.

ಇದು ಬಲವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸಿ ನಡಗಳಿಗೆ ಪಟುತ್ವನನ್ನು ಕೊಡುವುದೇ ಅಲ್ಲದೆ ಜೀವನಸೌಖ್ಯವನ್ನನುಭವಿಸಲು ಸಹಾಯವಾಗುವುದು.

ಹೆಮೋ-ದ್ರಾಕ್ಸೊ-ಮಾಲ್ಟ್ಸ್

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.

ಮುಂಬಯಿ ಬರೋಡಾ ಮದರಾನು.

ಕೇರಳ ಗಂಧದ ಸಾಬೂನು

ಉತ್ಕೃಷ್ಟವಾದ ಸಾಧನಗಳಿಂದ ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:— ಆರ್. ಸಿ. ದಲಾಲ್, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ



ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಸ್ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು:—ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

'ಕಂಠೀರವ' ಪತ್ರಿಕೆಗೆ ಇಂದೇ ಚಂದಾದಾರರಾಗಿರಿ!

ಕಳೆದ ವಾರ

ಬ್ರಿಟಿಶ್ ಬಜೇಟಿನ ಚರಿತ್ರೆ

ಈಗ ದೊಡ್ಡ ರಾಮಾಯಣವಾಗಿ ಕುಳಿತಿದೆ. ಇದರ ರಹಸ್ಯವು ಹೇಗೆ ಹೊರಗೆ ಬಂದಿತೆಂದು ಜಸ್ಟೀಸ್ ಪೋರ್ಟರರೇ ಅಧ್ಯಕ್ಷರಾಗಿ ನಡೆಯಿಸಿದ ಆ ನ್ಯಾಯಾಧೀಶರುಗಳ ಸಮಿತಿಯಲ್ಲಿ, ಬಜೆಟಿಗೆ ಜವಾಬ್ದಾರರಾದ ಮಂತ್ರಿಮಂಡಲದ ಸಚಿವರಾದ ಮಿ. ಥಾಮಸ್‌ರವರು ಕೊಟ್ಟ ಹೇಳಿಕೆಯ ಕುರಿತು, 'ಈ ಸಚಿವರ ಸ್ನೇಹಿತರಾದ ಪಾರ್ಲಿಮೆಂಟ್ ಮೆಂಬರ್ ಮಿ. ಸರ್ ಆಲ್ಫ್ರೆಡ್ ಬಟ್‌ರಿಗೂ, ಮಿ. ಬೇಟ್ಸ್‌ರಿಗೂ ಥೋಮಸ್‌ರವರು ಬಜೇಟಿನ ಗುಟ್ಟನ್ನು ತಿಳಿಸಿದ್ದಾರೆ. ಅದರಿಂದ ಅವರಿಗೆ ಲಾಭವಾಗಿದೆ. ಅಷ್ಟಲ್ಲದೆ ಥೋಮಸ್‌ರಿಗೇ ಸ್ವತಃ ಇದರಿಂದ ಆದಾಯವಾಗಿದೆ' ಎಂದು ತೀರ್ಮಾನವಾಗಿದೆ. ಮಂತ್ರಿಮಂಡಲದ ಸಚಿವರುಗಳೂ, ಮುಖ್ಯ ಮಂತ್ರಿಗಳೂ ಹೀಗೆ ತಪ್ಪು ಹೇಳಿಕೆಗಳನ್ನು ಕೊಟ್ಟುದು ಇದೇನೂ ಮೊದಲನೆಯ ಸಲವಲ್ಲ. ಆದರೆ ಅವರೆಲ್ಲ ಅಂತಹ ಹೇಳಿಕೆ ಕೊಟ್ಟುದು 'ರಾಜಕೀಯ ಕಾರಣ'ಗಳಿಂದ ಅಲ್ಲದೆ, ಸ್ವಂತ ಪ್ರಯೋಜನಕ್ಕಾಗಿ ಅಲ್ಲವಾಗಿ, ಬ್ರಿಟಿಶ್ ಜನತೆಯು ಅದರಿಂದ ವಿಚಲಿತವಾಗಲಿಲ್ಲ. ಈಗ ಮಾತ್ರ ಥೋಮಸರ ಸಂಗತಿಯೇ ಇಲ್ಲಿ ಬೇರೆಯಾಗಿದೆ. ಅವರು ಬಜೇಟಿನ ರಹಸ್ಯವನ್ನು ತಿಳಿದಿದ್ದು, ಅದರಿಂದ ಪ್ರಯೋಜನ ಪಡೆದಿದ್ದಾರೆ. ಇದರಿಂದ ಅವರ ಕೀರ್ತಿಗೆ ಕಲಂಕವುಂಟಾಗಿದೆ. ಸಂತೋಷದ ಮಾತೇನೆಂದರೆ, ಅವರ ಮಗನ ಮೇಲಿದ್ದ ಅಪವಾದವು ದೂರವಾದುದೇ.

* * * * *

ಬ್ರಿಟಿಶರ ರಾಜಕೀಯ ಜೀವನದ ಕೀರ್ತಿಧ್ವಜವನ್ನು

ಎತ್ತಿ ಹಿಡಿಯುವಲ್ಲಿ, ಈ ನ್ಯಾಯಾಧೀಶರ ಸಮಿತಿಯು ತೋರಿಸಿದ ಧೈರ್ಯ ಮತ್ತೂ ನಿಷ್ಪಕ್ಷಪಾತಬುದ್ಧಿಯನ್ನು, ಎಲ್ಲರಂತೆ, ನಾವೂ ಕೊಂಡಾಡೋಣ. ಈ ದೇಶದಲ್ಲಿ, ಮ್ಯುನಿಯೇಶನ್ ಬೋರ್ಡಿನ ವಿಷಯದಲ್ಲಿ ಎದ್ದ ಅಪವಾದಗಳೇನು, ಅದರಲ್ಲಿ ಉಚ್ಚ ಬ್ರಿಟಿಶ್ ಅಧಿಕಾರಿಗಳ ಸಮಾವೇಶವಿದ್ದುದರಿಂದ, ಅವರ ಕುಂದುಕೊರತೆಗಳು ಹೊರ ಬಾರದಂತೆ, ಆ ಪ್ರಕರಣವನ್ನು ಅಷ್ಟಕ್ಕೆ ಹೇಗೆ ಮರೆಪಡಿಸಲಾಯಿತೆಂಬ ಸಂಗತಿ ಎಲ್ಲರಿಗೂ ಗೊತ್ತೇ ಇದೆ. ಆಫೀಶಿಯಲ್ ಪಂಗಡದ ತಪ್ಪುಗಳೇನಿದ್ದರೂ, ಅದಕ್ಕೆ ಸುಣ್ಣ ಬಳಿದು, ತಣ್ಣಗೆ ಮಾಡುವುದು ಈ ದೇಶದ ಅಧಿಕಾರಿ ಜೀವನದ ಸಾಮಾನ್ಯವಾದ ಒಂದು ಭಾಗವಾಗಿದೆ. ಪುಣ್ಯಾತ್ಮರಾದ ಜನರಲ್ ಡಯರ್, ಕರ್ನಲ್ ಜಾನ್‌ಸನ್, ಮೊದಲಾದವರ ಮಹತ್ಕಾರ್ಯಗಳಿಮೇಲೆಲ್ಲ ಹಂಟರ್ ಕಮಿಟಿಯು ಹೇಗೆ ಸುಣ್ಣ ಬಳಿಯಿತೆಂದೂ, ಅನಂತರ ಅದನ್ನು ಇಂಡಿಯದ ಉಚ್ಚಾಧಿಕಾರಿಗಳೂ, ಲಂಡನಿನ ಅಧಿಕಾರಿಗಳೂ ಹೇಗೆ ಒತ್ತಿಟ್ಟುಬಿಟ್ಟರೆಂಬುದೂ ಸರ್ವರಿಗೂ ವಿದಿತವಾದ ಸಂಗತಿ. ಹೀಗಿರುವಲ್ಲಿ, ಬ್ರಿಟಿಶ್ ಸರಕಾರವು ಇದಕ್ಕಾಗಿ ಒಂದು ವಿಚಾರಣೆಯ ಸಮಿತಿಯನ್ನೇರ್ಪಡಿಸಿದುದೂ, ಅವರು ಈ ವಿಷಯದಲ್ಲಿ ನಿರ್ಭೀತಿಯ ಟೀಕೆಗಳನ್ನು ಮಾಡಿದುದೂ ಪ್ರಶಂಸನೀಯವೇ. ಸದ್ಯ ಥೋಮಸರ ಮೇಲೆ, ಕ್ರಿಮಿನಲ್ ಕಾರ್ಯಕ್ರಮವನ್ನು ಜರುಗಿಸಲು ಸಾಧ್ಯವಿಲ್ಲವೆಂದು ಕಾನೂನಿನ ಮತವಾದರೂ ಪಾರ್ಲಿಮೆಂಟಿನಲ್ಲಿ ಆ ಕುರಿತು ಚರ್ಚೆ ಇದೆ; ಥೋಮಸರೂ ತಮ್ಮ ಹೇಳಿಕೆಯೊಂದನ್ನು ಅಲ್ಲಿ ಕೊಡಲಿದ್ದಾರೆ. ಅಂತೂ ಇಂಗ್ಲೆಂಡಿನಲ್ಲಿ ಪ್ರಜಾಭಿಪ್ರಾಯವೊಂದು ಬಲವಾಗಿರುವುದರಿಂದ ಅಧಿಕಾರಿಗಳ ಅಚಾತುರ್ಯಕ್ಕೊಂದು ಪ್ರಾಯಶ್ಚಿತ್ತದ ಮಾರ್ಗವೊಂದಿದೆ ಅಲ್ಲಿ. ಇಲ್ಲಿ ಪ್ರಜಾಭಿಪ್ರಾಯವೆಂಬುದೇ ಇಲ್ಲ. ಆದುದರಿಂದ ಅಧಿಕಾರಿಗಳು ಮಾಡಿದುದು 'ಮಾಫಿಯೆ'?

* * * * *

ಇಸ್ಲಾಂಮತವನ್ನು ಸ್ವೀಕರಿಸಿದ ಹೀರಾಲಾಲ್ ಗಾಂಧಿಗಳು,

ಮಹಾತ್ಮರ ಮಕ್ಕಳೆಂಬುದನ್ನು ಬಿಟ್ಟುಬಿಟ್ಟರೆ, ಮತ್ತವರು ಸೊನ್ನೆಯೇ. ಅವರು ಆ ತಂದೆಯ ಮಗನಲ್ಲದಿದ್ದರೆ, ಅವರ ಈ ಮತಾವಲಂಬನೆಯನ್ನು, ಯಾರೂ ಇಷ್ಟು ಆಸಕ್ತಿ ವಹಿಸಿ ನೋಡುತ್ತಲೇ ಇರಲಿಲ್ಲ. ಜುಮ್ಮಾ ಮಸೀದಿಯಲ್ಲಿ ಅವರಿಗೆ ಭಾಷಣಕೊಡುವ ಹಕ್ಕು ದೊರಕಿದುದು ಅವರು ಮಹಾತ್ಮರ ಮಗನಾದುದರಿಂದಲೇ. ಆದರೆ 'ಯೋಗ್ಯರಾದ ಎಲ್ಲ ತಂದೆಗಳಿಗೂ, ಅವರಂತೆಯೇ ಯೋಗ್ಯರಾದ ಮಕ್ಕಳಿರುವುದಿಲ್ಲವೆಂಬುದನ್ನು ನಾವಿಲ್ಲಿ ನೆನಪಿನಲ್ಲಿಡಬೇಕು! ದಿವಂಗತ ಪಂಡಿತ ಮೋತಿಲಾಲರ ಭಾಗ್ಯವೇ ಮಹಾತ್ಮರಿಗೂ ಇಲ್ಲವೆಂದು ವಿಷಾದಿಸಬೇಕು. ಈ ಕುರಿತು ಮಹಾತ್ಮರು ತಮ್ಮ ಬಹು ಸಂಖ್ಯಾಕರಾದ ಮುಸ್ಲಿಂ ಮಿತ್ರರಿಗೆಂದು ಒಂದು ಪತ್ರ ಬರೆದು, ಅದರಲ್ಲಿ ತಮ್ಮ ಮಗನ ಗುಣನಡತೆ ಮತ್ತೂ ಮಾನಸಿಕ ವೃತ್ತಿಯನ್ನು ವಿವರಿಸಿದ್ದಾರೆ. ತಮ್ಮ ಮಗನು ದುರಭ್ಯಾಸಗಳಿಗೆ ಬಲಿಬಿದ್ದವನೆಂದು ಬಚ್ಚಿಡದೆ ಬಹಿರಂಗಪಡಿಸಿದ್ದಾರೆ. ಕುಡಿಕತನ, ಇಂದ್ರಿಯಚಾಪಲ್ಯಗಳ ಮಾತಿನೊಡನೆ, ಅವರ ಸಾಲ ಮೂಲದ ಸಂಗತಿಯನ್ನೂ ಎತ್ತಿಕೊಂಡು, ಬಡ್ಡಿಯಿಂದಲೇ ಅವರ ಧ್ವಂಸವಾದೀತೆಂದು ಸಾರುತ್ತಿದ್ದಾರೆ. ಇವರ ಮತಾಂತರದಿಂದ ಇಸ್ಲಾಂ ಧರ್ಮವು ಬಲಗೊಂಡಿಲ್ಲ, ದುರ್ಬಲವಾಗಿದೆ ಎಂಬುದು ಗಾಂಧಿಯವರ ಅಭಿಪ್ರಾಯ. ಒಟ್ಟಿನಲ್ಲಿ ಮತಾಂತರವೆಂಬುದು ಇಂಡಿಯದಲ್ಲಿ ಆತ್ಮಕೋನ್ನತಿಯ ಸಾಧನವಲ್ಲ; ವೈಯಕ್ತಿಕ, ಜಾತಿಯ, ಸಮಾಜದ ಉತ್ಕರ್ಷವೆಂದು ಈ ನಿದರ್ಶನದಿಂದಲೂ ದೃಢವಾಗುವಂತಿದೆ.

* * * * *

ನಮ್ಮ ಮೊಡರೇಟ್ ಪಂಗಡದವರ ರಾಜನೀತಿಯು

ಒಂದೊಂದೇ ಮೆಟ್ಟಿಲು ಮೇಲಕ್ಕೇರುವಂತೆ ತೋರುತ್ತದೆ. ಇದಕ್ಕೆ ಕಾರಣಭೂತವು 'ಅತಿಗಾಮಿ'ಗಳ ರಾಜನೀತಿಯೇ. ಅತಿಗಾಮಿಗಳು ಹೋಮ್ ರೂಲ್ ಬೇಕು, ಕಾಲನಿಯ ಸೆಲ್ಫ್ ಗವರ್ನ್‌ಮೆಂಟ್ ಬೇಕು ಎಂದಾಗ, ಮೊಡರೇಟರು ಆಡಳಿತದ ಸುಧಾರಣೆಗಳು ಸಾಕೆಂದರು. ಅನಂತರ ಅತಿಗಾಮಿಗಳು, ಸಂಪೂರ್ಣ ಸ್ವಾತಂತ್ರ್ಯ ಬೇಕು, ಬ್ರಿಟಿಶರ ಸಂಬಂಧವು ಕಡಿಯಬೇಕು ಎಂಬ ಈ ಕೂಗೆಬ್ಬಿಸಿದಾಗ, ಮೊಡರೇಟರು ಧೈರ್ಯತಾಳಿ, ಡೊಮಿನಿಯನ್ ಸ್ಟಾಟಸ್ ಬೇಕು, ಕಾಲನಿಯ ಸೆಲ್ಫ್ ಗವರ್ನ್‌ಮೆಂಟು ಬೇಕು ಎಂದು ಅಬ್ಬರಿಸಿದರು. ಈಗ ಪಂ. ಜವಹರಲಾಲರು, ಕಮ್ಯುನಿಜಮ್ಮನ್ನು ಉಪದೇಶಿಸುತ್ತಿದ್ದಾರೆಂದು ನಂಬಿರುವ ನಮ್ಮ ಮೊಡರೇಟ್ ಬಂಧುಗಳು, ಅಕಸ್ಮಾತ್ತಾಗಿ 'ಸೋಶಿಯಲಿಸ್ಟ್'ರಾಗಿ ಪರಿವರ್ತನಗೊಂಡಂತಿದೆ. ಪ್ರಾಯಶಃ ಇಂದಿನ ಮೊಡರೇಟರು ನಾಳಿನ ಅತಿಗಾಮಿಗಳೆಂಬ ರೂಢಿಯ ಮಾತು, ಮುಂದೆ ನಮ್ಮಲ್ಲಿಯೂ ನಿಜವೇ ಆಗಬಹುದೋ—ಏನೋ!

* * * * *

ಊರಿನಲ್ಲಿ ಖೂನಿಗಳಾದರೆ, ದೊಂಬಿಗಳಾದರೆ

ಮಕೀಲಗೆ ಪ್ರಯೋಜನವಾಗುವಂತೆ, ಲಾಹೋರಿನ ಷಾಹಿದ್ ಗಂಜಿಯ ಪ್ರಕರಣದಿಂದಲೂ, ಪ್ರಯೋಜನವನ್ನು ಪಡೆದವರಿದ್ದಾರೆ ಪುಣ್ಯಾತ್ಮರು. ಅವರು ಮಾತ್ರ ವಕೀಲರಲ್ಲ; ಡಾಕ್ಟರರು; ಡಾ. ಮಹಮ್ಮದ್ ಅಲಂರವರು! ಅವರು ಗಾಯಗೊಂಡವರನ್ನು ಉಪಚರಿಸಿ ಸಂಭಾವನೆ ಪಡೆಯಲಿಲ್ಲ. ಮುಂದಿನ ಚುನಾವಣೆಯಲ್ಲಿ, ಈ ಗಂಜಿಯ ಪ್ರಕರಣವನ್ನೇ, ಒಂದು ಮುಖ್ಯ ಶಸ್ತ್ರವನ್ನಾಗಿ ಉಪಯೋಗಿಸಿಕೊಂಡು, ತನ್ಮೂಲಕ ಸಭಾಸದನದ ಒಂದು ಸ್ಥಾನದ ಸಂಭಾವನೆಯನ್ನು ಸುಲಭದಲ್ಲಿ ಸಂಪಾದಿಸಬೇಕೆಂದಿದ್ದಾರೆ. ಅದಕ್ಕಾಗಿ, ಅವರು ಬಾಧಶಾಹೀ ಮಸೀದಿಯಲ್ಲಿ, ೧೦ ಸಾವಿರ ಮುಸ್ಲಿಮರ ಮುಂದೆ, 'ಬರುವ ಚುನಾವಣೆಯಲ್ಲಿ, ನೀವು ನನ್ನನ್ನು ಪಂಜಾಬ್ ನ್ಯಾಯವಿಧಾಯಕ ಸಭೆಗೆ ಆರಿಸಿ ಕಳುಹಿಸಿದರೆ, ನಾನಲ್ಲಿ ಷಾಹಿದ್‌ಗಂಜ್ ಮಸೀದಿಯನ್ನು ಮುಸ್ಲಿಮರಿಗೇ ಹಿಂದಿರುಗಿಸುವಂತೆ ಚಳವಳಿ ಹೂಡುವೆನು. ಪ್ರಥಮತಃ, ಸಿಖ್ಖರಿಗೆ ಇಷ್ಟೊಂದು ಅಧಿಕಾರ, ಅಭ್ಯುದಯ ಮತ್ತೂ ರಕ್ಷಣೆಗಳನ್ನು ಒದಗಿಸಿಕೊಟ್ಟ, ಆ ಗುರುದ್ವಾರ ಆಕ್ಟನ್ನೇ ರದ್ದುಮಾಡುವ ಹಾಗೆ, ನಾನೊಂದು ಬಿಲ್ಲನ್ನು ತರುವೆನು' ಎಂದು ಅಬ್ಬರಿಸಿದ್ದಾರೆ. ಓಟರರಿಗೆ ಇನ್ನೇನು ತಾನೇ ಬೇಕು? ಅವರಿಗೆ ಬೇಕು ಇಂತಹ ವಾಗ್ದಾನ! ವಾಗ್ದಾನದ ಪಾಡು ಮುಂದೆ ಹೇಗೂ ಇರಲಿ; ಅಂತೂ, ಡಾಕ್ಟರರ ಚುನಾವಣೆಯ ಹೋರಾಟಕ್ಕೆ ಈಗ ಸಿಕ್ಕಿತು ಇದೊಂದು ದಿವ್ಯಾಸ್ತ್ರ! ಮುಖ್ಯ, ಈ ಷಾಹಿದ ಗಂಜಿಯ ಈ ಪ್ರಕರಣವು, ಅಸ್ಪರಲ್ಲಿಯೇ ಅನ್ನ ಹೋಗಿ ಗಂಜಿಯಾಗದಿದ್ದರೆ, ಚುನಾವಣೆಯ ತನಕವೂ ಆ ಚಳವಳವನ್ನು,—ಭಗವಂತ ಯಾರಾದರೂ, ಇದ್ದ ಸ್ಥಿತಿಯಲ್ಲಿರಿಸಿದರೆ, ಡಾಕ್ಟರರು ಕೃತಕಾರ್ಯರಾದಾರು ಚುನಾವಣೆಯಲ್ಲಿ—ಸಂದೇಹವಿಲ್ಲ!

'ರಾಮುದಾಸ' ವಜ್ರಕಾಯ ಗುಟಿಕ್ಕಾ

(STERN-VIGOUR)

ಈ ಔಷಧದಲ್ಲಿ ಬಂಗಾರ, ಕಸ್ತೂರಿ, ಕೇಸರ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಸ್ವಪ್ನೇಂದ್ರಿಯ ಮುಂತಾದ ಧಾತು ವಿಕಾರಗಳನ್ನು ಗುಣಪಡಿಸಿ, ಧಾತುಸ್ತಂಬನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದವನ್ನು ಕೊಡುವುದು. ಅಲ್ಲದೆ ಅತ್ಯಾಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವುದು.

ಕ್ರಯ 12 ಗುಳಿಗೆಗಳ ಬಾಟ್ಲಿ 1ಕ್ಕೆ 1—4—0.
50ಕ್ಕೆ 4—8—0.

ಇದಲ್ಲದೆ ನಮ್ಮ ಇತರ ಅನುಭವಸಿದ್ಧ ಔಷಧಗಳ ಮಾಹಿತಿ-ಪತ್ರಿಕೆಗಳನ್ನು ನಮ್ಮ ಏಜಂಟರಿಂದ ಪಡಕೊಂಡು ಅನುಭವಹೊಂದಿರಿ.

ದ. ಕ. ಜಿಲ್ಲೆಯ ಎಲ್ಲಾ ಪ್ರಮುಖ ಊರುಗಳಲ್ಲಿ ನಮ್ಮ ಏಜೆಂಟರಿರುವರು.

ತಯಾರಿಸುವವರು:—
ರಾಮುದಾಸ ಕೆಮಿಕಲ್ಸ್ ವರ್ಕ್ಸ್, ಹುಬ್ಬಳ್ಳಿ.

ಜಿಲ್ಲಾ ಏಜಂಟರು:—
ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.

INSURE WITH
CONFIDENCE
IN
INDIA
EQUITABLE
THE BEST
Life Office of its Age.
(Estd: 1908).
INDIA EQUITABLE INSURANCE CO. LTD. CALCUTTA.

WANTED

Candidates for Telegraph and Station Master Class. Allowance Rs. 28. Uniform, passage and quarter free. 'Service essential'. Rules and entrance form on annas eight. Director, Royal Telegraph and Rly. Duties College.

6, 2-6. Bombay No. 14.

GOOD NEWS

We on behalf of our customers, undertake to register from the Government of India Patent, Design & Trade Names, Mark, Labels etc.

Please write for terms to:—

The Star Commercial Agency,
10, Collin Street, CALCUTTA.

The MAN behind the RUPEE

is a power to be reckoned with in every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

ರೂ. 25,000.

ದಿ ಕೇರಳ ಜಿ. ಇ. ಸೆಕ್ಯುರಿಟಿ ಲ್ಯಾಫ್ ಎಶ್ಯುರೆನ್ಸ್ ಕೊ., ಲಿಮಿಟೆಡ್,

ಹೆಡ್ ಆಫೀಸು:-ಕ್ವಿಲೋನ್.

ಈ ಸಂಸ್ಥೆಯು, ಮೇಲ್ಕಂಡ ಪರಮಾವಧಿಯ ಠೇವಣಾತಿಯನ್ನು, ತಿರುವಾಂಕೂರು ಪ್ರಾವಿಡೆಂಟ್ ಇನ್ಶುರೆನ್ಸ್ ಸೊಸೈಟಿಗಳ ರೆಗ್ಯುಲೇಶನಿನಲ್ಲಿ ನಮೂದಿಸಿದ ಮೇರೆಗೆ, ಇದೇ 1936ನೇ ಎಪ್ರಿಲ್ ತಾ. 18ರಲ್ಲಿ ಪೂರ್ಣ ಮಾಡಿದೆ.

ಹಿಂದುಸ್ಥಾನದ ಯಾವತ್ತು ಪ್ರಾವಿಡೆಂಟ್ ಇನ್ಶುರೆನ್ಸ್ ಸೊಸೈಟಿಗಳಲ್ಲಿಲ್ಲ, ಈ ಕಂಪೆನಿಯೇ ಅದೇತಕ್ಕೆ ಪ್ರಥಮ ಸ್ಥಾನವನ್ನು ಹೊಂದಿದೆ ಎಂಬುದಕ್ಕೆ ಕಾರಣಗಳಿವು:—

- 25,000 ರೂಪಾಯಿಗಳ ಸ್ಪ್ಯಾಚೂಟರಿ ಠೇವಣಾತಿ ಎಂಬುದು, ಮೇಲೆ ಹೇಳಿದ ರೆಗ್ಯುಲೇಶನಿನ ವಿಶೇಷವಾದ ಗುಣಲಕ್ಷಣವಾಗಿದೆ; ಬೇರೆ ಕಡೆಗಳಲ್ಲಿ ರಿಜಿಸ್ಟ್ರಿಯಾದ ಸೊಸೈಟಿಗಳ ವಿಷಯದಲ್ಲಿ ಇಂತಹ ಸ್ಪ್ಯಾಚೂಟರಿ ಠೇವಣಾತಿ ಏನೂ ಇರುವುದಿಲ್ಲ. ಈ ಕಂಪೆನಿಯು, ತಿರುವಾಂಕೂರು ಸರಕಾರದಲ್ಲಿ ಈ ಪರಮಾವಧಿಯ ಠೇವಣಾತಿಯನ್ನು ಕಟ್ಟುವುದರ ಮೂಲಕ, ಅದರ ಸ್ಥಾನವನ್ನೂ ಸ್ಥಾಪಿಸಿದೆ; ಮತ್ತೂ ಅದರ ವಿಮಾದಾರರ ಹಿತವನ್ನೂ ಸುರಕ್ಷಿತಗೊಳಿಸಿದೆ.
- ತಿರುವಾಂಕೂರಿನ ಪ್ರಾವಿಡೆಂಟ್ ಇನ್ಶುರೆನ್ಸ್ ಸೊಸೈಟಿಗಳ ರಿಜಿಸ್ಟ್ರಾರರು, ತಮ್ಮ ಕ್ರಮಾಗತವಾದ ಇನಸ್ಪೆಕ್ಷನ್ ವರದಿಗಳಲ್ಲಿ, ಈ ಸಂಸ್ಥೆಯ ಯೋಗ್ಯ ಕಾರ್ಯನಿರ್ವಾಹ ಮತ್ತೂ ಯಶಸ್ವಿಯಾದ ಕೆಲಸದ ಕುರಿತು ಸಾಕ್ಷ್ಯ ಕೊಟ್ಟಿರುತ್ತಾರೆ.
- 'ಕ್ಲೈಮ್' ವರದಿ ತಲುಪಿದ 30 ದಿನಗಳೊಳಗೆ, 'ಕ್ಲೈಮು'ಗಳನ್ನು, ಯಥೋಚಿತವಾದ ಉಪಪತ್ತಿಯ ಮೂಲಕ, ತೀರಿಸಿಕೊಡುವ ಕಂಪೆನಿಯು ಇದೊಂದೇ.

ಮದುವೆಯ ಯೋಜನೆ.

ರೂ. 300

ತಿಂಗಳಿಗೆ 2 ರೂಪಾಯಿಗಳಂತೆ, ೨೬ ತಿಂಗಳು ಮಾತ್ರ ಕಟ್ಟಿದ್ದರ ಫಲವಾಗಿ, ತನ್ನ ಮದುವೆಯಾದ ಬಳಿಕ ಕೂಡಲೇ, ದಕ್ಷಿಣ ಕನ್ನಡ ಜಿಲ್ಲೆಯ, ವಂಡ್ಸೆಯ ಶ್ರೀ. ಕೆ. ವಿ. ಕೃಷ್ಣರಾಯರಿಗೆ 300 ರೂಪಾಯಿ ಹೇಗೆ ಸಿಕ್ಕಿತು!

ಅವರಿಗೆ ಸಿಕ್ಕಿದುದು ಹೀಗೆ. ೧೯೩೫ನೇ ಜನವರಿ ತಾ. ೨೯ರಲ್ಲಿ, ಮದುವೆಯ ಯೋಜನೆಯ ಎ. ತರಗತಿಯ ಮೇರೆಗಿನ ಒಂದು ಪಾಲಿಸಿಯನ್ನು, ಅವರು ಪಡೆದಿದ್ದರು. 26 ತಿಂಗಳ ಅವಧಿಯಲ್ಲಿ, ಅವರು ತಿಂಗಳಿಗೆ ರೂ. 2/—ರಂತೆ ತಿಂಗಳ ಕಂತು ಕಟ್ಟಿದ ಮೇಲೆ, 1936ನೇ ಮಾರ್ಚಿ ತಾ. 27ರಲ್ಲಿ ಮದುವೆಯಾಗಿ 'ಕ್ಲೈಮ್' ಪತ್ರಗಳನ್ನು ಕಂಪೆನಿಗೆ ಕಳುಹಿಸಿದರು. ಕೂಡಲೇ ಕಂಪೆನಿಯು 300 ರೂಪಾಯಿಗಳಿಗೊಂದು ಚೆಕ್ಕನ್ನು ಅವರಿಗೆ ಕಳುಹಿಸಿತು. ಅದರ ಪ್ರತಿಲಿಪಿಯನ್ನಿಲ್ಲಿ ಕೆಳಗೆ ಕೊಡಲಾಗಿದೆ.



ಅವನ ಮದುವೆಯ ದಿನ ಸಿಲೋನ್ ಎಸ್ಟೇಟ್ ಕೆಲಸಗಾರನಿಗೆ **300** ರೂಪಾಯಿ ಸಿಕ್ಕಿದೆ.

54 ರೂಪಾಯಿಗಳ ಪ್ರೀಮಿಯಮ್ ಕಂತುಗಳನ್ನು, ತಿಂಗಳೊಂದರ 2/—ರೂಪಾಯಿಗಳ 27 ಮಾಸಿಕ ಕಂತುಗಳಾಗಿ ಕಟ್ಟಿದ್ದರ ಫಲವಾಗಿ, ಅವನ ಮದುವೆಯ ತಾರೀಖಿನ ದಿನವಾದ 1936ನೇ ಜೂನ್ 1ರಲ್ಲಿ, ಸಿಲೋನಿನ ಡೊಲೊಸ್ಪಾಗೆ, ಗಲ್ಲಮುದೆನ ಗ್ರೂಪಿನ ಲಚಮನ್ ಕಂಡಸ್ವಾಮಿ ಎಂಬವನಿಗೆ, ನಮ್ಮ ಮದುವೆಯ ಯೋಜನೆಯ ಎ. ತರಗತಿಯ ಪಾಲಿಸಿದಾರ, ನಂಬ್ರ ಎಂ. ಎ. 14, ಈತನಿಗೆ ರೂ. 300ನ್ನು ಸಲ್ಲಿಸಲಾಗಿದೆ.

ನೀವು ಮದುವೆಯಾಗದಿದ್ದಲ್ಲಿ, ನಿಮ್ಮ ಸ್ವಂತ ಹೆಸರಲ್ಲಿಯೇ, ನಮ್ಮ ಮದುವೆಯ ಯೋಜನೆಯಲ್ಲಿ ಎಚ್. ಅಥವಾ ಎ. ಅಥವಾ ಬಿ. ತರಗತಿಯಲ್ಲಿ ಒಂದು ಪಾಲಿಸಿಯನ್ನು ತೆಗೆದುಕೊಳ್ಳಿ. ನಿಮಗೆ ಮದುವೆಯಾಗಿ, ಮಕ್ಕಳಿದ್ದರೆ, ಅವು ಎಷ್ಟೇ ಚಿಕ್ಕವಾಗಿರಲಿ, ಅವರ ಹೆಸರಲ್ಲಿ ಪಾಲಿಸಿಗಳನ್ನು ಪಡೆದುಕೊಳ್ಳಿ. ಕಾರಣ ವಿಷ್ಟೆ. ಪಾಲಿಸಿಯನ್ನು ನೀವೆಷ್ಟು ಬೇಗ ಪಡೆದುಕೊಳ್ಳುವಿರೋ, ಅದರ ಪ್ರಯೋಜನವೂ ಅಷ್ಟೇ ಹೆಚ್ಚಾಗಿ ನಿಮಗೆ ದೊರಕುವುದು. 2 ವರ್ಷ ಅಥವಾ ಅದಕ್ಕೂ ಹೆಚ್ಚಿಗೆಯಾಗ್ಗಿ ಚಿಕ್ಕ ಚಿಕ್ಕ ತಿಂಗಳ ಕಂತಾಗಿ ತೆರುತ್ತ ಬರುವುದರಿಂದ, ಮದುವೆಯ ತಾರೀಖಿನಂದು, ನಿಮಗೆ ಆಢ್ಯವಾದ ಪ್ರಯೋಜನವು ದೊರಕುವುದು.

ತರಗತಿ.	ತಿಂಗಳ ಕಂತು.
ಎಚ್.	ರೂ. 3.
ಎ.	ರೂ. 2.
ಬಿ.	ರೂ. 1.

[**ವಿಶೇಷ ಸೂಚನೆ**—ಎಚ್. ತರಗತಿಯ ಮೊದಲಿನ 250 ಪಾಲಿಸಿಗಳ ವಿಚಾರದಲ್ಲಿ, ಪರಿಪಕ್ವ ದೆಸೆಯು ಕನಿಷ್ಟ ಅವಧಿಯು ಬರೇ ಒಂದು ವರ್ಷ ಮಾತ್ರವಾಗಿದೆ. ಈ 250 ರಲ್ಲಿ, ಬಹು ಸಂಖ್ಯೆಯವು ಆಗಲೇ ಸಮರ್ಪಿಸಲ್ಪಟ್ಟಿದ್ದು, ಕೆಲವು ಮಾತ್ರ ಇನ್ನೂ ದೊರೆಯುವುದಿವೆ.]

ಮೈದ್ಯಪರೀಕ್ಷೆ ಇಲ್ಲದ ಲ್ಯಾಫ್ ಎಶ್ಯೂರೆನ್ಸ್ ಯೋಜನೆ.

1936ನೇ ಆಗೋಸ್ತ್ ತಾ. 31ರ ವರೆಗೆ ಪ್ರವೇಶಧನವನ್ನು ರೂ. 2/-ಕ್ಕೆ ತಗ್ಗಿಸಲಾಗಿದೆ. ತಿಂಗಳ ಕಂತು ರೂ. 1/—ಮಾತ್ರ. ಪ್ರತಿ ತಿಂಗಳಲ್ಲಿಯೂ ಆಢ್ಯವಾದ ಪ್ರತಿಫಲದ ಮೊತ್ತವನ್ನು ತೆರಲಾಗುತ್ತಿದೆ. 'ಕ್ಲೈಮು'ಗಳನ್ನು ಸಲ್ಲಿಸಿದುದು ರೂ. 1,42,000ನ್ನೂ ವಿೂರಿದೆ.

ಹೆಚ್ಚಿನ ವಿವರಗಳಿಗೂ, ಏಜೆನ್ಸಿಗೂ ಹೆಡ್ ಆಫೀಸಿಗೆ,

ಅಥವಾ ಶ್ರೀ. ಕೆ. ವಿ. ಕೃಷ್ಣ ರಾವ್, C/o ಡಾಕ್ಟರ್ ಕ. ವಿ. ನರಸಿಂಗ ರಾವ್,
ರೂರಲ್ ಮೆಡಿಕಲ್ ಆಫೀಸರ್, ವಂಡ್ಸೆ ಪೋಸ್ಟ್, ದ. ಕನ್ನಡ, ಇವರಿಗೆ,

ಅಥವಾ ಶ್ರೀ. ಕೆ. ಆರ್. ಅನಂತರಾಮಯ್ಯ, ಬೀ. ಏ., ಚೀಫ್ ಏಜೆಂಟ್,
427, ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ, ಇವರಿಗೆ ಬರೆದುಕೊಳ್ಳಿ.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.
ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸ್ಟೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರಟರಿ.

FOR YOUR DIAMONDS
ENQUIRE AT
SOWCAR
SRINIVAS RANGA PAI,
SOWCAR MAHAL,
Car Street,
MANGALORE.



"ದಕ್ಷನಾದ ಯಜಮಾನನಿಲ್ಲದಿರುವ ಮನೆಗೆ ಎಷ್ಟು ಪದಾರ್ಥಗಳನ್ನು ತಂದು ಹಾಕಿದರೂ, ಅವು ವಿನಾಶವನ್ನು ಹೊಂದುವುವು. ತಟಾಕಕ್ಕೆ ರಕ್ಷಕವಾದ ಕೋಡಿಯೇ ಒಡೆದು ಹೋದರೆ, ಆ ತಟಾಕಕ್ಕೆ ಎಷ್ಟೋ ತೊರೆಗಳಿಂದ ನೀರು ಹರಿದರೂ, ಅದು ಅಲ್ಲಿ ನಿಲ್ಲುವುದುಂಟೆ?"—(ಸನ್ಮತಿಶತಕ.)

XVIII] ಮಂಗಳೂರು, ತಾ. ೧೬—೬—೧೯೩೬ [೨೩
ಧಾತು ಸಂ। ಜ್ಯೇಷ್ಠ ಬ। ೧೨ ಕುಜವಾರ.

ಯಾವುದು ಮೊದಲು? ಯಾವುದು ಮುತ್ತೆ?

ದೇಶದ ಆರ್ಥಿಕ ಮತ್ತೂ ಸಾಮಾಜಿಕ ಸಮಸ್ಯೆಗಳನ್ನು ಮೊದಲು ಪರಿಹಾರಮಾಡಿಕೊಂಡು, ಬಳಿಕ ರಾಜಕೀಯ ಪ್ರಶ್ನೆಯ ಇತ್ಯರ್ಥಕ್ಕಾಗಿ ಪ್ರಯತ್ನಪಡಬೇಕೆ? ಅಥವಾ ರಾಜಕೀಯ ಪ್ರಶ್ನೆ ಮೊದಲು ಇತ್ಯರ್ಥವಾಗಿ, ಅನಂತರ ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಕೈಹಾಕಬೇಕೆ? ಸಂದಿಗ್ಧವಾದ ಈ ಸಂಗತಿಯಲ್ಲಿ ಹಲವರು ಹಲವು ಅಭಿಪ್ರಾಯ ಕೊಟ್ಟಿರುವಲ್ಲಿ, ನಮ್ಮ ಶ್ರೀ. ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ವ್ಯಕ್ತಪಡಿಸಿದ ಅಭಿಮತವಾದರೂ ಗಣನೀಯವಾದುದೇ ಎನ್ನಬೇಕು. 'ಮೊದಲು ರಾಜಕೀಯ ಸ್ವಾತಂತ್ರ್ಯದ ಸಂಪಾದನೆಗಾಗಿ ಕಾದಾಟವು ನಡೆಯಲಿ; ಪೂರ್ಣವಾಗಲಿ. ಆ ಮೇಲೆ ದೇಶದ ಆರ್ಥಿಕ ಮತ್ತೂ ಸಾಮಾಜಿಕ ಸುಧಾರಣೆಗಳ ಕಡೆಗೆ ನಾವು ಲಕ್ಷ್ಯ ಕೊಡೋಣ' ಎಂದು ಅವರು ಹೇಳುತಿದ್ದಾರೆ.

ಈ ಸಂದಿಗ್ಧ ಸಮಯದಲ್ಲಿ, ಯಾವುದು ಮೊದಲು, ಯಾವುದು ಮತ್ತೆ ಎಂಬುದನ್ನು ತಿಳಿದುಕೊಳ್ಳುವುದು ದೇಶಕ್ಕೆ ತುಂಬ ಪ್ರಯಾಸವಾಗಿದೆ. ಶ್ರೀ. ಆಚಾರ್ಯರು ಮಹಾತ್ಮಾಜಿಯವರ ಬಲಗೈಯಾಗಿದ್ದು, ಈ ವಿಷಯದಲ್ಲಿ ಮಹಾತ್ಮರ ಅಭಿಮತವೇನೆಂಬುದನ್ನು ಅವರು ಚೆನ್ನಾಗಿ ತಿಳಿದೇ ಇದ್ದಾರೆ. ನಿಜವಾಗಿಯೂ ಮಹಾತ್ಮರೇನು ಮಾಡಿದ್ದಾರೆ? ರಾಜಕೀಯ ವಿಚಾರಗಳ ಸ್ಥಾನದಲ್ಲಿ ಆರ್ಥಿಕ ಮತ್ತೂ ಸಾಮಾಜಿಕ ಪ್ರಶ್ನೆಗಳನ್ನು ತಂದು ನಿಲ್ಲಿಸಿದ್ದಾರೆ. ವಸ್ತುತಃ, ಆರ್ಥಿಕ, ಸಾಮಾಜಿಕ ಸಮಸ್ಯೆಗಳು ಮೊದಲು ತೀರ್ಮಾನವಾಗಿ, ಅದರಿಂದ ದೇಶವು ಬಲಗೊಂಡು, ಅನಂತರ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಬಹುದೆಂದು ಅವರ ಆಶಯವಾಗಿದೆ. ಪ್ರಾಯಶಃ, ಈ ಪ್ರಶ್ನೆಯ ಇತ್ಯರ್ಥವು ಹೀಗಾದರೆ ಸರಿಹೋಗಬಹುದೇನೋ ಎಂದು, ಇನ್ನೂ ಕೆಲವರು ದೇಶಾಭಿಮಾನಿಗಳು ಈ ರೀತಿಯಾಗಿಯೂ ಯೋಚಿಸುತ್ತಿರುವರು. 'ನಾವು ಅದು ಮೊದಲು, ಇದು ಮತ್ತೆ ಎಂದಿಟ್ಟುಕೊಳ್ಳಬಾರದು. ಯಾವತ್ತೂ ಕಾರ್ಯಕ್ಷೇತ್ರಗಳಲ್ಲಿಯೂ ಏಕಪ್ರಕಾರ ಕೆಲಸ ಮಾಡೋಣ. ಒಂದು ಕಡೆ ಸಾಮಾಜಿಕ ಮತ್ತೂ ಆರ್ಥಿಕ ಉನ್ನತಿಗಾಗಿ ಕೆಲಸ ನಡೆಯುವುದರೊಂದಿಗೇ, ಮತ್ತೊಂದು ಕಡೆ, ರಾಜಕೀಯ ಸ್ವಾತಂತ್ರ್ಯಸಿದ್ಧಿಗಾಗಿಯೂ ಹೋರಾಟವು ಸಾಗಲಿ'.

ಪ್ರಕೃತಪರಿಸ್ಥಿತಿಯಲ್ಲಿ—ಯಾರ ಅಭಿಪ್ರಾಯ ಹೇಗೆ ಇದ್ದರೂ,—ರಾಜಕೀಯ ಸ್ವಾತಂತ್ರ್ಯಸಿದ್ಧಿ ಇಲ್ಲದೆ, ಆರ್ಥಿಕ ಸಾಮಾಜಿಕ ಪ್ರಶ್ನೆಗಳ ಜೀರ್ಣೋದ್ಧಾರಕಾರ್ಯವು, ಸರಾಗವಾಗಿ, ವೇಗವಾಗಿ ನಡೆಯಲಾರವೆಂಬುದನ್ನು, ಯಾವನೂ ಒಪ್ಪಬೇಕಾಗಿದೆ. ಅದಿಲ್ಲದೆ ಇವೊಂದೂ ಪೂರ್ಣವಾಗಲಾರವೆಂದು ನಾವೂ ಒಪ್ಪುವ. ಹಾಗೂ, ಸದ್ಯದ ವಿದ್ಯಮಾನಗಳಲ್ಲಿ, ಜಪಾನಿನಲ್ಲಿ ಕಳೆದ ೫೦ ವರ್ಷಗಳಲ್ಲಿ ಏನನ್ನು ಪೂರ್ಣಗೊಳಿಸಲಾಯಿತೋ, ಅದನ್ನು ಇಲ್ಲಿಯೂ ಮಾಡಿ ಮುಗಿಸಲು ಸಾಧ್ಯವಿಲ್ಲವೆಂಬುದನ್ನೂ ಕೂಡ ಒಪ್ಪುವ. ಆದರೆ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿಬಿಡಲು, ಹತ್ತಿರದ ಮಾರ್ಗವು ನನುಗೆ ಯಾವುದಿದೆ? ಯಾವುದೂ ಇಲ್ಲ. ಏನಾದರೊಂದು ಅದ್ಭುತ ವಿಚಿತ್ರವು ಸಂಭವಿಸದ ಹೊರತು, ನಮ್ಮ ಸ್ವತಂತ್ರಸಿದ್ಧಿಯ ಮಾರ್ಗವು ಬಲು ದೂರವಾಗಿದೆ; ಕಠಿಣವಾಗಿದೆ. ನಮ್ಮಿಂದಲೂ ಹೆಚ್ಚು ಅನುಕೂಲವಿದ್ದ ದೇಶಗಳಿಗೇ, ಹಿಂಸಾಮಾರ್ಗವನ್ನೇ ಕೈಕೊಂಡ ದೇಶಗಳಿಗೂ ಸ್ವಾತಂತ್ರ್ಯ ದೊರಕಲು ಹೆಚ್ಚು ಸಮಯವೇ ಹಿಡಿದಿದೆ!

ಹೀಗಿರುವಲ್ಲಿ, ನಮ್ಮ ಮಾರ್ಗವು ಅಹಿಂಸಾಮಯವೇ ಆಗಿರುವಲ್ಲಿ, ನಾವು ತಾಳ್ಮೆ ವಹಿಸಿ, ಕಷ್ಟಪಟ್ಟು ಕೆಲಸಮಾಡದೆ ನಿರ್ವಾಹವೇ ಇಲ್ಲ. ರಾಜಕೀಯ ಸ್ವಾತಂತ್ರ್ಯವನ್ನು ಬೇಗನೇ ಸಾಧಿಸುವುದು ಸಾಧ್ಯವಾಗಿದ್ದರೆ, ಈ ಆರ್ಥಿಕ, ಸಾಮಾಜಿಕ ಪ್ರಶ್ನೆಗಳು ಅಲ್ಲಿರಲೆಂದು 'ಬಾಕಿ' ಇಡಬಹುದಾಗಿದ್ದಿತು. ಆದರೆ ರಾಜಕೀಯ ಗುರಿಯು, ಇನ್ನೂ ಬಹು ದೂರದಲ್ಲೇ ಇರುವಾಗ, ಮಿಕ್ಕ ಎರಡು ವಿಷಯಗಳನ್ನು 'ಬಾಕಿ' ಇರಿಸುವಲ್ಲಿ ಅರ್ಥವಿಲ್ಲ. ಸಾಮಾಜಿಕ, ಆರ್ಥಿಕ ಪ್ರಶ್ನೆಗಳೆರಡರ ವಿಚಾರದಲ್ಲಿಯೂ, ರಾಜಕೀಯ ವಿಷಯದಷ್ಟೇ ಉತ್ಸಾಹದಿಂದ, ಶ್ರದ್ಧೆಯಿಂದ ಕೆಲಸಮಾಡುವುದು ಅಗತ್ಯವೆನಿಸಿದೆ.

ಪ್ರತಿಯೊಂದು ದೇಶಕ್ಕೂ ಅದರದರದೇ ಆದ ಪ್ರತ್ಯೇಕ ಸಮಸ್ಯೆಗಳಿವೆ; ಕಷ್ಟಗಳಿವೆ; ಅನನುಕೂಲತೆಗಳಿವೆ. ಯಾವ ಎರಡು ದೇಶಗಳಲ್ಲಿಯೂ ಪರಿಸ್ಥಿತಿ ಒಂದೇ ಅಲ್ಲ. ರಷ್ಯದಲ್ಲಿ ಅನುಸರಿಸಿರುವುದನ್ನೇ, ಇಲ್ಲಿಯೂ ಎಲ್ಲ ವಿಷಯಗಳಲ್ಲಿಯೂ ಅನುಸರಿಸುವೆವೆಂದರೆ, ಹೇಗಾದೀತು? ಅಂತೂ, ಡೆಮೊಕ್ರೆಸಿಯ ವೃದ್ಧಿಯ ಹಿತಚಿಂತನೆಯಿಂದಲಾದರೂ ನಾವೇನು ಮಾಡಬೇಕೆಂದು ಯೋಚಿಸುವುದು ನಮ್ಮ ಪ್ರತಿಯೊಬ್ಬನ ಕರ್ತವ್ಯ. ಆದರೆ, ದುರದೃಷ್ಟದಿಂದ, ನಮ್ಮ ವಿದ್ಯಾವಂತರಲ್ಲನೇಕರು ಈ ವಿಷಯಕ್ಕೇ ತಲೆ ಹಾಕುವುದಿಲ್ಲ. ಬೇರೆ ಕಡೆಗಳಲ್ಲಿ ಏನು ಮಾಡಿದ್ದಾರೆ? ಅದರಂತೆ ನಾವೂ ಕುಣಿಯಲು ಯತ್ನಿಸುತ್ತೇವೆ. ಆ ದೊಡ್ಡ ಗೃಹಸ್ಥನೆಂದುದನ್ನೋ, ಈ ಮಹಾಪುರುಷನಾಡಿದುದನ್ನೋ ಕೇಳಿ ಅದನ್ನು ಅನುಸರಿಸಲು ನೋಡುತ್ತೇವೆ. ಅಷ್ಟೆ!

ನಮ್ಮ ಆರ್ಥಿಕ ಮತ್ತೂ ಸಾಮಾಜಿಕ ಪ್ರಶ್ನೆಗಳ ರೀತಿಯೊಂದು ಬೇರೆಯೇ ಆಗಿದೆ. ಈ ಎರಡು ವಿಷಯಗಳಲ್ಲಿಯೇ ಅಡಗಿದೆ ರಾಜಕೀಯ ವಿಚಾರದ ಮೂಲ. ವಿದೇಶದ ವರ್ಚಸ್ಸಿನಿಂದ, ನಮ್ಮ ಆರ್ಥಿಕ ಸ್ಥಿತಿ ದುರ್ಬಲವಾಗಿದೆ ಎಂಬುದನ್ನು ಒಪ್ಪಬೇಕಾದರೂ ನಮ್ಮ ಒಡತನಕ್ಕೆ, ನಮ್ಮ ಜೀವನದ ಪದ್ಧತಿ, ಸಾಮಾಜಿಕ ಸಂಪ್ರದಾಯ, ಮೂಢಭಕ್ತಿ ಇವೂ ಕಾರಣಗಳೆನ್ನಬೇಕು. ರಾಜಕೀಯ ದೌರ್ಬಲ್ಯವನ್ನು ನಿವಾರಿಸಲು ಹೆಣಗಾಡಿದರೆ ಮಾತ್ರವೇ ಸಾಲದು; ನಮ್ಮ ಸ್ವಂತ ದೌರ್ಬಲ್ಯವನ್ನೂ ನಾವು ಹೋಗಲಾಡಿಸಲು ಯತ್ನಿಸಬೇಕು. ಸಾರ್ವಜನಿಕ ಐಕ್ಯಕ್ಕಾಗಿ ಪ್ರಯತ್ನಗಳು ಹೆಚ್ಚಬೇಕು. ಆರ್ಥಿಕೋನ್ನತಿಯ ಉಪಾಯಗಳನ್ನು ಕೈಕೊಳ್ಳಬೇಕು; ನಮ್ಮ ಅಜ್ಞಾನವೂ, ಅವಿದ್ಯೆಯೂ ಎಷ್ಟೇ ಹೆಚ್ಚಿರಲಿ, ನಮ್ಮ ಯತ್ನದ ಮೇಲೆಯೇ ನಾವು ಹೊಂದಿರಬೇಕು. ಇಷ್ಟೆಲ್ಲವನ್ನೂ ಮಾಡಲಾರದ ಒಂದು ಜನಾಂಗವು 'ಜೀವಂತ'ವೆಂದು ಕರೆಯಿಸಿಕೊಳ್ಳಲಾರದು; ನೈತಿಕ ಧೈರ್ಯಸ್ಥೈರ್ಯಗಳಲ್ಲಿ ಅದು ಹಿಂದೆ ಎಂದು ಭಾವಿಸಲಾಗುವುದು. ಅಂತಹ ಜನಾಂಗಕ್ಕೆ ಸ್ವರಾಜ್ಯವು ಆಕಾಶದಿಂದ ಬೀಳಬೇಕಲ್ಲದೆ ಮತ್ತೆಲ್ಲಿಂದ ಬರಬೇಕು?

ಮಂಗಳೂರು

ಅಕ್ಷರಸ್ಥರನ್ನು ಮತದಾರರಾಗಿ ಮಾಡಿಕೊಂಡಿಕೊಳ್ಳುವ ಬಗ್ಗೆ ಅರ್ಜಿಗಳನ್ನು ಸ್ವೀಕರಿಸಲು ಅಧಿಕೃತರಾಗಿ ಕೆಳಗಿನ ಅಫೀಸರರೂ ನೇಮಿಸಲ್ಪಟ್ಟಿರುವರು. ಎಸ್. ಎಶ್ವನಾಥರಾವ್, ಸೆ। ಇ।—ಮಣ್ಣಗುಡ್ಡೆ ಮುನಿಸಿಪಲ್ ಹುಡುಗರ ಶಾಲೆ. ಎಸ್. ತೀನ ಶೆಟ್ಟಿ, ಸೆ। ಇ।—ವೆಬ್‌ಸ್ಟರ್ ಮಾರ್ಕೆಟ್. ಬಿ. ಶೇಕ್ ಅಹಮ್ಮದ್, ಸೆ॥ ಇ॥—ನೀರೇಶ್ವಲ್ಯ ಹುಡುಗರ ಶಾಲೆ. ಎಸ್. ದುಗ್ಗಪ್ಪ ಶೆಟ್ಟಿ, ಸೆ॥ ಇ॥—ಕದ್ರಿ ಮುನಿಸಿಪಲ್ ಹುಡುಗಿಯರ ಶಾಲೆ. ಎಡ್ವಾರ್ಡ್ ಅಲ್ಫ್ರಾಡ್, ಸೆ॥ ಇ॥—ಬೋಳಾರ ಹುಡುಗರ ಶಾಲೆ. ಮುನಿಸಿಪಲ್ ಆಫೀಸು ಪೆಡ್ ಕ್ಲಾರ್ಕರು—ಮುನಿಸಿಪಲ್ ಆಫೀಸ್, ಅಲ್ಲದೆ ಸ್ಪೆಶಲ್ ರೆವಿನ್ಯೂ ಇನಸ್ಪೆಕ್ಟರರು ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರ—ಕೊಡಿಯಾಲ ಬೈಲಿನಲ್ಲಿಯೂ, ಮಹಿಳಾ ಮೆಡಿಕಲ್ ಆಫೀಸರರು ಬಿಸೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ ಅರ್ಜಿಗಳನ್ನು ಸ್ವೀಕರಿಸುವರು.

ಇಲ್ಲಿಯ ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ನಾಳೆಯಿಂದ 'ಮಾಧುರಿ' ಮತ್ತು ಬಿಲಿಮೋರಿಯ ಅಭಿನಯಿಸುವ ರಾಜ ರಮಣಿ ಎಂಬ ಉತ್ತಮ ಸಂಗೀತಮಯ ಚಿತ್ರವು ಪ್ರದರ್ಶಿಸಲ್ಪಡುವುದು. ಅವರ ತರುವಾಯ ಸುಪ್ರಸಿದ್ಧಳಾಗಿರುವ 'ದೇವಿಕಾ ರಾಣಿ'ಯವರು 'ಮಮತಾ' ಮತ್ತು 'ಎಲ್ಸೆಸ್ ಟಿಲ್ ಯುವರ್ ವಾಯಿಫ್' ಅಥವಾ ಮಿಯಾಂಬಿಬಿ ಎಂಬ ಎರಡು ಚಿತ್ರಗಳಲ್ಲೂ ಅಭಿನಯಿಸಿ, ಅತಿ ಮುಗ್ಧಕರವಾದ ಎರಡು ಸಮಾಜತತ್ವಗಳನ್ನು ಪ್ರತಿಪಾದಿಸುವರು. ಸ್ತ್ರೀಯರು ಯಾವ ರೀತಿ ನಡೆದರೂ, ಅವರು ಎಷ್ಟೆಂದರೂ ಗಂಡಸರಿಂದ ನ್ಯಾಯ ಹೊಂದುವುದಿಲ್ಲ ಎಂಬ ದೂರೇ ಇವೆರಡು ಚಿತ್ರಗಳಲ್ಲಿದೆ. ಈಗ, ಮಹಾಸಾಹಸಿಯೂ ಆಗಿರುವ ಬಕ್ ಜೋನ್ಸ್ ಎಂಬಾತನ ಬಕ್ ರೊಬರ್ಟ್ಸ್ ಎಂಬ ಸಾಹಸ ಚಿತ್ರ ಸಾಗುತ್ತಿದೆ.

೧೯೩೫ನೇ XVI ಆಕ್ಟಿನ ಕಿಡ್ಡಿದ ೧೫೪೪ರ ಕೃಷಿ ಸಾಲದ ಆಕ್ಟಿಗನುಸಾರವಾಗಿ ರೂ. ೫೦೦೦ಕ್ಕೆ ಮೀರದ ಬೆಲೆಯ ಜಮೀನು ಇರುವ ಅಥವಾ ವಕ್ಕಲಿನ ಹಕ್ಕುಳ್ಳ—ರೂ. ೫೦೦೦ಕ್ಕಿಂತ ಹೆಚ್ಚಿನ ಸಾಲವಿಲ್ಲದ—ಮಂಗಳೂರು ತಾಲೂಕಿನಲ್ಲಿ ಮಂಗಳೂರು ಪಾಣೆಮಂಗಳೂರು ಫಿರ್ಕಾ, ಪುತ್ತೂರು ತಾಲೂಕಿನಲ್ಲಿ ವಿಟ್ಲ ಪುತ್ತೂರು ಫಿರ್ಕಾಗಳ ರೈತರಿಂದ ಸಾಲದ ಅರ್ಜಿಗಳನ್ನು, ದ. ಕನ್ನಡ ಜಿಲ್ಲಾ ಸ್ಪೆಶಲ್ ಲೋನ್ ಅಫೀಸರರು ಸ್ವೀಕರಿಸುವರು. ಅರ್ಜಿ ಫಾರ್ಮುಗಳನ್ನೂ ಇತರ ವಿವರಗಳನ್ನೂ ಆ ನಾಲ್ಕು ಫಿರ್ಕಾಗಳ ಸ್ಪೆಶಲ್ ಲೋನ್ಸ್ ಇನ್ಸ್‌ಪೆಕ್ಟರರಿಂದ ಅಗಲಿ, ಮಂಗಳೂರಿನ ತಾಲೂಕಿನ ಆಫೀಸು ಮೆಹಡಿಯಲ್ಲಿರುವ ಸ್ಪೆಶಲ್ ಲೋನ್ಸ್ ಆಫೀಸರರಿಂದ ಅಗಲಿ ಪಡೆಯಬಹುದು. ಬಡ್ಡಿಯು ದರ ಪ್ರಕೃತ ಸೇಕಡ ರೂ. ೫½ರಂತೆ.

ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ನಿನ್ನೆ ಮಹಮ್ಮದ್ ಇಬ್ರಾಹಿಂ ಎಂಬ ಒಬ್ಬ ಮುಸಲ್ಮಾನ್ ಯುವಕನ ಶುದ್ಧಿಸಂಸ್ಕಾರವಾಯಿತು. ಈತನು ಮಂಗಳೂರಿನ ಒಂದು ಮಾಸ್ಯ ಸಾರಸ್ವತ ಬ್ರಾಹ್ಮಣ ಕುಟುಂಬದವನಾಗಿದ್ದು ಮೂರು ವರ್ಷಗಳ ಮೊದಲು ಇಸ್ಲಾಮು ಮತವನ್ನು ಸ್ವೀಕರಿಸಿದ್ದನು. ಸಂಸ್ಕಾರಾರಂಭದಲ್ಲಿ ಶ್ರೀಯುತ ಮೋಹನಪ್ಪ ತಿಂಗಳಾಯರು ಯಜ್ಞೋಪವೀತವನ್ನು ಕೊಟ್ಟು ಗಾಯತ್ರೀ ಮಂತ್ರೋಪದೇಶವನ್ನು ಮಾಡಿದರು. ಮತ್ತು ರಮೇಶ ರೌವ್, ಎಂಬ ಆತನ ಪೂರ್ವದ ಹೆಸರನ್ನೇ ಇಟ್ಟರು.

ಈಗ್ಗೆ ಕೆಲವು ವರ್ಷಗಳಿಂದ ಉಳ್ಳಾಲದ ಸ್ಥಾಪನಾ ನಾಮ್ನಿ ಶ್ರೀ ಆದೀಶ್ವರ (ಪಾರ್ಶ್ವನಾಥ) ಸ್ವಾಮಿ ಬಸ್ತಿಯು ಅತ್ಯಂತ ಜೀರ್ಣಾವಸ್ಥೆಯನ್ನು ತಳೆದಿದ್ದು ಪೂಜಾದಿ ಯಾವ ವಿನಿಯೋಗಗಳೂ ನಡೆಯದೆ ಇದ್ದ ಕಾರಣ ಅದಕ್ಕಾಗಿ ಎರಡು ಮೂರು ವರ್ಷಗಳಿಂದ ಶ್ರೀಯುತ ಕೆ. ರಘುಚಂದ್ರ ಬಳ್ಳಾಲರವರ ಪರಿಶ್ರಮದಿಂದ ಸದರಿ ಬಸ್ತಿಯ ಆದೀಶ್ವರ (ಪಾರ್ಶ್ವನಾಥ) ಸ್ವಾಮಿಯ ಮೂಲ ಬಿಂಬಗಳನ್ನು ಮಂಗಳೂರಿನ ಸ್ಥಾಪನಾ ನಾಮ್ನಿ ೧೬ನೇ ಶ್ರೀ ಶಾಂತೀಶ್ವರ ಬಸ್ತಿಯಲ್ಲಿ ಸ್ಥಾಪಿಸುವಂತೆ ದ. ಕ. ಜಿಲ್ಲಾ ಕಲೆಕ್ಟರವರಿಂದ ಬಂದ ಹುಕುಮಿನ ಮೇರೆಗೆ ಇದೇ ತಾರೀಕು ೬ನೇ ಶನಿವಾರ ಸದರಿ ಬಿಂಬಗಳನ್ನು ಉಳ್ಳಾಲದಿಂದ ವಿಜೃಂಭಣೆಯ ಪೂರ್ವಕ ತಂದು ಸದರಿ ಬಳ್ಳಾಲರವರ ಅಪಾರ ಧನವ್ಯಯದಿಂದ ಮಂಗಳೂರಲ್ಲಿ ಜೀರ್ಣೋದ್ಧತವಾಗಿ ಕಂಗೊಳಿಸುತ್ತಿರುವ ಶ್ರೀ ಶಾಂತೀಶ್ವರ ಬಸ್ತಿಯಲ್ಲಿ ಸ್ಥಾಪಿಸಲ್ಪಟ್ಟಿತ್ತೆಂಬುದು ಸ್ತುತ್ಯ ಹಾಗೂ ಸಂತೋಷದ ಸಂಗತಿಯಾಗಿದೆ.

ಕಸ್ಪಿಣಿ ಕನ್ನಡ ಜಿಲ್ಲೆಯಲ್ಲಿ 'ಜೋಗಿ' ಜಾತಿಯೊಂದಿರುವುದು ಎಂದು ಅನೇಕ ಪರಜಾತಿ ಬಾಂಧವರಿಗೆ ತಿಳಿದಿರುವುದಿಲ್ಲ. ಅದುದರಿಂದ ಈ ಜಾತಿಯ ಏಳಿಗೆಯನ್ನು ಕಾಪಾಡಬೇಕೆಂದು ಜಾತಿಯ ತರುಣರನೇಕರು ಬಯಸಿ ಇದೇ ತಿಂಗಳ ತಾ. ೧೪ನೇ ಆದಿತ್ಯವಾರ ಅವರ ಗುರು ಮಠವಾದ ಶ್ರೀ ಕದ್ರಿ ಜೋಗಿಮಠದಲ್ಲಿ ಅವರ ಜಾತಿಯ ಮಹಾಸಭೆಯೊಂದನ್ನು ಸೇರಿಸಿ 'ಶ್ರೀ ಗೋರಕ್ ವಿದ್ಯಾದಾಯಿನಿ ಸಮಿತಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅನೇಕ ಸ್ವಜಾತಿಯ ಬಡ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕಾಗಿ ನಿರ್ಧರಿಸಿದರು. ಈ ಸಮಿತಿಯ ಮೇಲ್ವಿಚಾರಕ್ಕೆ ೧೨ ಮಂದಿಯಿಂದ ಕೂಡಿದ ಒಂದು ಕಾರ್ಯನಿರ್ವಾಹಕ ಸಭೆಯನ್ನೆ, ಮಿ. ಹೊಬಯ್ಯ, ಮಿ. ಎಮ್. ನಾರಾಯಣ, ಮಿ. ವೈ. ಗೋಪಾಲ, ಬಿ. ಎ., ಎಲ್ಎಲ್. ಟಿ. ಮತ್ತು ಮಿ. ಕೆ. ಗೋಪಾಲ, ಮಿ. ಗಣಪತಿ, ಎಂಬವರನ್ನು ಅಧ್ಯಕ್ಷ, ಉಪಾಧ್ಯಕ್ಷ, ಜೊತೆ ಕಾರ್ಯದರ್ಶಿ, ಮತ್ತು ಖಜಾನಚಿಯರನ್ನಾಗಿಯೂ ಚುನಾಯಿಸಿದ್ದಾಯಿತು. ಈ ಸಮಿತಿಯನ್ನು ಊರ್ಜಿತಕ್ಕೆ ತಂದು, ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಸಹಾಯವನ್ನಿತ್ತು ತದ್ವಾರಾ, ಸ್ವಜಾತಿಯನ್ನು ಮುಂದಕ್ಕೆ ತರಬೇಕೆಂದು ಸ್ವಜಾತಿ ಮತ್ತು ಪರಜಾತಿ ಬಾಂಧವರಲ್ಲಿ ಈ ಸಮಿತಿಯ ವಿನಂತಿ, ಎಂತ ಸೆಕ್ರಟೆರಿಯವರು ನಮಗೆ ತಿಳಿಸುತ್ತಾರೆ.

ಆಲ್ ಇಂಡಿಯಾ ಪೋಸ್ಟಲ್ ಮತ್ತೂ ಆರ್. ಎಂ. ಎಸ್.ನ ಮಂಗಳೂರು ಶಾಖೆಯ, ಡಿಸ್ಟ್ರಿಕ್ಟ್ ಕಾನ್ಫರೆನ್ಸು, ಕಳೆದ ಆದಿತ್ಯವಾರ

(೧೩ನೇ ಪುಟಕ್ಕೆ ಮುಂದರಿಸಿಯದೆ)

ಹಿಂದೂದೇಶ

ಕ್ಷಾಮನಿವಾರಣೆಯ ಫಂಡನ್ನು ವಿನಿಯೋಗಿಸುವ, ಮೇಲ್ವಿಚಾರ ನಡೆಸುವ ಕುರಿತು ಮದ್ರಾಸ್ ಸರಕಾರವು ಒಂದು ಶಾಸನವೇರ್ಪಡಿಸಬೇಕೆಂದು ಯೋಚಿಸಿದೆ. ಇತರ ಪ್ರಾಂತಗಳೂ ಈ ಮೇಲ್ಪಂಕ್ತಿಯನ್ನೇ ಅನುಸರಿಸಬಹುದು.

ಮುನ್ಸಿಗಂಜಿನಲ್ಲಿ ಧನಳೇಶ್ವರೀ ಹೊಳೆಯ ಮಧ್ಯದಲ್ಲಿ ದೋಣಿಯೊಂದು ಮೊಗಚಿ ಬಿದ್ದು, ಸುಮಾರು ೧೨ ಮಂದಿ ಮೃತರಾಗಿರುವರು.

ಷಿಕಾರಿಪುರದ ಡಿ॥ ಬೋರ್ಡಿನಲ್ಲಿ ಒಬ್ಬ ಮೆಂಬರರು ದಿವಂಗತ ಡಾ. ಅನ್ಸಾರಿಯವರ ಸಂಬಂಧ ಒಂದು ಸಂತಾಪ ಸೂಚಕ ಠರಾವನ್ನು ಸೂಚಿಸಲಿದ್ದರು. ಆದರೆ ಬೋರ್ಡಿನ ಪ್ರೆಸಿಡೆಂಟರಾದ ಡಿಪ್ಯುಟಿ ಕಮಿಶನರರು ಇದು ಬೋರ್ಡಿನ ಕೆಲಸವನ್ನಲ್ಲವೆಂದು ಅದನ್ನು ತಳ್ಳಿ ಬಿಟ್ಟರು.

ಅಲ್ಮಲ್ಲಾ ಗಾಂಧಿಯವರು ಕೌನ್ಸಿಲ್ ಆಫ್ ಸ್ಟೇಟಿನ ಮುಂದಿನ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲುವರೆಂದೂ, ಅವರಿಗೆ ಪ್ರತಿಸ್ಪರ್ಧಿಗಳಿಲ್ಲದಂತೆ ಏರ್ಪಾಡಾಗುವುದೆಂದೂ ತಿಳಿದುಬರುತ್ತಿದೆ. ಈ ಮಧ್ಯೇ ಅವರು ಸದ್ಯದಲ್ಲೇ ಹಾಜ್ ಯಾತ್ರಾರ್ಥಿಗಳಾಗಿಯೂ ಹೊರಡಲಿರುವರು.

ಲಾಹೋರಿನಲ್ಲಿಯೂ, ಅಮೃತಸರದಲ್ಲಿಯೂ ಕ್ವಾರದ ವೃತ್ತಿಯನ್ನು ಅವಲಂಬಿಸಿಕೊಂಡಿದ್ದ ಪಂಜಾಬ್ ವಿಶ್ವವಿದ್ಯಾಲಯದ ಗ್ರಾಜುವೇಟನಾದ ಮಿ. ಡಬ್ಲ್ಯೂ. ಡಿ. ವಿಕ್ಟರ್ ಎಂಬಾತನು, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಕಸುಬಿನಲ್ಲಿ ಅನುಸರಿಸುತ್ತಿರುವ ಈಗಿನ ಹೊಸ ಪರಿಷ್ಕರಣಗಳನ್ನು ಕಲಿತು ಬರಲು ಯುರೋಪಿಗೆ ತೆರಳಿರುವನು. ಅವನು ಇಟೆಲಿ, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶಗಳನ್ನು ಸಂದರ್ಶಿಸಿ, ಅಲ್ಲಿ ಈ ಕಸುಬಿನಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಇಂಡಿಯಕ್ಕೆ ಹಿಂದಿರುಗಿದ ಬಳಿಕ, ಪಂಜಾಬಿನ ಎಲ್ಲ ಕಡೆಗಳಲ್ಲಿಯೂ ಅವನು ಸ್ಯಾಲೂನುಗಳನ್ನು ಏರ್ಪಡಿಸುವನು.

ಪಂಡಿತ ಜಪ್ಪರಲಾಲ ನೆಹರೂಯವರು ಬರುವ ತಿಂಗಳಲ್ಲಿ ಪತರಾದಲ್ಲಿ ಜರಗುವ ಜಲಂಧರ ಜಿಲ್ಲಾ ರಾಜಕೀಯ ಮಹಾಸಭೆಯಲ್ಲಿ ಹಾಜರಿದ್ದು, ಮುಂದೆ ಕೆಲವು ದಿನ ಜಲಂಧರ ಮತ್ತೂ ಅಂಬಾಲಾ ಡಿವಿಜನಿನಲ್ಲಿ ಸಂಚರಿಸುವರು.

ನಾಗಪುರದ ಕೋಟೆಯಲ್ಲಿ ಅನೇಕ ವಿೂಟಿಂಗುಗಳು ನಡೆದುವು. ಆ ಕಾಲದಲ್ಲಿ ಅನಿರ್ವಾಹಸಂದರ್ಭಗಳಲ್ಲಿ ಎಗ್ಜಿಕ್ಯುಟಿವ್ ಆಫೀಸರರುಗಳಿಗೆ ವಿುಲಿಟರಿಯವರಿಂದ ಯಾವ ರೀತಿಯ ಸಹಾಯವು ಒದಗಬಹುದೆಂದು ನಿದರ್ಶನಕ್ಕೆ ಬಂದಿತಲ್ಲದೆ, ವಿುಲಿಟರಿಯವರ ವಶವಿರುವ ಕೆಲವು ನವೀನ ಶಸ್ತ್ರಾಸ್ತ್ರಗಳನ್ನೂ ತೋರಿಸಲಾಯಿತು.. ಈ ವಿೂಟಿಂಗುಗಳಿಗೆ ಮ್ಯಾಜಿಸ್ಟ್ರೇಟರೇ ಮೊದಲಾದ ಶಾಂತಿರಕ್ಷಣೆಯ ಅಧಿಕಾರಿಗಳೆಲ್ಲರೂ ಬಂದಿದ್ದರು.

ದರ್ಭಾಂಗ ಡಿ॥ ಬೋರ್ಡಿನ ಒಂದು ವಿೂಟಿಂಗ್ ನಡೆಯಿತು. ಆ ಕಾಲದಲ್ಲಿ ಡಿ॥ ಮ್ಯಾಜಿಸ್ಟ್ರೇಟರೂ ಹಾಜರಿದ್ದರು; ವಿುಲಿಟರಿ ಪಿಕೇಟುಗಳೂ ಕಾವಲಿದ್ದರು. ಹಾಗೆ ಸಭೆ ಆರಂಭಿಸಲು, ಮೆಂಬರರೊಬ್ಬರು ಆ ಬೋರ್ಡಿನ ಚೆಯರ್‌ಮ್ಯಾನರು ತಮ್ಮ ರಾಜಿನಾಮೆಯನ್ನು ಹಿಂದೆಗೆದುದೇಕೆಂದು ಚರ್ಚಿಸುವ ಒಂದು ಠರಾವನ್ನು ಮುಂದೆ ತಂದರು. ಸೂಚನೆಯನ್ನು ತಳ್ಳಿ ಹಾಕಲಾಯಿತಾದರೂ, ಆ ಮೆಂಬರರು ವಾದಿಸುವುದನ್ನು ಬಿಡಲಿಲ್ಲ. ಕೊನೆಗೆ ಆ ಮೆಂಬರರನ್ನು 'ಸಸ್ಪೆಂಡ್' ಮಾಡಲಾಗಿದೆ. ಸ್ವಾರಸ್ಯವೇನೆಂದರೆ, ಮೆಂಬರರ 'ಸಸ್ಪೆಂಡಿಗೂ' ನವುಗೆ ವಿುಲಿಟರಿ ಕಾವಲು ಬೇಕೇ? ಎಂಬುದು.

ವಿೂರತ್ತಿನಲ್ಲಿ ಒಬ್ಬ ವೋಟರ್ ಡ್ರೈವರ್—ಹೆಸರು ಹವಿುದುಲ್ಲ. ಇವನನ್ನು ಅಲ್ಲಿಯ ಪೋಲೀಸ್ ಸಬ್ ಇನಸ್ಪೆಕ್ಟರ್ ಮುನ್ಷಿ ಸಿಂಗ್ ಎಂಬವರು ಆಗಾಗ್ಗೆ ಬಿಟ್ಟಿಗೆ ಹಿಡಿದು, ಅವರನ್ನು ಧರ್ಮಕ್ಕೆ ಕಾರಿನಲ್ಲಿ ಅಲ್ಲಿಗಿಲ್ಲಿಗೆ ತೆಗೆದುಕೊಂಡು ಹೋಗುವಂತೆ ಬಲಾತ್ಕರಿಸುತ್ತಿದ್ದರೆಂದು ಮುಂತಾಗಿ ಅವನ ದೂರು ಪೋಲೀಸ್ ಸುಪರಿಂಟೆಂಡೆಂಟರಲ್ಲಿ. ಅವರು ಸಬ್ ಇನಸ್ಪೆಕ್ಟರರನ್ನು ವಿಚಾರಿಸಿ, ಅವರ ಹೇಳಿಕೆಯನ್ನು ತೆಗೆದುಕೊಂಡು, ಆ ಆಧಾರದ ಮೇಲೆ ಸುಳ್ಳು ದೂರು ಹವಿುದುಲ್ಲರ ದೆಂದು ತೀರ್ಮಾನಿಸಿ, ಅವನ ಮೇಲೆ ಕ್ರಿಮಿನಲ್ ಕ್ರಮಗಳನ್ನು ಜರುಗಿಸಲಾಯಿತು. ಕೆಳ ಕೋರ್ಟಿನವರು ಸಬ್ ಇನಸ್ಪೆಕ್ಟರರ ಮೇಲೆ ಸುಳ್ಳು ಆರೋಪ ತಂದನೆಂದು ಅವನಿಗೆ ೩ ತಿಂಗಳ ಕಠಿನ ಸಜೆ ವಿಧಿಸಿದರು. ಆದರೆ ವಿೂರತ್ತಿನ ಜಡ್ಜರು 'ಸಬ್ ಇನಸ್ಪೆಕ್ಟರರ ಮೇಲೆ ದೂರು ಇರುವ ಯಾವನಾದರೂ, ಪ್ರಾತಿಕ್ಯೂಶನಿನ ಭಯವಿಲ್ಲದೆ, ತನ್ನ ಪ್ರಾತಿನಿಧ್ಯವನ್ನು ನಿರ್ವಹಿಸಲು ಅವನಿಗೆ ಸ್ವಾತಂತ್ರ್ಯವಿರಬೇಕು' ಎಂದು ಷರಾ ಬರೆಯುತ್ತ ಹವಿುದುಲ್ಲನನ್ನು ಬಿಟ್ಟುಬಿಟ್ಟರು!

ನರಸಿಂಹ ಮೂರ್ತಿ ಎಂಬ ಆಂಧ್ರ ಯುವಕನು ಯೋಗಾಭ್ಯಾಸಕ್ಕಾಗಿ ಪರ್ವತಪ್ರದೇಶಗಳಿಗೆ ಗುರುವನ್ನು ಹುಡುಕಿಕೊಂಡು ಹೋಗಿ, ಬದರಿನಾಥದ ಆಚೆ ಹಿಮಾಲಯದ ಹಿಮಭರಿತವಾದ ತಪ್ಪಲಲ್ಲಿ ಗುರುವನ್ನು ಕಂಡು, ಅವನಿಂದ ಯೋಗ ವಿದ್ಯೆಯನ್ನು ಕಲಿತುಕೊಂಡನೆಂದೂ, ಆ ಗುರುವಿಗೆ ಸುಮಾರು ೪೫೦ ವರ್ಷ ಪ್ರಾಯವಿರಬಹುದೆಂದೂ, ಆತನು ಶಿವಾಜಿಯ ಸೈನ್ಯದಲ್ಲಿದ್ದು ವೊಗಲರ ವಿರುದ್ಧವಾಗಿ ಕಾದಾಡಿದ ವೀರನೆಂದೂ ಬರಹಾಂಪುರದ ಒಂದು ವಿೂಟಿಂಗಿನಲ್ಲಿ ತಿಳಿಸಿರುವನು.

ಬೇಗಂಗಂಜಿನ ಒಂದು ಹಳ್ಳಿಯಲ್ಲಿ ೮ ಕೈಗಳಿರುವ ಒಂದು ಶ್ವೇತಶಿಲೆಯ ದೇವಿಯ ಪುರಾತನ ವಿಗ್ರಹವು ಅಗೆಯುವಾಗ ದೊರಕಿದೆ. ಅವರ ಭಾವಚಿತ್ರವನ್ನು ತೆಗೆಯುವ ಪ್ರಯತ್ನ ನಡೆಯುತ್ತಿದೆ.

ಹೈದರಾಬಾದಿನ ಸಿಂಧ್ ಪ್ರಾಂತದ ರಾಜಕೀಯ ಮಹಾಸಭೆಗೆ ಪಂಡಿತ ಜಪ್ಪರ್‌ಲಾಲರನ್ನು ದಯೆಮಾಡಿಸುವರಲ್ಲದೆ, ಅಲ್ಲಿ ಬಾಬು ರಾಜೇಂದ್ರ ಪ್ರಸಾದರಿಂದ ಶಂಕುಸ್ಥಾಪನೆಯಾಗಿದ್ದ, ಈಗ ೨೩ ಸಾವಿರ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿ ಮುಗಿಸಿಲಾದ ಅಲ್ಲಿನ ಕಾಂಗ್ರೆಸ್ ಮಂದಿರದ ಆರಂಭೋತ್ಸವವನ್ನೂ ಜರುಗಿಸುವರು.

ನವುಕರರ, ಸೇವಕರ ತಂಡದಿಂದ ಸರ್ವದಾ ಉಪಚರಿಸಲ್ಪಡುತ್ತ ಮಹಾ ವೈಭವದಲ್ಲಿದ್ದ ನಮ್ಮ ಮಾಜೀ ವೈಸರಾಯ್ ಲಾರ್ಡ್ ವಿಲ್ಲಿಂಗ್‌ಡನರು ಪತ್ನೀಸಹಿತರಾಗಿ ಲಂಡನಿಗೆ ತಲಪುತ್ತಲೇ, ಸ್ಟೇಶನಿನಲ್ಲಿ ಅವರನ್ನು ಬಂದು ಸಂಧಿಸಿದವನೊಬ್ಬ ಅವರ ಬಟ್ಲರು. ಬಂದವರ ಲಗೇಜ್ ಸಾವಾನುಗಳನ್ನು ಸಾಗಿಸುವ ಭಾರವನ್ನು ಅವನ ವಶಕ್ಕೊಪ್ಪಿಸಲಾಯಿತು. ಮುಂದೆ, 'ಲಂಚನ್'ನ ಏರ್ಪಾಡನ್ನು, ಅಡಿಗೆ ಮನೆಯ, ಭೋಜನಗೃಹದ ವ್ಯವಸ್ಥೆಯನ್ನು ಅವರೇ, ಮಾನ್ಯ ಪ್ರಭುದಂಪತಿಗಳೇ, ಅಂದು ಅವರ ಬಂಗಲೆಯಲ್ಲಿ ಸ್ವತಃ ನೋಡಿಕೊಂಡು, ಮಾಡಿಕೊಳ್ಳಬೇಕಾಯಿ.ತೆಂದು ಅಲ್ಲಿನ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತ್ತದೆ. ಮುಖ್ಯ, ಆಳಾಗಲಿಕ್ಕೂ, ಅರಸಾಗಲಿಕ್ಕೂ ಗೊತ್ತಿರಬೇಕೆಂಬ ಗಾದೆಯೇನು ಸುಮ್ಮನೇ ಹುಟ್ಟಿತೆ?

ಅಲ್ಮೋಡ್ರಾದಲ್ಲಿರುವ ಖಾನ್ ಅಬ್ದುಲ್ ಗಫೂರ್ ಖಾನರವರ ಜೈಲುವಾಸದ ಅವಧಿಯು ಇದೇ ಸೆಪ್ಟೆಂಬರಕ್ಕೆ ಅಂತ್ಯವಾಗುವುದು.

ಬ್ರಹ್ಮಪುತ್ರಾ ನದಿಯಲ್ಲಿ ಮಹಾಪ್ರವಾಹವು ಏರಿ, ದಿಬ್ರೂ ಪುರವು ಜಲಮಯವಾಗಿದ್ದಿತ. ಸೊಹತಿ ಪ್ರಾಂತದ ಬೆಳೆ ನಷ್ಟವಾಗಿ ೧೪ ಸಾವಿರ ಮಂದಿ ಅನಾಥರಾಗಿದ್ದಾರೆ. ಅವರಿಗೆ ನಿತ್ಯದ ಅನ್ನಕ್ಕೂ ಈಗ ತತ್ವಾರ.

ಬೊಂಬಾಯಿ ಮದ್ರಾಸುಗಳ ರೈಲ್ವೆ ಏಜೆಂಟರುಗಳೊಡನೆ ಕೆಲವೊಂದು ವಿಷಯಗಳನ್ನು ಮಾತಾಡಿಕೊಂಡು ಬರಲು ರೈಲ್ವೆಗಳ ಫ್ಯಾನ್ಯಾನ್‌ಶಿಯಲ್ ಕಮಿಶನರರಾದ ಶ್ರೀ. ಪಿ. ಆರ್. ರಾವ್ ಇವರು ಸಿಮ್ಲಾದಿಂದ ಬೊಂಬಾಯಿ-ಮದ್ರಾಸುಗಳ ಕಡೆ ಪ್ರಯಾಣ ಮಾಡಿರುವರು. ಇವರು ಇದೇ ತಾ. ೨೨ಕ್ಕೆ ಸಿಮ್ಲಾಕ್ಕೆ ಹಿಂದಿರುಗುವರು.

ಕಟಕ್ ಪ್ರಾಂತದಲ್ಲಿ ವಿಪರೀತ ಮಳೆ. ಕೆಲವು ಕಡೆ ರೈಲ್ವೆಯು ಒಡ್ಡಾಟಕ್ಕೆ ತೊಂದರೆಯಾಗಿದೆ. ಮೆದ್ರಾಸ್ ಮೈಲ್ ಎಂದಿನಂತೆ ಸಕಾಲಕ್ಕೆ ಬಾರದೆ ವಿಳಂಬವಾಗಿದೆ. ಪೂರಿಯ ಟೈನಿನ ಓಡಾಟ ಒಂದು ದಿನದ ಮಟ್ಟಿಗೆ ನಿಲ್ಲಿಸಲಾಗಿದೆ.

ಅನೀತಿಯ ವ್ಯಾಪಾರದ ಕಾನೂನಿನ ಸಂಬಂಧ ಮದ್ರಾಸ್ ವಿಜಿಲೆನ್ಸ್ ಸಂಘದ ಉದ್ಯೋಗಿಯಾಗಿ, ಇಂಗ್ಲೆಂಡಿನಿಂದ ಒಬ್ಬ ಮಹಿಳೆಯನ್ನು ಮದ್ರಾಸ್ ಸರಕಾರವು ಒಂದು ವರ್ಷದ ಮಟ್ಟಿಗೆ, ಕರೆಯಿಸಿಕೊಂಡಿದೆ. ಸರಕಾರವು ಈಕೆಯ ಸಂಬಳ ಮತ್ತೂ ಭತ್ತೆಯನ್ನು ತೆರಲಿದೆ.

ಸಾಧು ಮಾಡಿದ ೪ ವರ್ಷದ ಸಿಂಹದೊಡನೆ, ಬೊಂಬಾಯಿಯ ಜೋಗೀಶ್ವರಿ ಗವಿಯ ಹಿಂದೂ ಸ್ವಾಮಿಗಳೊಬ್ಬರು ಸಿಮ್ಲಾಕ್ಕೆ ಬಂದಿದ್ದಾರೆ. ಅವರು ವೈಸರಾಯರ ಆಮಂತ್ರಣದಂತೆ ವೈಸರಾಯರ ಭವನಕ್ಕೆ ಸಿಂಹದ ಸಹಿತ ತೆರಳಿ, ಅಲ್ಲಿ ೯೦ ನಿವಿಷಗಳ ಪರ್ಯಂತ ವೈಸರಾಯರೊಡನೆ ಸಂಭಾಷಿಸಿದುದಲ್ಲದೆ, ಸ್ವಾಮಿಗಳ, ಸಿಂಹದ ಮತ್ತೂ ವೈಸರಾಯರ ಗ್ರೂಪ್ ಫೋಟೋವನ್ನೂ ತೆಗೆಯಲಾಯಿತು. ಈ ಸ್ವಾಮಿಗಳ ಮತ್ತೂ ಸಿಂಹದ ದರ್ಶನಕ್ಕೆ ನಿತ್ಯವೂ ಸಾವಿರಾರು ಮಂದಿ ಪ್ರೇಕ್ಷಕರು ಸಿಮ್ಲಾಕ್ಕೆ ಬಂದು ಹೋಗುತ್ತಿದ್ದಾರೆ. 'ಹಿಂದೂ ತತ್ವಜ್ಞಾನವು ಕಲಿಸುವ ಆತ್ಮಿಕಬಲದಿಂದ ಕಾಡುಪ್ರಾಣಿಗಳನ್ನು ಸಾಧುಮಾಡಬಹುದು. ಹೀಗೆ ಆ ಬಲದಿಂದ ಸಾಧುಮಾಡಲಾದ ವನ್ಯಮೃಗಗಳು ಆ ಗವಿಗಳಲ್ಲಿ ಹೇರಳವಾಗಿವೆ. ಈ ಹೆಣ್ಣು ಸಿಂಹವು, ನಿತ್ಯವೂ ಬೆಳಿಗ್ಗೆ ಹಿಂದೂ ದೇವರ ಹೆಸರನ್ನು ಉಚ್ಚರಿಸುತ್ತದೆ' ಎಂದು ಸ್ವಾಮಿಜಿಯವರು ಅನ್ನುತ್ತಾರೆ.

ಮೌಲ್ಮಿನಿನಲ್ಲಿ ಭತ್ತದ ರಾಶಿಯನ್ನು ಸಂಗ್ರಹಿಸಿಟ್ಟ ಎರಡು ಅಕ್ಕಿ ಮಿಲ್ಲುಗಳಿಗೆ ಬೆಂಕಿ ಬಿದ್ದು ೪ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ.

ಕಾಂಗ್ರೆಸಿನ ವೃದ್ಧಪಿತಾಮಹ ಮುಖಂಡರಾದ ಮಿ. ಅಬ್ರಾಹಾಂ ತಾಯಬ್ಜಿಯವರು ಮಸೂರಿಯಲ್ಲಿ ದಿವಂಗತರಾದರು. ಇವರು ೧೮೫೪ನೇ ಇಸ್ವಿ ಫೆಬ್ರವರಿ ತಾ. ೯ರಲ್ಲಿ ಕ್ಯಾಂಬೆಯಲ್ಲಿ ಜನಿಸಿ, ಮುಂದೆ ಬಡೋದೆಯ ಹೈಕೋರ್ಟು ಜಸ್ಟೀಸ್‌ರಾಗಿ ನಿವೃತ್ತರಾದರು. ಈ ಮಹನೀಯರು ಹೋಮ್ ರೂಲ್ ಚಳವಳಿ, ಅಸಹಕಾರ ವ್ರತ, ಶಾಸನಭಂಗ ಚಳವಳಿಗಳಲ್ಲಿ ಆಸಕ್ತಿ ವಹಿಸಿದ್ದು, ಉಗ್ರ ಕಾಂಗ್ರೆಸ್ ಪಂಥದವರಾಗಿದ್ದರು. ಮೃತರ ಗೌರವಾರ್ಥವಾಗಿ ಅಂದು ಬೊಂಬಾಯಿಯ ಅರಳಿ ಮಾರ್ಕೆಟ್‌ನ್ನು ಮುಚ್ಚಲಾಯಿತು.

(೧೨ನೇ ಪುಟದಿಂದ)

ಬೆಳಗ್ಗೆ ಗಂಟೆ ೧೦ಕ್ಕೆ, ಇಲ್ಲಿಯ ಹೆಡ್ ಪೋಸ್ಟಾಫೀಸಿನಲ್ಲಿ, ಹೆಡ್ ಪೋಸ್ಟ್ ಮಾಸ್ಟರರಾದ ಮಿ. ಎ. ವಿ. ಫೆರ್ನಾಂಡೀಸರವರ ಅಧ್ಯಕ್ಷತೆಯಲ್ಲಿ ಜರುಗಿ, ಕೆಲವು ಕಾರ್ಯಕ್ರಮಗಳೊಡನೆ, ಈ ಸಂಘದ ಅಧಿಕಾರ ಮಂಡಲಿಯು ಬದಲಾವಣೆಗಳೂ ಆಯಿತು. ೧೯೩೬—೩೭ನೇ ಇಸ್ವಿಯ ಪ್ರೆಸಿಡೆಂಟರಾಗಿ ಮಿ. ಎ. ವಿ. ಫೆರ್ನಾಂಡೀಸರು ಆರಿಸಲ್ಪಟ್ಟಿದ್ದಾರೆ.

ಇಲ್ಲಿಯ ಮುಸ್ಲಿಂ ಉಪಾಧ್ಯಾಯರ ಸಂಘದವರ ೨ನೇ ವಾರ್ಷಿಕ ಸಭೆ ಕಳೆದ ತಾ. ೧೩ರಲ್ಲಿ ಮಹಮ್ಮಡನ್ ಹೈಯರ್ ಎಲಿಮೆಂಟರೀ ಶಾಲೆಯಲ್ಲಿ ಕೂಡಿಬಂತು. ಮಹಮ್ಮಡನ್ ರೇಂಜ್ ಶಾಲೆಗಳ ಡಿ॥ ಇನ್ಸ್‌ಪೆಕ್ಟರ್ ಮಿ. ವೊಸಿನ್ ಬಿನ್ ಅಹಮ್ಮದ್ ಬಿ. ಏ., ಎಲ್. ಟಿ. ಅಧ್ಯಕ್ಷರಾಗಿದ್ದರು. ಬದರಿಯಾ ವಿದ್ಯಾರ್ಥಿಗಳಿಂದ ದೇವರ ಪ್ರಾರ್ಥನೆಯಾಗಿ ದಿವಂಗತ ಡಾಕ್ಟರ್ ಅನ್ಸಾರಿಯವರ, ನಮ್ಮ ಜಿ॥ ಕಲೆಕ್ಟರ್ ಖಾನ್‌ಬಹದ್ದೂರ್ ಮಹಮ್ಮದ್ ಹುಮಾಯೂನ್ ಸಾಹೇಬ್ ಬಹದ್ದೂರರ ಪುತ್ರ ದಿವಂಗತ ಮಹಮ್ಮದ್ ಅಕ್ಬರ್ ಬೀ. ಏ ಯವರ, ಮದ್ರಾಸು ಲೋ ಕೋಲೇಜಿನ ಪ್ರೊಫೆಸರ್ ಡಾಕ್ಟರ್ ಹಾಮಿಡಾಲಿ, ಬಾರೆಟ್‌ಲೋರವರ ದಿವಂಗತ ಪತ್ನಿಯವರ, ಹೈದ್ರಾಬಾದಿನ ಕೋಲೇಜ್ ಪ್ರೊಫೆಸರರಾಗಿದ್ದ ದಿವಂಗತ ಮಹಮ್ಮದ್ ಮರ್ಮಡ್ಯೂಕ್ ಪಿಕ್ಥಾಲ್‌ರವರ, ಮತ್ತೂ ಗ್ವಾಲಿಯರಿನ ಚೀಫ್ ಜಸ್ಟೀಸರರಾಗಿದ್ದ ದಿವಂಗತ ಆಬ್ಬಾಸ್ ತ್ಯಬ್ಜಿ ಇವರುಗಳ ಅಕಾಲಮರಣದ ಕುರಿತು ದುಃಖಸೂಚನೆಯು ಠರಾವುಗಳಾಯಿತು. ಈ ದುಃಖಸೂಚನೆಯು ಠರಾವನ್ನು ಮೃತರ ಕುಟುಂಬದವರಿಗೆ ಕಳುಹಿಸಿ ಕೊಡಬೇಕೆಂತ ನಿರ್ಣಯಿಸಲಾಯಿತು. ತರುವಾಯ ಗತಸಭೆಯ ವರದಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಗ॥ ಹಾ॥ ಎ॥ ಟ್ರೇ॥ ಶಾಲೆಯ ಉಪಾಧ್ಯಾಯರಾದ ರಾ. ಹೋಬಯ್ಯನವರು, ಕನ್ನಡ ಪಾಠವನ್ನು ನವೀನ ವಾದ ರೀತಿಯಲ್ಲಿ ಕಲಿಸಿದರು. ರಾ. ಎಮ್. ಎನ್. ಕಾಮತರವರು ಆ ಪಾಠಕ್ರಮವನ್ನು ಕೊಂಡಾಡುವ ಮಾತುಗಳನ್ನಾಡಿ ಸಭೆಯನ್ನು ಆನಂದಗೊಳಿಸಿದರು. ಅಧ್ಯಕ್ಷರ ಸರಸವಾದ ಹಿತೋಕ್ತಿಯ ಉತ್ತಮ ಭಾಷಣವು ಸರ್ವಜನಸಮ್ಮತವಾಗಿ ನಡೆದ ಮೇಲೆ ಮುಂದಿನ ಸಭೆ ಬರುವ ಜುಲೈ ೪ರಲ್ಲಿ ಎಂದು ನಿರ್ಧಾರವಾಗಿದೆ.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. I. A. 205/36; O. S. 338/31.

ಶಿವಪ್ಪ ಪೂಜಾರಿ—**ವಾದಿ.**

ಚೆಲುವಮ್ಮ ಕೂಡ—**ಪ್ರತಿವಾದಿರು.**

ಕೂವೆಟ್ಟು ಗ್ರಾಮದಲ್ಲಿರುವ ಕುಸುಮು ನುಗಳು 14ನೇ ಪ್ರತಿವಾದಿ ಚಂದ್ರಾವತಿಗೆ.

ಮೇಲ್ಕಂಡ ವ್ಯಾಜ್ಯದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿ ಬರಕೊಂಡ ಅರ್ಜಿಯು ತಾ. 17—6—1936ಕ್ಕೆ ತನ್ನಿಗೆ ಇಟ್ಟಿರುವದರಿಂದ ಸದರಿ ವ್ಯಾದೆಗೆ, ನಿನ್ಮ ಆಕ್ಷೇಪ ಇದ್ದರೆ, ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

ಪುತ್ತೂರು, ತಾ. 10—6—36. } **B. Chidanand Rao,** Pleader for Plaintiff.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 106/1936

ರಾಜೀವಿ ಯಾನೆ ಲಕ್ಷ್ಮಿ ಬಾಯಿ—**ವಾದಿಳು.**

ಸುಬ್ರಹ್ಮಣ್ಯ ಆಚಾರ್ಯ ಕೂಡಾ 4 ಜನರು—**ಪ್ರತಿವಾದಿರು.**

ಕಾರ್ಕಳ ಕಸಬೆಯಲ್ಲಿರುವ ವಾಮನ ಆಚಾರ್ಯರ ಮಗ ಸದ್ರಿ ದಾವೆಯ 1ನೇ ಪ್ರತಿವಾದಿ ಸುಬ್ರಹ್ಮಣ್ಯ ಆಚಾರ್ಯರ್ಗಿಗೆ—ನೀವು ವಾದಿಳಿಗೆ ಕಳೆದ ತಾರೀಕು 18-9-1925ರಲ್ಲು ರಿಜಿಸ್ಟ್ರಿ ನಿಶಿಂ ಬರೆಯಿಸಿಕೊಟ್ಟ ತೋರಡವು ದಸ್ತಾವೇಜು ಬಾಬ್ತು ಬಹಾ ಐವೇಜು ಬರಮಾಡುವರೆ ದಾಖಲು ಮಾಡಿದ ಸದ್ರಿ ದಾವೆಯು ತಾ. 9—7—1936ಕ್ಕೆ ನಿನ್ಮ ಹಾಜರಾತಿ ಬಗ್ಗೆ ಇಟ್ಟಿದೆ. ಆದುದರಿಂದ ನೀವು ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗದಿದ್ದರೆ ನಿನ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು—ತಿಳಿದಿರುವುದು.

(ಕೋರ್ಟು ಹುಕುಂ ಪ್ರಕಾರ)

ಕಾರ್ಕಳ, 14—6—1936. } **K. Venkatesha Pai,** ವಾದಿಳ ಕಡೆ ವಕೀಲ್.

ವಿದೇಶ

ಲಂಡನಿನಲ್ಲಿ ಸೈಂಟ್ ಜೇವ್ಸ್ ಪಾರ್ಕಿನ ಒಂದು ಕೊಳದಲ್ಲಿ ಕಾಲು ಜಾರಿ ಬಿದ್ದ ಒಬ್ಬ ಚಿಕ್ಕ ಹುಡುಗನನ್ನು ಅಲ್ಲಿ ಸಂಚರಿಸುತ್ತಿದ್ದ ಅರ್ಥಸಚಿವರಾದ ಮಿ. ನೆವಿಲ್ಲ ಚೇಂಬರ್‌ಲೀನ್‌ರವರು ಮೇಲಕ್ಕೆತ್ತಿ ಕಾಪಾಡಿದರು.

'ಗೆದ್ದ ಇತಿಯೋಪಿಯದ ಭಾಗಗಳಲ್ಲಿ ಪ್ರಜೆಗಳು ಪ್ರಭುತ್ವದ ಮೇಲೆ ತಿರುಗಿ ಬೀಳುತ್ತಿದ್ದಾರೆ. ಇತಿಯೋಪಿಯದ ಮೂರನೇ ಒಂದು ಭಾಗವನ್ನು ಹಳೇ ಅಧಿಕಾರಿಗಳೇ ಆಳುತ್ತಿದ್ದಾರೆ' ಎಂದು ಅಬಿಸೀನಿಯದ ಮಾಜೀ ಚಕ್ರವರ್ತಿಗಳು ಲಂಡನಿನ ಒಂದು ಸಾರ್ವಜನಿಕ ಸಭೆಯಲ್ಲಿ ನುಡಿದಿರುವರು.

ಮಾರ್ಶಲ್ ಬಾಡೋಗ್ಲಿಯವರಿಗೆ ಎಡಿಸ್‌ಅಬಾಬದ ಡ್ಯೂಕ್ ರಾಗಿದ್ದಾರೆ. ಅವರೇ ಅಲ್ಲಿನ ಜನರಲ್ ಸ್ಟಾಫಿನ ನಾಯಕರು.

ಪಾಲಸ್ತೈನಿನಲ್ಲಿ ಅಶಾಂತಿಯಣಗಲಿಲ್ಲ. ಈಜಿಪ್ಟಿನಿಂದ ಬರುತ್ತಿದ್ದ ಇಂಜಿನಿಯರುಗಳ ಒಂದು ಟ್ರೈಯಿನಿನ ಕಂಬಿಯನ್ನು ತಪ್ಪಿಸಿ ಉರುಳಿಸಿದುದಾಯಿತು. ಸರಕಾರದ ಕಡೆಯಿಂದ ಸೈನ್ಯಬಲವನ್ನು ಹೆಚ್ಚಿಸಲಾಗಿದೆ.

ಕಾಮನ್ಸ್ ಮಂದಿರದಲ್ಲಿ ಮಿ. ಜೆ. ಎಚ್. ಥಾಮಸ್‌ರವರು ತಮ್ಮ ಬಜೆಟ್ ರಹಸ್ಯದ ಪ್ರಕಟಣೆಯ ಕುರಿತಾದ ಹೇಳಿಕೆಯನ್ನು ಕೊಟ್ಟು ಆ ಮಂದಿರದ ತಮ್ಮ ಸದಸ್ಯತನಕ್ಕೆ ರಾಜೀನಾಮೆ ಎಂದರು. ಅವರೊಂದಿಗೆ ಸರ್ ಆಲ್ಫ್ರೆಡ್ ಬಟ್‌ರವರ ಹೇಳಿಕೆಯೂ ಮುಗಿದು, ಅವರ ಅಲ್ಲಿನ ಮೆಂಬರಿಕೆಗೂ ಕೃಷ್ಣಾರ್ಪಣವಾಯಿತು.

ಶಿವಂಗತ ಅರಸರಾದ ಜಾರ್ಜರವರ ಸ್ಮಾರಕನಿಧಿಗೆಂದು ಬ್ರಿಟನಿನಲ್ಲಿ ೬೦ ಸಾವಿರ ಪೌಂಡುಗಳ ಸಂಗ್ರಹವಾಗಿದೆ;

ಅಜ್ಞಾತವಾಸದಲ್ಲಿರುವ ಚಕ್ರವರ್ತಿಗಳಾದ ಹೈಲ್ ಸಿಲೇಸಿಯವರನ್ನು ಡ್ಯೂಕ್ ಆಫ್ ಗ್ಲಾಸಸ್ಟರವರು ಕಂಡು ಮಾತಾಡಿದರು.

ಪಾಲೆಸ್ತೈನಿನಲ್ಲಿ ಗಲಭೆಯಾರಂಭವಾದಂದಿನಿಂದ ೧೪೯೦ ಮಂದಿಯ ದಸ್ತಗಿರಿಯಾಗಿದೆ. ಇವರಲ್ಲಿ ೧೬೧೩ ಮಂದಿ ಅರಬರು. ಈ ಅರಬರಲ್ಲಿ ೬೫೪ ಮಂದಿಗೆ ಶಿಕ್ಷೆ ವಿಧಿಸಲಾಗಿದೆ. ಮಿಕ್ಕವರ ವಿಚಾರವಾಗುತ್ತಿದೆ. ಹಾಗೆಯೇ ಅಪರಾಧಿಗಳಾದ ೧೦೪ ಮಂದಿ ಯಹೂದ್ಯರಿಗೆ ದಂಡನೆಯಾಗಿ ೧೭ ಮಂದಿಗೆ ಬಿಡುಗಡೆಯು ದೊರಕಿದೆ.

ಅಫಘಾನಿಸ್ಥಾನದ ಮಾನ್ಯ ನೃಪತಿಗಳಾದ ಜಾಹಿರ್ ಶಹರವರು ತಮ್ಮ ದೇಶದ ವಿದ್ಯಾಭಿವೃದ್ಧಿಗಾಗಿ ೨ ಲಕ್ಷ ಅಫಘಾನ್ ರೂಪಾಯಿಗಳ ಗ್ರಾಂಟನ್ನು ದಯಪಾಲಿಸಿದರು. ಅಲ್ಲಿನ ಮಹಾರಾಣಿ ಮಾತೋಶ್ರೀಯವರು, ಅಲ್ಲಿನ ಹೆಂಗಸರ ಆಸ್ಪತ್ರೆಗಳ ವೃದ್ಧಿಗಾಗಿ ೧ ಲಕ್ಷ ಅಫಘಾನ್ ರುಪಾಯಿಗಳ ಗ್ರಾಂಟನ್ನು ಕೊಟ್ಟಿರುವರು.

ಮಲಘಾದಲ್ಲಿ ಒಂದು ದೊಡ್ಡ ಮುಷ್ಕರ. ದೊಡ್ಡ ಗಲಭೆ. ಗುಂಡಿನ ಹಾರಾಟದಲ್ಲಿ ಮುನ್ಸಿಪಲ್ ಪೋಲಿಸರ ನಾಯಕರು ಸತ್ತರಲ್ಲದೆ, ಮಕ್ಕಳೆಂದೂ ಇತರರೆಂದೂ ಗುಂಡಿನಿಂದ ಮೃತರಾದವರ ಸಂಖ್ಯೆ ಸುಮಾರು ೧೨.

ಜೆರೂಸಲೇಮ್ ಪ್ರಾಂತದಲ್ಲಿ ಪೋಲಿಸ್ ಅಧಿಕಾರಿಗಳ ಮೇಲೆ ಗುಂಡು ಹಾರುತ್ತಾ ಇದೆ. ಅವರ ಬಂಗಲೆಗಳ ಮೇಲೂ ಗುಂಡೇಟ್ಟಿನಿಸ ಮೇಲೆ ಬಾಂಬುಗಳು.

ಕರ್ನಾಟಕ

ಬಿಜಾಪುರದಲ್ಲಿ ವಿಠೋಬ ಮಂದಿರದ ಕಲಶ ಪ್ರತಿಷ್ಠೆಯ ದಿವಸ ಸಾವಿರಾರು ಮಂದಿ ಹರಿಜನರೂ, ಮೇಲ್ಜಾತಿಯ ಹಿಂದೂಗಳೂ ಸಹಭೋಜನದಲ್ಲಿ ಸಹಭಾಗಿಗಳಾದರು. ಈ ಪುಣ್ಯಕಾರ್ಯಕ್ಕಾಗಿ ಶ್ರೀ. ಬಾಜೀರಾವ್ ಗೋಡ್‌ಖಿಂಡಿ ಎಂಬ ಮಹನೀಯರು ಬೇಕಾದಷ್ಟು ಹಣವನ್ನು ವೆಚ್ಚ ಮಾಡಿ ಕೃತಕೃತ್ಯರಾದರು. ಅಂದಿನ ಮೆರವಣಿಗೆ, ಪೂಜೆಗಳಲ್ಲಿ ಹರಿಜನರೂ ಮೇಲ್ಜಾತಿಯ ಹಿಂದೂಗಳೂ ಒಂದಾಗಿ ಸಹೋದರರಂತೆ ವರ್ತಿಸಿದರು.

ಮೈಸೂರಿನ ಶ್ರೀಮನ್ಮಹಾರಾಜರವರು ಆರೋಗ್ಯಕ್ಕಾಗಿ ಈ ತಿಂಗಳ ೩೦ರಲ್ಲಿ ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಸಹಿತ ಇಂಗ್ಲೆಂಡಿಗೆ ಪ್ರಯಾಣ ಬೆಳೆಸುವರು. ಮಹಾರಾಜರ ಪ್ರಯಾಣವಿದು ವಿದೇಶಕ್ಕೆ ಮೊದಲನೆಯ ಸಲ. ಮಹಾಪ್ರಭುಗಳಿಗೆ ಸುಖಪ್ರಯಾಣವನ್ನು ಹಾರೈಸುವುದರೊಂದಿಗೆ, ಅವರು ಸಂಪೂರ್ಣ ಆರೋಗ್ಯಲಾಭವನ್ನು ಹೊಂದಿ ಸ್ವದೇಶಕ್ಕೆ ಹಿಂದಿರುಗುವಂತೆ ಜಗದೀಶ್ವರನು ಅನುಗ್ರಹಿಸಲೆಂದೂ ಹಾರೈಕೆ.

ರಾಮಮೋಹನ ಕಂಪೆನಿಯವರ

ಉತ್ತರ ಹಿಂದೂಸ್ತಾನವ

ಯಾತ್ರಾಪ್ರವಾಸ.

ಜುಲಾಯಿ–ಸೆಪ್ಟೆಂಬರ್ ೧೯೩೬.

ಜುಲಾಯಿ ತಿಂಗಳು ೨೯ನೇ ತಾರೀಕು ಬೆಂಗಳೂರು ಸಿಟಿ ಸ್ಟೇಶನ್ ಬಿಟ್ಟು—ತುಂಗಭದ್ರ (ಮಂತ್ರಾಲಯ), ಪಂಢರಪುರ, ನಾಸಿಕ (ಪಂಚವಟಿ, ತ್ರಿಯಂಬಕ), ಬೊಂಬಾಯಿ, ಬ್ರೋಚ್ (ನರ್ಮದೆ), ಬರೋಡಾ, ಡಾಕೂರು (ಶ್ರೀ ಕೃಷ್ಣ ತುಲಾಭಾರ), ಜಾಂನಗರ, ದ್ವಾರಕೆ, ಸಿದಪೂರ (ಮಾತೃಗಯೆ), ಅಬು, ಅಜ್ಮೀರ್ (ಪುಷ್ಕರ), ಜಯಪೂರ, ಆಗ್ರಾ, ಮಥುರಾ (ಬೃಂದಾವನ, ಗೋಕುಲ, ಗೋವರ್ಧನ), ನ್ಯೂ ಡಿಲ್ಲಿ (ಹಸ್ತಿನಾಪುರ), ಕುರುಕ್ಷೇತ್ರ, ಹರಿದ್ವಾರ (ಹೃಷೀಕೇಶ), ನೈಮಿಶಾರಣ್ಯ, ಅಯೋಧ್ಯೆ (ನಂದಿಗ್ರಾಮ), ಪ್ರಯಾಗ (ತ್ರಿವೇಣಿ, ಅಲಹಾಬಾದು), ಚಿತ್ರಕೂಟ, ವಿಂಧ್ಯಾಚಲ, ಶ್ರೀ ಕಾಶಿ, ಗಯೆ, ಕಲ್ಕತ್ತೆ, ಪೂರಿ ಜಗನ್ನಾಥ, ಸಿಂಹಾಚಲ, ರಾಜಮಂದಿರ (ಗೋದಾವರಿ), ಮದರಾಸು ಇವುಗಳನ್ನೆಲ್ಲಾ ಸುತ್ತಿಕೊಂಡು ಸೆಪ್ಟೆಂಬರ್ ೩೪ನೇ ತಾರೀಕು ಬೆಂಗಳೂರು ಸಿಟಿಗೆ ವಾಪಸು ಬಂದು ಸೇರುವುದು.

ಮೂರನೇ ತರಗತಿ ಛಾರ್ಜು ರೂ. ೧೬೦.

ಹೆಚ್ಚು ಮಾಹಿತಿಗೆ:— ರಾಮಮೋಹನ ಕಂಪೆನಿ,

4, 16-6. ೩೫, ತಂಬುಚೆಟ್ಟಿ ಬೀದಿ, ಮದರಾಸು.

ಗ್ರಹಚಾರ ಯಾವುದು? ಬಂದಿದೆ ಯಾರ ತಲೆಯ ಮೇಲೆ?

(ಬರೆದು ಬಂದುದು.)

ಮದ್ರಾಸ್ ಆಧಿಪತ್ಯಕ್ಕೆಲ್ಲ ಹೆಣ್ಣು ಮಕ್ಕಳ ಉಚ್ಚ ವಿದ್ಯಾಭ್ಯಾಸಕ್ಕಿರುವ ಸರಕಾರೀ ಕಾಲೇಜು ಒಂದೇ—ಕ್ವೀನ್ ಮೇರೀಸ್ ಕಾಲೇಜು.

ಅಲ್ಲಿ ಕನ್ನಡವೂ ಇದ್ದಿತು. ಮೊದಲು ಅಲ್ಲಿಯೊಬ್ಬ ಗಂಡು ವಿದ್ವಾನರಿದ್ದರು. ಅವರನ್ನು ವರ್ಗಾಯಿಸಿದರು. ಆ ಮೇಲೆ, ಬದಲಿಗೆ ಒಬ್ಬ ಹೆಣ್ಣು ಪಂಡಿತರಿದ್ದರು. ಅವರನ್ನು 'ಹೋಗಿ' ಎಂದರು. ಅಂತೂ, ಕನ್ನಡವಿದ್ದಿತಲ್ಲಿ, ಇಲ್ಲಿಯವರೆಗೆ. ಇನ್ನೆನೋ ಶಿವ ಬಲ್ಲ!

ದಕ್ಷಿಣ ಕನ್ನಡದಿಂದ ಕನ್ನಡ ಕಲಿಯುವ ಆಪೇಕ್ಷೆಯುಳ್ಳ ವಿದ್ಯಾರ್ಥಿನಿಯರು, ಅಲ್ಲಿ ಪ್ರವೇಶಕ್ಕಾಗಿ ಹಾರೈಸಿದರು. ಉತ್ತರ ಅದಕ್ಕೆ ಹೀಗೆಂದು ತಿಳಿದುಬರುತ್ತಿದೆ. 'ಈ ಕಾಲ ಕನ್ನಡದಲ್ಲಿ ಇಲ್ಲಿ ಶಿಕ್ಷಣ ದೊರಕುವುದು ಸಂಶಯ; ಆದ್ದರಿಂದ ಅಂತವರಿಗೆ ಪ್ರವೇಶ ದೊರಕುವುದೂ ಇಲ್ಲಿ ಸಂದೇಹ'. ಒಟ್ಟಿನಲ್ಲಿ, ಕನ್ನಡ ವಿದ್ಯಾರ್ಥಿನಿಯರ ಪಾಡು. ಅವರ ಹಾದಿ ಅವರಿಗೆ. ಇಷ್ಟೊಂದು ಸರಾಗದ ಮಾರ್ಗ ಯಾವ ಧರ್ಮರಾಯರು ತಾನೇ ತೋರಿಸಿಕೊಟ್ಟಾರು?

ಕನ್ನಡಕ್ಕೆ ಅಲ್ಲಿ ಈ ಬಾರಿ ಪಂಡಿತರುಗಂಡೂ, ಹೆಣ್ಣೂ ಯಾರೂ ಇಲ್ಲವೇ? ಏತಕ್ಕೆ? ಇದುವರೆಗೆ ಇದ್ದುದು ಇಂದೇಕೆ ಹೀಗೆ 'ಸಂಶಯ'ದಲ್ಲಿ ಬಿದ್ದಿದೆ? ಪಂಡಿತರ ಅಭಾವದಿಂದ ಕನ್ನಡ ವಿದ್ಯಾರ್ಥಿನಿಯರಿಗೆ ಪ್ರವೇಶವಿಲ್ಲವೆಂದಾದರೆ, ಮುಂದೆ ವಿದ್ಯಾರ್ಥಿನಿಯರ ಅಭಾವದಿಂದ ಕನ್ನಡದ ಪಂಡಿತರ ಇಸಮೇ ಬೇಡವೆಂದಾಗದೇ?

ಮದ್ರಾಸ್ ಆಧಿಪತ್ಯದಲ್ಲಿ ಕನ್ನಡದ ವಿದ್ಯಾರ್ಥಿನಿಯರಿದ್ದಾರೆ—ಬಳ್ಳಾರಿಯಲ್ಲಿ; ಅನಂತಪುರದಲ್ಲಿ; ದಕ್ಷಿಣ ಕನ್ನಡದಲ್ಲಿ. ಕೊನೆಗೆ ಮದ್ರಾಸಿನಲ್ಲಿಯೂ. ಈ ಹೆಣ್ಣುಮಕ್ಕಳು ಕನ್ನಡವನ್ನು ಎಲ್ಲಿ ಕಲಿಯಬೇಕು? ತಮಿಳು, ತೆಲುಗೇ ಮೊದಲಾದ ಸಾಹಿತ್ಯಗಳನ್ನು ಇಂತಹ 'ನಂಬೂದಿರಿಯ ಶಂಕಾಪ್ರಕರಣ'ದಲ್ಲಿ ಮುಳುಗಿಸಿದ್ದರೆ, ಅವರು ನಮ್ಮಂತೆ ಸುಮ್ಮನಿರುತ್ತಿರಲಿಲ್ಲ. ಕಿತ್ತಾಟಕ್ಕೆ ಹೊರಡುತಿದ್ದರು. ಆದರೆ ಇದು ಕನ್ನಡ. ನಿರ್ನಾಮವಾದರೂ ಯಾರಿಗೇನು ನಷ್ಟ?

ಮದ್ರಾಸಿನಲ್ಲಿ ಸುಪ್ರಸಿದ್ಧರಾದ ಕನ್ನಡಿಗರು ಅನೇಕ ಮಂದಿ ಇದ್ದಾರೆ. ಅವರಲ್ಲಿ ಯಾರಾದರೂ ಕನ್ನಡದ ವಿದ್ಯಾರ್ಥಿನಿಯರಿಗೊದಗಿದ ಈ ಸಂಕಷ್ಟದ ಮರ್ಮವೇನೆಂದು ತಿಳಿದರೇ? ಇನ್ನಾದರೂ ತಿಳಿದಾರೇ? ಕನ್ನಡದ ಪರವಾಗಿ 'ಬಿನ್ನಪವಲಾಲಿಸೈ' ಎಂದು ಇದ್ದುದನ್ನಾದರೂ ಇಡವಂತೆ, ಮೇಲಿನ ಅಧಿಕಾರಿಗಳಲ್ಲಿ ಕೇಳಿಕೊಂಡಾರೇ? ಅಥವಾ ಕನ್ನಡದ ಮೇಲಿರುವ ಅಭಿಮಾನದಿಂದ, 'ಕನ್ನಡ ಹಾಳಾಗಲಿ; ನಮ್ಮ ಹೆಣ್ಣು ಮಕ್ಕಳಿಗೆ ತಮಿಳಿದೆ; ತೆಲುಗಿದೆ. ನಮಗಷ್ಟು ಸಾಕು' ಎಂದು ಕೊಂಡಾರೇ?

ಇರುವ ಒಂದು ಸರಕಾರಿ ಕಾಲೇಜಿನಲ್ಲಿ, ಕನ್ನಡ ವಿದ್ಯಾರ್ಥಿನಿಯರಿಗೆ ಪ್ರವೇಶವು ದೊರಕದೆಂದು ಬಾಗಿಲು ಚಾಚುವುದು ತುಂಬ ಅನುಚಿತ. ಒಂದು ವೇಳೆ, ಕನ್ನಡ ವಿದ್ಯಾರ್ಥಿನಿಯರ ಸಂಖ್ಯೆ ಸಾಕಷ್ಟಿಲ್ಲ; ಪ್ರಾಂಡಿತರನ್ನು ಇಡಲು ಸಾಧ್ಯವಿಲ್ಲ. ಇಟ್ಟರೆ ಸರಕಾರಕ್ಕೆ ನಷ್ಟವೆಂದಿದ್ದರೆ ಅದಾದರೂ ಪ್ರಕಟವಾಗಲಿ. ಆಗ ಈ ಕಾಲೇಜಿನ ಯಾವ ಯಾವ ಶಾಖೆಗಳಿಂದ ಎಷ್ಟು ಆದಾಯವೆಂದು ವಿಚಾರಿಸಬಹುದಾಗುತ್ತದೆ.

ನಿಖಿಲ ಕರ್ನಾಟಕದ ನಮ್ಮ ಪರಿಷತ್ತು, ಈ ನ್ಯಾಯದ ಕುರಿತು ಕೊಂಚ ವಿಚಾರ ನಡೆಸುವುದು ಅಪ್ರಕೃತವಾಗದು.

(೩ನೇ ಕಲಮಿನಿಂದ)

ಲ್ಪಟ್ಟ ರಾಸುಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದಕ್ಕೆ ಅಪೇಕ್ಷಿಸುವ ಪ್ರಾಂತ್ಯಗಳಿಗೆ ಪ್ರತಿಯೊಂದು ಸಹಾಯವನ್ನೀಯಲು ನಾನು ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರೀಸರ್ಚಿನ ಎನಿಮಲ್ ಹಸ್ಬೆಂಡ್ರಿ ಎಕ್ಸ್‌ಪರ್ಟರಾದ ಕರ್ನಲ್ ಓಲ್ವರ್ ರೊಡನೆ ಪ್ರತ್ಯೇಕ ಏರ್ಪಾಡು ಮಾಡಿದ್ದೇನೆ ಈ ವಿಚಾರದಲ್ಲಿ ಉಪಯೋಗ ಬೀಳುವಂಥಾ ಒಂದು ಸೂಚನಾ ಪತ್ರವನ್ನು ಇಂಪೀರಿಯಲ್ ಕೌನ್ಸಿಲ್ ಒಫ್ ರಿಸರ್ಚ ಸಂಸ್ಥೆ ಎಲ್ಲಾ ಸ್ಥಳೀಯ ಸರಕಾರಗಳಿಗೂ ಕೌನ್ಸಿಲಿನ ಪ್ರಾತಿನಿಧ್ಯವಿರುವ ಎಲ್ಲಾ ದೇಶೀಯ ಸಂಸ್ಥೆಗಳಿಗೂ ಪ್ರಚಾರಗೊಳಿಸುತ್ತಿದೆ.

ನನ್ನ ಆಳಿಕೆಯ ಕಾಲದಲ್ಲಿ ಕೃಷಿಕರ ಉನ್ನತಿಗಾಗಿಯೂ, ಹಳ್ಳಿಗಾಡುಗಳ ಉದ್ಧಾರಕ್ಕಾಗಿಯೂ ನನ್ನ ಕೈಲಾದಷ್ಟು ಯತ್ನಿಸುವೆನೆಂದು ಆಶ್ವಾಸನವನ್ನೀಯುತ್ತೇನೆ. ಈ ನನ್ನ ಮನವಿಯನ್ನು ಮುಗಿಸುವ ಮೊದಲು ನಾನು ಸೂಚಿಸಿರುವ ಈ ಕಾರ್ಯಕ್ರಮಗೆಳಿಗಿಂತಲೂ ಮಿಗಿಲಾದ ಬೇರೆ ಸಹಾಯಕಾರಿಯಾದ ಉಪಾಯವು ಭಾರತದ ಭಾವೀ ಕೃಷಿಯ ವಿಷಯದಲ್ಲಾಗಲಿ, ಗ್ರಾಮೋದ್ಧಾರದ ವಿಷಯದಲ್ಲಾಗಲಿ ಇರಲಾರದೆಂದು ನನಗೆ ತೋರುತ್ತದೆ. ಆ ಮನವಿಗೆ ಬಹು ಉದಾರವೂ ವಿಸ್ತಾರವೂ ಆದ ಜನಸಾಮಾನ್ಯದ ಸಹಕಾರವು ದೊರೆಯದೆ ಇರದೆಂದು ನನ್ನ ಆತುರಪೂರ್ವಕವಾದ ಆಶಯವು.

ವ್ಯಾಸರಾಯರ ಪತ್ರ

ನಮ್ಮ ವ್ಯಾಸರಾಯಿಯವರು ಇದೇ ತಾ. ೨೮ರಲ ನಮ್ಮ ಮದ್ರಾಸು ಗವರ್ನರರಿಗೆ ಬರೆದ ಪತ್ರವನ್ನು ಸಾವ ಜನಿಕರ ತಿಳುವಳಿಕೆಗಾಗಿ ಇಲ್ಲಿ ಕೊಡಲಾಗಿದೆ.

ನಾನು ರೊಯಲ್ ಕಮಿಶನ್ ಸಂಬಂಧವಾಗಿ ಹಿಂದ ಸ್ಥಾನವನ್ನು ಸಂದರ್ಶಿಸಿದಾಗಲೂ, ನನ್ನ ದೇಶದಲ್ಲೂ, ನಾನ ಜಾನುವಾರುಗಳ ಅಭಿವೃದ್ಧಿಯ ವಿಷಯವಾಗಿ ಬಹಳವಾ ಚಿಂತಿಸಿರುತ್ತೇನೆಂಬ ಸಂಗತಿ ಮಾನ್ಯರಾದ ತಮಗೆ ಗೊತ್ತಿ. ಈಗಲೂ ನಾನು ಇಲ್ಲಿನ ಗೋಪಾಲನೆಗೆ ನನ್ನಿಂದ ಸಾಧ್ಯವಾದಷ್ಟು ಸಹಾಯಮಾಡಲೂ ಮೇವಿನ ಸರಬರಾಯಿ ವೃದ್ಧಿಗೊಳ್ಳುವಂತೆ ಏರ್ಪಡಿಸಲೂ ಪ್ರಯತ್ನಿಸುವೆನು. ಪ್ರಕೃತ ಮೇವಿನ ವಿಚಾರವನ್ನು ಸರಕಾರಿ ಧೋರಣೆಯಂತೆ ಆಲೋಚಿಸಲು ಬಿಡುತ್ತೇನೆ–ಯಾಕಂದರೆ ಮೇವಿನ ಸರಬರಾಯಿ ಇಲ್ಲದೆ ಗೋಪಾಲನೆಯನ್ನು ವೃದ್ಧಿಗೊಳಿಸುವುದು ಕಷ್ಟಸಾಧ್ಯ.

ತಮ್ಮ ಘನ ಸರಕಾರವು ಗೋಪಾಲನೆಯ ವೃದ್ಧಿಗಾಗಿ ಆಗಲೇ ಎಷ್ಟೋ ಮಾಡಿ ಮುಗಿಸಿದೆ. ಹಣಕಾಸಿನ ಬಲವು ಹೆಚ್ಚಾಗಿದ್ದರೆ ಸ್ಥಿತಿಯು ಇನ್ನಷ್ಟು ಅನುಕೂಲವಾಗಿರುತ್ತಿದ್ದಿತು. ಈಗ ಇದಕ್ಕೆ ಬಿನ್ ಸರಕಾರಿ ಬೆಂಬಲವು ಆಕರ್ಷಿಸಲ್ಪಡುವಂತೆ ಎಲ್ಲೆಲ್ಲಿಯೂ ಪ್ರಯತ್ನಿಸುವುದರಲ್ಲಿ ನಾನು ಆತುರಗೊಂಡಿದ್ದೇನೆ. ತಮ್ಮ ಮತ್ತು ಕೃಷಿ ಇಲಾಖೆಯ ಮಂತ್ರಿಗಳ ಸದಭಿಪ್ರಾಯವನ್ನು ಸ್ವಾಗತೀಕರಿಸುತ್ತೇನೆ.

ತಮಗೆ ತಿಳಿದಿರುವಂತೆ ನಾನು ಅಧಿಕಾರವನ್ನು ಸ್ವೀಕರಿಸಿದೊಡನೆ ಧಿಲ್ಲಿ ಜಿಲ್ಲೆಯ ಕೃಷಿಕರಿಗಾಗಿ ಮೂರು ಉತ್ತಮ ರಾಸುಗಳನ್ನು ದಾನ ಮಾಡಿ ಈ ಉದಾಹರಣೆಯನ್ನನುಸರಿಸಿ ಹಣವಂತರಿಗೂ, ಪ್ರಮುಖರಿಗೂ, ಪಿಂಜ್ರಾ ಪೋಲ್ ಮೊದಲಾದ ಗೋಪಾಲನಾ ಸಂಸ್ಥೆಗಳಿಗೆ ಉತ್ತಮ ರಾಸುಗಳನ್ನು ಕೊಡುವಂತೆ ಕೇಳಿಕೊಂಡೆನು. ಅಲ್ಲದೆ ಅನಂತರ ಈ ಜಾನುವಾರುಗಳ ವೃದ್ಧಿಗೆ ಅಗತ್ಯವಿರುವ ಕೆಲವು ಅಗತ್ಯ ಸಂಗತಿಗಳ ಕಡೆಗೆ ಅವರ ಲಕ್ಷ್ಯವನ್ನು ಸೆಳೆದೆನು. ಸರಕಾರಿ ಫಾರ್ಮುಗಳಲ್ಲಿರತಕ್ಕ ರಾಸುಗಳ ಉಪಯೋಗವನ್ನು ಪಡೆಯತಕ್ಕುದೆಂದೂ ಅಲ್ಲದೆ ಅವು ಆಯಾಯ ಜಿಲ್ಲೆಯ ಪಡನಗಳ ಪರಿಸ್ಥಿತಿಗೆ ತಕ್ಕಂತಿರಬೇಕೆಂದೂ, ಇವುಗಳ ಸಂತಾನದಾಖಲೆಯನ್ನಿಡಬೇಕೆಂದೂ, ಮೇಲಾಗಿ ಈ ದಾನಮಾಡಲ್ಪಟ್ಟ ರಾಸುಗಳ ಕರುಗಳನ್ನೇ ಸಕಾರಣ ಬೆಲೆಗೆ ಮಾರಬೇಕೆಂದೂ, ಅಂತೂ ಜಿಲ್ಲೆಯ ಜಾನುವಾರುಗಳ ಸ್ಥಿತಿಗತಿಗಳು ಪ್ರತಿಯೊಂದು ವಿಧದಲ್ಲಿಯೂ ವೃದ್ಧಿಗೊಳ್ಳುವಂತಾಗಬೇಕೆಂದೂ ಸೂಚಿಸಿದೆನು.

ನಾನು ಮಾಡಿದ ಮನವಿಯು ಕೊಂಚ ಫಲ ಬಿಟ್ಟಿತೆಂದು ತಿಳಿಸಲು ಸಂತೋಷಿಸುತ್ತೇನೆ. ಪತ್ರಿಕೆಗಳು ನನ್ನ ಯೋಜನೆಗೆ ಸಂಪೂರ್ಣ ಬೆಂಬಲ ಕೊಟ್ಟಿದ್ದಕ್ಕಾಗಿ ನಾನು ತುಂಬಾ ಕೃತಜ್ಞನು ಅಲ್ಲದೆ, ನನ್ನ ಈ ಮನವಿಗೆ ಚಿಕ್ಕ ಚಿಕ್ಕ ಭೂಮ್ಯಾಲಕರೂ ಸಾಮಾನ್ಯ ಆದಾಯವುಳ್ಳವರೂ ಸಹಕರಿಸಿದ್ದಾರೆಂದು ತಿಳಿಯಲು ಅತ್ಯಾನಂದವಾಗುತ್ತದೆ.

ಮೇಲೆ ಸೂಚಿಸಲಾದ ವಿಧಾನಗಳ ಕುರಿತು ಮಾನ್ಯರಾದ ತಮ್ಮ ಮತ್ತು ತಮ್ಮ ಕೃಷಿಶಾಖೆಯ ಮಂತ್ರಿಗಳ ಸದಭಿಪ್ರಾಯವನ್ನು ನನಗೆ ಅನುಗ್ರಹಿಸಬಹುದು. ಇದರ ಸೌಕರ್ಯಗಳೇನೆಂಬುದು ಸ್ಪಷ್ಟ. ಈ ರಾಸುಗಳ ಸ್ಥಿತಿಯನ್ನು ಉತ್ತಮಗೊಳಿಸುವುದು ಪ್ರಾಚೀನ ಸಂಪ್ರದಾಯಗಳಿಗನುಸಾರವಾಗಿದ್ದು, ಸರ್ವತ್ರ ಆದರ ಸತ್ಪರಿಣಾಮವು ಆಗಬೇಕಾಗಿದ್ದು, ದೂರದ ಹಳ್ಳಿಗಳಲ್ಲೂ ಕೂಡ ಆದರ ಫಲವು ಪ್ರತಿಬಿಂಬಿಸಬೇಕಾಗಿದೆಯಲ್ಲದೆ ಸರಕಾರಿ ಫಾರ್ಮುಗಳಲ್ಲಾಗಲಿ ಇತರ ಕಡೆಗಳಲ್ಲಾಗಲಿ ಈ ಉತ್ತಮ ರಾಸುಗಳ ಸಮೂಹವು ಸಾಮಾನ್ಯ ಬೆಲೆಗೆ ಸಿಗುವಂತಾಗಬೇಕು. ಇದರಂತೆ ತಾವು ದಯವಿಟ್ಟು ತಮ್ಮ ಪ್ರಾಂತದಲ್ಲಿಯೂ ತಕ್ಕ ಏರ್ಪಾಡುಗಳನ್ನು ಮಾಡುವಿರಾಗಿ ನಂಬುತ್ತೇನೆ. ಹಾಗೂ ಪತ್ರಿಕೆಗಳ ಸಹಕಾರವನ್ನು ಸಂಪಾದಿಸಿ ತನ್ಮೂಲಕ ಈ ಪತ್ರಿಕಾಪ್ರಚಾರದ ವ್ಯಯೋಜನವನ್ನು ಪೂರ್ಣವಾಗಿ ಅಥವಾ ಅಂಶವಾಗಿ ತಮ್ಮ ಪ್ರಾಂತದ ಆಂಗ್ಲ ಮತ್ತು ದೇಶಭಾಷಾ ಪತ್ರಿಕೆಗಳ ಮೂಲಕ ತಾವು ಪಡೆಯುವುದು ನಿಸ್ಸಂಶಯವೆಂದು ಕೋರುತ್ತೇನೆ.

ಈ ವಿಚಾರದಲ್ಲಿ ಜಿಲ್ಲಾ ಅಧಿಕಾರಿಗಳು ದೇಶದೊಳಗಣ ಭೂಮ್ಯಾಲಕರ ಲಕ್ಷ್ಯಕ್ಕೆ ಈ ಏರ್ಪಾಡುಗಳನ್ನು ತರಲು ಯತ್ನಿಸುವರೆಂದೂ ನಾನು ಬಲ್ಲೆ. ಅಲ್ಲದೆ ಕೆಲವು ಪ್ರಾಂತ್ಯಗಳಲ್ಲಿ ಕೋರ್ಟ್ ಒಫ್ ವಾರ್ಡ್ಸಿನವರು ಇಷ್ಟರಲ್ಲೇ ಉತ್ತಮ ಬೀಜಗಳೇ ಮೊದಲಾದ ಕೃಷಿ ಉಪಕರಣಗಳನ್ನು ವೃದ್ಧಿಪಡಿಸಿದಂತೆ ಇದನ್ನೂ ಮಾಡಿ ಇತರ ಭೂಮ್ಯಾಲಕರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡಬಹುದಾಗಿ ನನಗೆ ಸೂಚಿಸಲಾಗಿದೆ.

ಮೂರು ತಿಂಗಳ ಅಂತ್ಯದಲ್ಲಿ ಈ ಮನವಿಗೆ ಯಾವ ಸಹಕಾರವು ದೊರಕಿದೆ ಎಂದೂ ಎಷ್ಟು ಮಂದಿ ವಂತಿಗೆ ಅಥವಾ ಹೋರಿಗಳನ್ನು ಕೊಟ್ಟಿದ್ದಾರೆಂದೂ ತಾವು ನನಗೆ ತಿಳಿಸಿದರೆ ಮಹದುಪಕಾರವಾಗುತ್ತಿತ್ತು. ಪಡೆಕೊಂಡ ಯಾ ದಾನಮಾಡ

ಹೊಸ ತಿದ್ದುಪಡಿಗಳು.

ವಿದ್ಯಾಭ್ಯಾಸವಿಧಿಯನ್ನು ತಿಳಿಸುವ ಚೇಂಪಿಯನ್ ರಿಪೋರ್ಟನ್ನು ಸರಕಾರದವರಾಗಲೀ ನಮ್ಮ ಪ್ರಾಂತ್ಯದ ವಿದ್ಯಾಧುರೀಣರಾಗಲೀ ಚೆನ್ನಾಗಿ ಅರಿತಂತಿಲ್ಲ. ಈ ರಿಪೋರ್ಟಿನ ವಿಷಯವಾಗಿ ಅನೇಕಾನೇಕ ಚರ್ಚೆ, ವಾದವಿವಾದಗಳು ನಡೆದಿದ್ದರೂ ಅದರ ಸರಿಯಾದ ಅಭಿಪ್ರಾಯವನ್ನರಿಯದೆ ಇನ್ನೂ ಜನರು ತಪ್ಪುಗ್ರಹಿಕೆಯನ್ನು ಹಿಂಬಾಲಿಸಿಕೊಂಡಿರುವುದು ಬಹಳ ಶೋಚನೀಯವಾಗಿರುವುದು.

ಬೇಕಾದ ಬದಲಾವಣೆಗಳನ್ನು ವಿದ್ಯಾಭ್ಯಾಸಕ್ರಮದಲ್ಲಿ ತರುವಂತೆ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನವರಿಗೆ ಸರಕಾರದವರು ಸಂಪೂರ್ಣ ಅನುಮತಿಯನ್ನು ಕೊಟ್ಟಿದ್ದರೂ, ನಿಜವಾಗಿಯೂ ನೋಡಹೋದಲ್ಲಿ ಇಂತಹ ಸುಧಾರಣೆಗಳನ್ನು ಮಾಡುವ ಬದಲಾಗಿ, ಇನ್‌ಸ್ಪೆಕ್ಟಿಂಗ್ ಆಫೀಸರರ ರಿಪೋರ್ಟನ್ನು ಬದಿಗೊತ್ತಿ, ಸರಕಾರದವರು ಕೊಟ್ಟಿರುವ ಶಾಲಾ ಗ್ರಾಂಟುಗಳ ಹಣವನ್ನು ಶಾಲ್ಲೆಗಳಿಗೆ ಹಂಚುವ ಕರ್ತವ್ಯವೊಂದೇ ತಮ್ಮದೆಂದು ಇವು ತಿಳಿದುಕೊಂಡಂತೆ ತೋರುತ್ತದೆ. ಕಡ್ಡಾಯಶಿಕ್ಷಣಪ್ರಚಾರಕ್ಕಾಗಿ ಸ್ಥಳೀಯ ಸಂಘಗಳಿಗೆ ಹಕ್ಕುಗಳನ್ನು ಕೊಟ್ಟಿದ್ದರೂ ದೇಶದಲ್ಲಿ ಅಶಿಕ್ಷಿತರ ಸಂಖ್ಯೆಯು ಮಿತಿಮೀರಿಹೋಗಿರುವುದು. ಸರಕಾರವೂ ವಿದ್ಯಾಭ್ಯಾಸಮಂತ್ರಿಗಳೂ ಹೆಚ್ಚಿನ ಹಣವು ಎಲಿಮೆಂಟರಿ ವಿದ್ಯಾಭ್ಯಾಸದಲ್ಲಿ ವಿನಿಯೋಗಿಸಲ್ಪಡುವುದೆಂದು ಒತ್ತೊತ್ತಿ ಹೇಳಿದ್ದರೂ ಪ್ರಾಂತ್ಯದಲ್ಲಿ ಹೊಸತಾದ ಎಲಿಮೆಂಟರಿ ಶಾಲೆಗಳು ಅತ್ಯಲ್ಪವಾಗಿರುವುದು ನಿಷೇದಕರ. ನಿಜವಾಗಿಯೂ ನೋಡಹೋದರೆ, ಹಲವು ಜಿಲ್ಲೆಗಳಲ್ಲಿ ಗ್ರಾಂಟುಗಳನ್ನು ಕೊಡುವ ಹೊಸ ಪದ್ಧತಿಯನ್ನು ಅನುಸರಿಸಿ, ಸರಕಾರವು ಹಲವು ಏಯ್ಡೆಡ್ ಶಾಲೆಗಳಿಗೆ ಹಣವನ್ನು ಕೊಡದೆ ಹೋದುದರಿಂದ ಆ ಶಾಲೆಗಳು ಈಗ ಮುಚ್ಚಲ್ಪಟ್ಟಿವೆ! ಹಲವು ಕಡೆಗಳಲ್ಲಿ ಏಯ್ಡೆಡ್ ಶಾಲೆಗಳೂ ಖಾಸಗಿ ಶಾಲೆಗಳೂ ತಮ್ಮ ಶಾಲಾ ಕರ್ತವ್ಯಗಳಲ್ಲಿ ಒಮ್ಮತವಾಗಿರದೆ ಒಬ್ಬರ ಮೇಲೆ ಇನ್ನೊಬ್ಬರು ದ್ವೇಷಭಾವದಿಂದ ಇರುವುದು ದುಃಖಕರವಾದುದು. ಹೀಗೆ ಎಲಿಮೆಂಟರಿವಿದ್ಯಾಭ್ಯಾಸಕ್ರಮದ ವಿಷಯವಾಗಿ ಹೇಳುವುದಾದರೆ, ವಿದ್ಯಾಭ್ಯಾಸವಿಚಾರವು ಸ್ಪಷ್ಟವಾಗಿಲ್ಲ; ಸರಿಯಾದ ತಿಳಿವಳಿಕೆಯೂ ಇಲ್ಲ. ಯಾರೂ ಇಷ್ಟು ಮಹತ್ವವಾದ ವಿಷಯಕ್ಕೆ ಯಥಾರ್ಥವಾದ ಗಮನವನ್ನು ಕೊಟ್ಟಿರುವುದಿಲ್ಲ.

ಎಲಿಮೆಂಟರಿ ವಿದ್ಯಾಭ್ಯಾಸದಲ್ಲಿ ಅನುರಕ್ತರಾದ ಎಲ್ಲ ಮಹನೀಯರನ್ನು ಆಮಂತ್ರಿಸಿ ಈಗಲೇ ಒಂದು ಸಮಿತಿಯನ್ನೇರ್ಪಡಿಸಿ, ಯುಕ್ತವೆನಿಸಿದ ಮತ್ತು ಅಗತ್ಯವೆನಿಸಿದ ಕ್ರಮಗಳನ್ನು ವ್ಯಕ್ತಪಡಿಸಿ, ಇನ್ನು ಐದು ವರುಷಗಳಿಗಾದರೂ ಶಾಲಾ ಚಟುವಟಿಕೆಗಳು ಅತ್ಯಧಿಕವಾಗಿರುವಂತೆ ಮಾಡಲಾಗುವ ಉಪಾಯಗಳನ್ನೂ ಹಾದಿಗಳನ್ನೂ ಬಯಲಿಗೆ ತರುವುದು ಅತ್ಯಗತ್ಯವಾಗಿರುವುದು. ಈಗಿನ ವಿದ್ಯಾಭ್ಯಾಸಡೈರೆಕ್ಟರರು ಈ ಸಂದರ್ಭವನ್ನು ತಪ್ಪಲಾರರಾಗಿ ಊಹಿಸುತ್ತೇವೆ. ತಮ್ಮ ದೇಶದ ಸೇವೆಯನ್ನು ಈ ರೀತಿಯಲ್ಲಿ ಮಾಡಲು ತೊಡಗಿದರೆ ಆ ಮಹನೀಯರಿಗೆ ಎಲ್ಲರೂ ಕೃತಜ್ಞರಾಗಿರುವುದರಲ್ಲಿ ಸಂಶಯವಿಲ್ಲ. ವಿದ್ಯಾಭ್ಯಾಸಕ್ರಮದಲ್ಲಿರುವ ತೊಡಕುಗಳನ್ನು ಹೋಗಲಾಡಿಸುವಂತೆ ಮಾಡಿದರೆ ದೇಶಮಾತೆಯ ಅಮೋಘವಾದ ಸೇವೆಯನ್ನು ಮಾಡಿದಂತಾಗುವುದು. ಇಲ್ಲದಿದ್ದಲ್ಲಿ ವಿದ್ಯಾಭಿವೃದ್ಧಿಯನ್ನು ತಂದೊಡ್ಡಲಿಕ್ಕೆಂದು ಮಾಡಿದಂತಹ ಸುಧಾರಣೆಗಳೆಲ್ಲಾ ಬರಿಯ ಕನಸು ಮಾತ್ರವಾಗುವುವು.

ಎಲಿಮೆಂಟರಿ ಸುವಿದ್ಯಾಭ್ಯಾಸವು ಜನಾಂಗದ ಸುಶಿಕ್ಷಿತತೆಗೂ, ಅಭಿವೃದ್ಧಿಗೂ ಮೂಲಕಾರಣವೆಂಬುದು ಎಲ್ಲರಿಗೂ ತಿಳಿಯದ ವಿಷಯವಲ್ಲ; ಆದರೆ ಅದರ ವಿಷಯವಾದ ವಾದವಿವಾದಗಳೇ ಹೊರತು ಆ ಸಮಸ್ಯೆಯನ್ನು ಉತ್ತರಿಸಲು ನಿಜವಾದ ಪ್ರಯತ್ನಗಳನ್ನು ಮಾಡಿದವರಾರೂ ಇಲ್ಲ. ಶಾಲೆಗಳ ಆಡಳಿತೆಯನ್ನು ನೋಡಿಕೊಳ್ಳುವುದು ಮಾತ್ರವಲ್ಲ; ಉಪಾಧ್ಯಾಯರುಗಳ ಸಂಬಳ, ಅವರ ಸೇವೆಯ ಕಾಲದ ನಿರ್ಣಯ, ಅವರು ಸೇವೆಯಿಂದ ಬಿಡುಗಡೆಯಾಗುವಾಗ ಸಿಗಬಹುದಾದ ಧನ, ಯಾ ಪ್ರೊವಿಡೆಂಟ್ ಫಂಡ್ ಇತ್ಯಾದಿ ಸಮಸ್ಯೆಗಳನ್ನೆಲ್ಲಾ ಚೆನ್ನಾಗಿ ಆಲೋಚಿಸಿ ಅರಿತುಕೊಳ್ಳುವುದೂ ಅಗತ್ಯವೇ. ಸರಕಾರೀ, ಖಾಸಗಿ ಅಥವಾ ಎಯ್ಡೆಡ್ ಶಾಲೆಗಳಲ್ಲಿನ ಉಪಾಧ್ಯಾಯರ ತಲುಬಿನ ವಿಷಯವಾಗಿ ಯೋಗ್ಯವಾದ ವಿಚಾರಣೆಯನ್ನು ಮಾಡುವುದೂ ಮೇಲಧಿಕಾರಿಗಳ ಮುಖ್ಯವಾದ ಕರ್ತವ್ಯ. ಪರ್ವತಪ್ರದೇಶಗಳಲ್ಲಿನ ಶಾಲೆಗಳ ಉಪಾಧ್ಯಾಯರಿಗೆ ಸಿಗಬೇಕಾದ ಹೆಚ್ಚಿಗಿನ ಸಂಬಳವೂ ಚರ್ಚಾಸ್ಪದವಾದುದು. ಮತ್ತೊಂದು ಸಂಗತಿ. ಟ್ರೈನಿಂಗ್ ಶಾಲೆಗಳಿಂದ ತಮ್ಮ ಸಾಕ್ಷ್ಯಪತ್ರಗಳೊಂದಿಗೆ ಹೊರಬಿದ್ದ ಕೂಡಲೆ ತಮ್ಮ ಜೀವನದ ಕರ್ತವ್ಯವಾಯಿತೆಂದು ಉಪಾಧ್ಯಾಯರು ಊಹಿಸುವರು. ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸಲು ಸೌಕರ್ಯಗಳಿಲ್ಲದೇನೇ ಈ ಗತಿಯನ್ನನುಸರಿಸಲು ಕಾರಣವಾಗಿರಲೂ ಬಹುದು. ನವೀನ ಭಾಷಣಗಳು, ಅನುಕಾಲಿಕ ಕೂಟಗಳು, ವಿವಿಧ ಚರ್ಚೆಗಳು, ಪತ್ರಿಕೆಗಳು ಮತ್ತು ಪುಸ್ತಕಾಲಯಗಳು ಉಪಾಧ್ಯಾಯರ ಶಿಕ್ಷಣಜ್ಞಾನವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಕೆಲ ಮಟ್ಟಿಗೆ

ಶಿಕ್ಷಣ ವಿಚಾರ

ಸಹಾಯಕವಾಗಬಹುದು. ಕಾಲದಿಂದ ಕಾಲಕ್ಕೆ ಅವರ ಶಿಕ್ಷಣವನ್ನು ವಿಮರ್ಶಿಸುವುದೂ ಪ್ರಯೋಜನಕರವಾದುದು. ಈಗಿನ ಚಿಕ್ಕ ಶಿಶುವು ಮುಂದಿನ ಜನಾಂಗದ ಮುಂದಾಳು ವೆಂಬುದನ್ನು ಮರೆಯದಿದ್ದರೆ, ಈ ಶಿಕ್ಷಣಕ್ಕಾಗಿ ವಿನಿಯೋಗಿಸಲ್ಪಡಬಹುದಾದ ಅತೀ ಹೆಚ್ಚಿನ ಮೊಬಲಗು ಕೂಡ ವ್ಯರ್ಥವಾಯಿತೆಂದು ಹೇಳಲು ಆರೂ ಬಾಯಿ ತೆರೆಯಲಿಕ್ಕಿಲ್ಲ. ಇಂತಹ ಅತ್ಯಮೋಘವಾದ ವಿಷಯವನ್ನು ಕೂಡಲೆ ಚರ್ಚಿಸಿ ಈ ಸಮಸ್ಯೆಗೆ ಸುಪಥವನ್ನು ತೋರಿಸಿಕೊಡುವುದು ಮಹತ್ಕಾರ್ಯವೇ ಸರಿ.

ವಿದ್ಯಾರ್ಥಿಗಳ ಸಮಸ್ಯೆಯನ್ನು ಸ್ವಲ್ಪ ವಿಚಾರಿಸೋಣ. ವಿದ್ಯಾಭ್ಯಾಸದ ಮೇಲೆ ವೆಚ್ಚಮಾಡುವ ಹಣದಷ್ಟೆ ಪ್ರಯೋಜನವು ದೊರಕುವುದಿಲ್ಲವಷ್ಟೆ. ಅದಕ್ಕೆ ಕಾರಣವೇನು? ಉದಾಹರಣೆಗಾಗಿ ಮದ್ರಾಸನ್ನು ತೆಗೆದುಕೊಳ್ಳೋಣ. ಮದ್ರಾಸು ಕೊರ್ಪೊರೇಶನಿನ ಬೆಂಬಲವಿರುವ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಮೆಡಿಕಲ್ ಪರೀಕ್ಷೆ ಇದೆ; ವಾಚನಾಲಯವಿದೆ; ಸಂಗೀತ, ರೇಡಿಯೋ, ಮುಂತಾದ ನವೀನ ಸುಧಾರಣೆಗಳಿವೆ. ಎಯ್ಡೆಡ್ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಇದು ಒಂದೂ ಇಲ್ಲ. ಕೊರ್ಪೊರೇಶನ್ ಶಾಲೆಗಳಲ್ಲಿ ಹಲವುಗಳಿಗೆ ಆಟದ ಬಯಲುಗಳಿವೆ. ಆರೋಗ್ಯಕ್ಕನುಕೂಲವಾಗಿ ಗಾಳಿ ಸಂಚಾರವಿರುವ ಪ್ರದೇಶಗಳಲ್ಲಿ ಇವುಗಳಲ್ಲಿ ಹೆಚ್ಚಿನವು ಇವೆ. ಸಹಜವಾಗಿ ತಮಗೆ ಸಿಗುವ ಅತ್ಯಲ್ಪ ಸಹಾಯಧನದಿಂದ ಬದುಕಿ ಬಾಳುವ ಎಯ್ಡೆಡ್ ಶಾಲೆಗಳಲ್ಲಿ ಮೇಲಿನವು ಸಾಧ್ಯವಿರುವ ಹಾಗೆ ಇಲ್ಲ. ಮತ್ತೂ ತಮ್ಮೊಳಗಿನ ಕಲಹ ದ್ವೇಷಗಳಿಂದ ಪರಸ್ಪರ ಸಹಾಯವನ್ನರಿಯದೆ ತಮ್ಮ ಸ್ಥಿತಿಯನ್ನು ಮತ್ತಷ್ಟು ಹೀನ ಗತಿಗೆ ತಂದೊಡ್ಡಿದುದರಿಂದ ಎಯ್ಡೆಡ್ ಶಾಲೆಗಳ ವಿದ್ಯಾರ್ಥಿಗಳಿಗೆ ಯಾವುದೊಂದೂ ಇಲ್ಲದ ಹಾಗಾಗಿದೆ. ೬೫,೦೦೦ ಮಂದಿ ವಿದ್ಯಾರ್ಥಿಗಳಿಗಾಗಿ ಮದ್ರಾಸು ಕೊರ್ಪೊರೇಶನಿನವರು ೯ ಲಕ್ಷ ರೂಪಾಯಿಯನ್ನು ವೆಚ್ಚಮಾಡುವುದು. ಎಲ್ಲರಿಗೂ ತಿಳಿದ ಸಂಗತಿ. ಇಷ್ಟೇ ಮಂದಿ ವಿದ್ಯಾರ್ಥಿಗಳಿಗಾಗಿ ಎಯ್ಡೆಡ್ ಶಾಲೆಗಳ ಅಧಿಕಾರಿಗಳು ತಮಗೆ ಸರಕಾರೀ ಗ್ರಾಂಟ್ ಮೂಲಕ ಸಿಗಬಹುದಾದ ೧೫ ಲಕ್ಷ ರೂಪ್ಯಾಗಳೊಳಗೆ ಸುಧಾರಿಸಿಬಿಡಬೇಕಾಗುತ್ತದೆ. ವಿದ್ಯಾರ್ಥಿಗಳಿಂದ ವೇತನಮೂಲಕವಾಗಿ ದೊರೆವ ಹಣವು ಅತ್ಯಲ್ಪವಾದುದು. ಹೀಗಾಗಿ ಎಯ್ಡೆಡ್ ಶಾಲೆಯವರು ಕೊರ್ಪೊರೇಶನ ಶಾಲೆಗಳ ವಿಧಗಳನ್ನು ಅನುಸರಿಸುವುದು ಅಸಾಧ್ಯವೇ ಸರಿ. ಒಂದೇ ನಗರವಾಸಿಗಳ ಕೆಲವು ಮಕ್ಕಳಿಗೆ ಮಾತ್ರ ಎಲ್ಲ ತರದ ಸುಖಸೌಕರ್ಯಗಳನ್ನು ಕೊಡಿಸಿ, ಉಳಿದ ಮಕ್ಕಳಿಗೆ ನಿರಾಕರಿಸುವುದು ಯೋಗ್ಯವೇ?–ಎಂಬುದೊಂದು ಸಮಸ್ಯೆ.

ಹೀಗಾಗಿ, ಸರಕಾರವು ಶೇಖರಿಸಿದ ಹಣವನ್ನು ಶಾಲೆಗಳಿಗಾಗಿ ವಿಭಾಗ ಮಾಡುವಾಗ ಎಯ್ಡೆಡ್ ಶಾಲೆಗಳಿಗೆ ಒಂದು ಪಾಲನ್ನು ಕೊಟ್ಟು ಪ್ರೋತ್ಸಾಹಿಸುವುದು ಅತೀ ಅಗತ್ಯ. ಎಯ್ಡೆಡ್ ಶಾಲೆಗಳು ನಿಜವಾಗಿಯೂ ನ್ಯಾಯಕ್ಕನುಸರಿಸಿ, ಸ್ಥಳೀಯ ಸಂಘಗಳ ಮಹತ್ತಾದ ಕೆಲಸವೊಂದನ್ನು ಮಾಡುತ್ತಲಿರುವುವೆಂಬುದಕ್ಕೆ ಎಳ್ಳಷ್ಟು ಸಂಶಯವಾದರೂ ಇರುವುದಿಲ್ಲ. ಭ್ರಾಂಧವದೃಷ್ಟಿಯಿಂದ ವ್ಯವಹರಿಸಿ ಪರಸ್ಪರ ಸಹಕಾರಕ ತತ್ವವನ್ನು ಅರಿಯದಿದ್ದುದರಿಂದ ಈಗಣ ಹಾನಿಕರವಾದ ಸ್ಥಿತಿಗತಿಗಳಿಗೆ ನಮ್ಮ ಶಿಕ್ಷಣವು ಬಂದಿಳಿದುದರಿಂದ, ವಿನಿಯೋಗಿಸಲ್ಪಟ್ಟ ಹಣದ ಸದುಪಯೋಗವನ್ನು ಕಳೆದಂತಾಗಲಿಲ್ಲವೆಂಬುದು ಸಹಜ. ಅದನ್ನೀಗಲೇ ಸುಧಾರಿಸುವುದು ಯೋಗ್ಯ.

ದೇಶದಲ್ಲಿ ಎಲಿಮೆಂಟರಿ ಶಿಕ್ಷಣವೆಂಬುದು ಅನೇಕಾನೇಕ ಕಷ್ಟತರವಾದ ಸಮಸ್ಯೆಗಳಿಂದ ಕೂಡಿದರೂ, ಪರಸ್ಪರ ಸಹಕಾರದಿಂದಲೂ, ಮೇಲಧಿಕಾರಿಗಳು ಈ ಸಮಸ್ಯೆಗಾಗಿ ತೋರಿಸಿದ ಹಾದಿಯನ್ನೇ ಎಲ್ಲರೂ ಹಿಂಬಾಲಿಸುವುದರಿಂದಲೂ ಸುಪರಿಣಾಮವು ಆಗುವುದೆಂಬುದನ್ನು ಸಾರಿ ಹೇಳಬೇಕಾಗಿಲ್ಲ.

ಎಯ್ಡೆಡ್ ಶಾಲೆಗಳ ಚಟುವಟಿಕೆಗಳನ್ನು ಕಂಡು ಸರಕಾರದವರಿಗೂ ಜನರಿಗೂ ತುಂಬ ತೃಪ್ತಿಕರವಾಗಿ ಕಂಡುಬಂದರೂ 'ಗ್ರಾಂಟ್-ಇನ್-ಎಯ್ಡ್' ಕೋಡನ್ನು, ಮೇಲ್ಕಂಡ ಶಾಲೆಗಳಿಗೆ ಹೆಚ್ಚು ಗ್ರಾಂಟ್ ದೊರಕುವಂತೆ, ಬದಲಾಯಿಸದಿದ್ದರೆ ಎಯ್ಡೆಡ್ ಶಾಲೆಗಳು ನಿರ್ನಾಮವಾಗುವ ದಿನಗಳು ಬಹಳ ದೂರವಿಲ್ಲ. ಈಗಿನ ನೀತಿಯನ್ನೇ ಸರಕಾರವು ಇನ್ನೂ ಅನುಸರಿಸಿ ಹೋಗುವುದಿದ್ದರೆ, ಹಲವು ಎಯ್ಡೆಡ್ ಶಾಲೆಗಳು ಮುಚ್ಚಲ್ಪಡುವುವೆಂದು ಎಬ್ಬಿಸಿದ ಗಲಭೆಯು ಸ್ತುತ್ಯವಾಗಿ ಕಂಡುಬರುವುದು. ಇಷ್ಟರ ವರೆಗೆ ಸರಕಾರಕ್ಕೆ ಸಹಾಯಕ್ಕಾಗಿ ಅರ್ಜಿ ಹಾಕಿದವರಿಗೆ 'ಸಾಕಷ್ಟು ಹಣವಿಲ್ಲ'ವೆಂದೇ ಉತ್ತರ ದೊರಕಿದೆ. ಇಂತಹ ಉತ್ತರವನ್ನು ಕೊಟ್ಟು ಜನರನ್ನು ಸಮಾಧಾನಿಸಿ ಈ ಸಮಸ್ಯೆಯನ್ನು ಅಲ್ಲಿಯೇ ಬದಿಗೊತ್ತುವುದು ಸರಕಾರಕ್ಕೆ ಯೋಗ್ಯವಲ್ಲ. ಏಕೆಂದರೆ ಸರಕಾರದ ಖಜಾನೆಗೆ ಹಣವು ಒಂದು ತರವಲ್ಲದಿದ್ದರೆ ಇನ್ನೊಂದು ತರವಾದರೂ ಬಂದೇ ಬರುವುದು. ಎಲಿಮೆಂಟರಿ ಶಿಕ್ಷಣವು ಸಮಾಜದಲ್ಲಿ ಮೊದಲನೆ ಸ್ಥಾನವೆಂದು ತಿಳಿದ ಮೇಲೆ, ಆ ಮೊದಲನೆಯ ಸಮಸ್ಯೆಯನ್ನು ತೃಪ್ತಿಗೊಳಿಸಿದನಂತರ ಅಲ್ಲವೇ ಮುಂದಕ್ಕೆ ಹೊರಡಬೇಕು? ಈ 'ಗ್ರಾಂಟ್-ಇನ್-ಎಯ್ಡ್' ಕ್ರಮವನ್ನು ಅನುಸರಿಸಿ ನೋಡಿ ಅದು ಬಹಳ ಅತೃಪ್ತಿಕರವಾಗಿ ಕಂಡುಬಂದಿದೆ; ನವೀನ ಸ್ಥಿತಿಗತಿಗಳನ್ನನುಸರಿಸಲು ಅದು ಅನುಕೂಲವಲ್ಲ. 'ಗ್ರಾಂಟ್-ಇನ್-ಎಯ್ಡ್' ಕ್ರಮವೇನೋ ನ್ಯಾಯವಾದ ಸಂಗತಿ ಅಹುದು. ಆದರೆ, ಅದನ್ನು ಪರೀಕ್ಷೆ ಮಾಡಿದ್ದ ಪಕ್ಷವೊಂದರಿಂದಲೇ ಅದು ಅನುಕೂಲವಾಗಿರುವುದೋ ಇಲ್ಲವೋ ಎಂಬುದನ್ನು ಕಂಡುಹಿಡಿಯಲು ಸಾಧ್ಯ! ಆದುದರಿಂದ ಎಯ್ಡೆಡ್ ಶಾಲೆಗಳಿಗನುಕೂಲವಾಗುವಂತೆ ತಿದ್ದುಪಡಿಯನ್ನು ಮಾಡಿದರೆ ಈ ಸಮಸ್ಯೆಯನ್ನು ಉತ್ತರಿಸಿದಂತಾಯಿತು.

ಸುಮ್ಮನೆ ಈ ಸಮಸ್ಯೆಯನ್ನು ಕುರಿತು ವಾದವಿವಾದವನ್ನು ಮಾಡಿದರೆ ಪ್ರಯೋಜನವೇನೂ ಇಲ್ಲ. ಈ ವಿಷಯವನ್ನು ಚೆನ್ನಾಗಿ ಅರಿತು ಕಷ್ಟತರವಾದ ಈ ಆಪತ್ತನ್ನು ಹೋಗಲಾಡಿಸಲು ಅತಿ ಯೋಗ್ಯವಾದ ವಿಧಾನವನ್ನು ಹುಡುಕಲು ಇನ್ನೂ ಸಮಯವನ್ನು ತೆಗೆಯಬಾರದು. ಬೇಕಾದ ಸುಧಾರಣೆಗಳನ್ನು ಮಾಡಲು ಒಂದು ಸಮಿತಿಯನ್ನು ಕೂಡಲೇ ಏರ್ಪಡಿಸಬೇಕು. ಶಿಕ್ಷಣಕ್ಕೆ ಮೂಲಾಧಾರರಾದ ಮಹನೀಯರುಗಳಲ್ಲಿ ಐಕಮತ್ಯವನ್ನು ತಂದಿರಿಸಿ, ಸಂಘಗಳ ಕರ್ತವ್ಯಗಳಿಗೆಲ್ಲ ಪ್ರೋತ್ಸಾಹವನ್ನಿತ್ತು ಹುರಿದುಂಬಿಸಿದರೆ ದೇಶದ ಅಮೋಘವಾದ ಸೇವೆಯನ್ನು ಮಾಡಿದಂತಾಯಿತು. ಕಳೆದ ಕಾಲು ಶತಮಾನದಿಂದ ಹಿಂದೂದೇಶವನ್ನು ಚೆನ್ನಾಗಿ ಅರಿತು, ದೇಶದ ಸಮಸ್ಯೆಯನ್ನು ಖಂಡಿಸುವುದರಲ್ಲಿ ನುರಿತವರಾಗಿರುವ ಈಗಿನ ಡೈರೆಕ್ಟರರು ತಮ್ಮ ಕೈಲಾದಷ್ಟು ಸುಧಾರಣೆಗಳನ್ನು ಖಂಡಿತವಾಗಿಯೂ ಮಾಡುವರೆಂಬ ಆಸೆಯು ನಿರರ್ಥಕವಲ್ಲ.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನ ಸಹಾಯವಿತ್ತವರ ಪಟ್ಟಿ.

(ಮುಂದರಿದುದು).

ಪುತ್ತೂರು ಅಸಿಸ್ಟಾಂಟ್ ಇಂಜಿನಿಯರ್ ವಿ. ಜಿ. ಎಸ್. ಗಣಪತಿಯವರ ಮೂಲಕ ರೂ. ೭೦; ರೂ. ತಿಳಿದಂತೆ ಕೊಟ್ಟವರು—ದಿ ಡ್ಯಾರೆಕ್ಟರ್-ಫಾದರ್ ಮುಲ್ಲರ್ಸ್ ಚಾರಿಟೇಬಲ್ ಇನ್‌ಸ್ಟಿಟ್ಯೂಶನ್ಸ್, ದಿವಾನ್ ಬಹದೂರ್ ಮತ್ತು ಮಿಸೆಸ್ ಮಹಾಬಲ ಹೆಗ್ಗಡೆ, ಎಂ. ವೆಂಕಟೇಶ ಪೈ; ಕುಂದಾಪುರ ಫೊರೆಸ್ಟ್ ರೇಂಜ್ ಆಫೀಸಿನ ನಿಬಂಧಿಯಿಂದ ರೂ. ೧೬—೮—೦; ರೂ. ೫ರಂತೆ ಕೊಟ್ಟವರು—ರಾವ್ ಬಹದೂರ್ ಬಿ. ವೆಂಕಟ್ರಾವ್, ಎಂ. ದೊಮಪ್ಪ, ಪಿ. ಎಸ್. ಬಾರ್ಬೋಜಾ-ಡಿ. ಬೋ. ಇಂಜೀನಿಯರ್, ಡಾ. ಬಿ. ಸುಬ್ರಾಯ ಬಾಳಿಗಾ, ರವಿವರ್ಮ ರಾಜಾ; ಫೊರೆಸ್ಟ್ ರೇಂಜ್ ಆಫೀಸರ್, ಕಾರ್ಕಳ ರೂ. ೧೩—೨—೦; ಮಂಗಳೂರು ಅಸಿಸ್ಟಾಂಟ್ ಇಂಜಿನೀಯರ್ ಮಿ. ಕೆ. ಸುಬ್ರಮಣ್ಯಂರ ಮೂಲಕ ರೂ. ೧೨—೧೨—೦; ರೂ. ೧೦ರಂತೆ ಕೊಟ್ಟವರು—ಬಿ. ಮಾಧವ ರಾವ್, ಬಿ. ಮಹಾಯಸ್, ಶಿವರಾಮು ಶೆಟ್ಟಿ, ಇಚ್ಲಂಪಾಡಿ ಕೋಟಿಯಣ್ಣ ಆಳ್ವ, ಬಿ. ಹಿರಿಯಣ್ಣ ಹೆಗ್ಗಡೆ, ಕೆ. ಎಸ್. ಸುಬ್ರಮಣ್ಯ ಅಯ್ಯರ್, ಮೋನಪ್ಪ ಮೇಸ್ತ್ರಿ; ಶಂಕರನಾರಾಯಣ ಫೊರೆಸ್ಟ್ ರೇಂಜ್ ಆಫೀಸಿನ ನಿಬಂಧಿಯಿಂದ ರೂ. ೬; ರೂ. ೫ರಂತೆ ಕೊಟ್ಟವರು—ರೆ. ಫಾದರ್ ಚಾರ್ಲ್ಸ್ ಬಿ. ಲೋಬೊ, ಡಾ. ರಾಮ ಬಾಳಿಗಾ, ಎ. ದಾಮೋದರ ಪೈ, ಬಿ. ಫೆರ್ನಾಂಡಿಸ್, ಸಿಂಪೆಕ್ಟೆಜರ್, ಕೆ. ಜೆ. ಬಳ್ಳಾಳ, ಹೆಚ್. ಎಸ್. ಮಸ್ಕರೇಂಜಸ್, ರಾಮು ಭಟ್, ಎ. ಕಣಾರನ್, ಕೆ. ಆರ್. ಗುರು, ಎಚ್. ಕೊರಗಪ್ಪ, ಮಿಸೆಸ್ ಎಂ. ದೊಮಪ್ಪ, ಆರ್. ಸ್ವಾಮಿನಾಥ ಅಯ್ಯರ್, ಎ. ಶೀನಾ, ಕೆ. ಸಂಜೀವ ಶೆಟ್ಟಿ, ಯು. ಅಂತಪ್ಪ, ಕೆ. ಅಪ್ಪು ಕಾಮತ್, ಪಿ. ಎಂ. ಮೂಸೆಕುಂಞ, ಕೆ. ಮಂಜ. ಹೆಗ್ಗಡೆ, ಯು. ಶ್ರೀನಿವಾಸ ರಾವ್, ಡಾ. ಕೆ. ಎಂ. ನಾಯರ್, ಕೆ. ಏ. ಶ್ರೀಕಂಠಯ್ಯ ಅಯ್ಯರ್, ವಿ. ಮಾಧವನ್ ನಾಯರ್, ಎಸ್. ವೆಂಕಟೇಶ್ವರ ಪೈ ರೂರಲ್ ರಿಕನ್ಸ್ಟ್ರಕ್ಷನ್ ಮತ್ತು ಸ್ಟಾಫ್, ಎ. ಸಿ. ಗೋನ್ಸಾಲ್ವಿಸ್, ಮತ್ತು ಕೆ. ರಾಮರಾವ್; ಎಚ್. ಸರ್ವೋತ್ತಮ ಕಾಮತ್ ರೂ. ೬; ಟಿ. ನಾರಾಯಣ ಶೆಟ್ಟಿ ರೂ. ೪—೪—೦; ರೂ. ೪ರಂತೆ ಕೊಟ್ಟವರು—ಐ. ವಿಠಲ ಶೆಟ್ಟಿ, ಬಿ. ಕೃಷ್ಣಯ್ಯ ಹೆಗ್ಗಡೆ, ಕೆ. ವೆಂಕಪ್ಪ ಶೆಟ್ಟಿ, ಗ್ಯಾಸನ್ ಡಂಕರ್ಲಿ ಕಂಪೆನಿಯ ನಿಬಂಧಿ, ಐ. ವಿಠಲ ಶೆಟ್ಟಿ, ಪಿ. ಎಸ್. ಈಶ್ವರನ್, ಎ. ಆರ್. ವೃಧ್ಧಾಚಲ ಅಯ್ಯರ್, ಎನ್. ಕೃಷ್ಣ ಭಟ್; ರೂ. ೩ರಂತೆ ಕೊಟ್ಟವರು—ಬಿ. ಶ್ರೀನಿವಾಸ ಬಾಳಿಗಾ, ಎಂ. ವೆಂಕಟ್ರಾವ್, ಎಂ. ಅಚ್ಯುತಯ್ಯ, ರಾವ್ ಸಾಹೇಬ್ ಡಿ. ಆರ್. ಕುಲಾಸೊ, ಸದಾಶಿವ ಆಡಿಗ, ಕೆ. ಪಿ. ನರಸಿಂಹವೆಂಕಟೇಶ ಶೆಣೈ, ಜೆ. ಈ. ಗೋನ್ಸಾಲ್ವಿಸ್, ಎಂ. ನಾಗೇಶ ರಾವ್, ಸಿ. ಶಂಕರ ಮೆನನ್, ಪಿ. ಪಿ. ಕೃಷ್ಣನ್, ಮಾಸೇಲ್ ಲಸ್ರಾದೊ, ಕೆ. ಗೋಪಾಳನ್, ಸಿ. ವಿ. ಕಾಮತ್, ಎಲ್. ಲಸ್ರಾದೊ, ಕೆ. ಪದ್ಮನಾಭ ಹೆಬ್ಬಾರ್, ಫ್ರಾನ್ಸಿಸ್ ಫೆರ್ನಾಂಡಿಸ್, ಸ್ಯೂಡೆಂಟ್ಸ್ ಸ್ಟೇಶನರಿ ಸೊಸೈಟಿ-ಬೋರ್ಡ್ ಹೈ ಸ್ಕೂಲ್, ಆರ್. ಶ್ರೀನಿವಾಸ ರಾವ್, ಎಂ. ಸುಂದರ ರಾವ್, ಕೆ. ಸಂಜೀವ ಭಟ್; ರೂ. ೨ರಂತೆ ಕೊಟ್ಟವರು—ಎಸ್. ಬಾಬು ರಾವ್, ಮಿಸೆಸ್ ಎಂ. ಮಾಧವ ರಾವ್, ಮಿ. ಮತ್ತು ಮಿಸೆಸ್ ತಮ್ಮಯ್ಯ, ಎಂ. ಸುಬ್

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಹರತ

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ, ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಆವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಆವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು. ದೇಹದೊಳಗೆ ಹೋಗುವ ಔಷಧಿಯು ಶರೀರವೃದ್ಧಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು.ಈ ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3/ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಮಲೆಯಾಳ ಔಷಧಾ ಕಂಪನಿ

MALAYALA OUSHADHA CO., Post CHALAPURAM.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟುದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಶ್ವೇರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED.,

OPPOSITE TALUK POLICE STATION,

MANGALORE.

ESTD. 1933.

AS ON 30TH APRIL 1936.

BENEFIT AMOUNT PAID EXCEEDS RS. 20,150/—

RESERVE FUND EXCEEDS RS. 6,250/—

WE HAVE THREE SCHEMES FOR YOU.

LIFE **MARRIAGE** **BIRTH**

ADMISSION FEE RS. 5—8—0 ONLY. (By Instalments if required)

MONTHLY PREMIUM RUPEE ONE ONLY.

WANTED SPECIAL AGENTS & REPRESENTATIVES ON LIBERAL TERMS.

For Full Prospectus & Agency Terms please call at or write to:—

THE GENERAL INSURANCE BANK OF INDIA LIMITED,

MANGALORE. S. K.

Mangalore, Dated 8th May '36.

P. K. MENON, *Secretary.*

ಝಾಂಡೂರವರ ಎರಡು ಬಹಳ ಜನಪ್ರಿಯ ಔಷಧಗಳು.

ಝಾಂಡೂ ದ್ರಾಕ್ಷಾಸವ

ಜೀರ್ಣವನ್ನು ವರ್ಧಿಸುತ್ತದೆ
ಯಕೃತ್ತನ್ನು ಕ್ರಮಗೊಳಿಸುತ್ತದೆ
ಆಯಾಸವನ್ನು ನಿವಾರಿಸುತ್ತದೆ
ಮತ್ತು
ನರಗಳನ್ನು ಬಲಗೊಳಿಸುತ್ತದೆ.

ಬೆಲೆ: 1½ ಪೌಂಡು ರೂ. 1/12/-
1 ಪೌಂಡು ರೂ. 1/6/-
½ ಪೌಂಡು ರೂ. -/14/-

ಝಾಂಡೂ ಕೇಸರಿ ಜೀವನ

ಟಾನಿಕುಗಳಲ್ಲಿ ರಾಜ.

ಕಾರ್ಯದಲ್ಲಿ ತೀವ್ರ ಮತ್ತು ಪರಿಣಾಮದಲ್ಲಿ ಚಿರಶಾಶ್ವತ.
ಮೆದುಳಿನ ಕೆಲಸಗಾರರಿಗೂ, ಶ್ವಾಸಕೋಶ ಮತ್ತು ಎದೆಯ ಬಾಧೆಯುಳ್ಳವರಿಗೂ ಇದು ಬಹಳ ಯೋಗ್ಯವಾದುದು.

1 ಪೌಂಡು ರೂ. 5/-
¼ ಪೌಂಡು ರೂ. 1/9/-

ಸಿದ್ಧಮಾಡುವವರು:

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಯಿ.

ಮದ್ರಾಸ್ ಆಧಿಪತ್ಯದ ಏಜಂಟರು:—**ದಾನೋದರ್ ಎಂಡ್ ಕೋ.,**
78, ಚೈನಾ ಬಜಾರ್ ರೋಡ್, ಜಿ. ಟಿ., ಮದ್ರಾಸ್.

ಸಬ್ ಏಜಂಟರು:—**ಷಾ ಅಂಡ್ ಕೋ.,** ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು.

ಉಡುಪಿ:—**ಪಿ. ಎ. ಹೈ ಬ್ರದರ್ಸ್.** — ಕಾರ್ಕಳ:—**ವಿ. ವಿ. ಶೆಣೈ.**

INVEST YOUR SAVINGS IN A East and West Policy.

OWN A EAST & WEST POLICY AND INCREASE YOUR SAVINGS! FOR THE EAST & WEST IS MAKING ASTOUNDING PROGRESS AND A EAST AND WEST POLICY IS, THEREFORE, A PROFITABLE INVESTMENT. IT ENCOURAGES THRIFT, ENSURES THE HIGHEST RETURNS AND OFFERS UTMOST SECURITY.

For Prospectus, Valuation Reports & Agency Terms apply to:—

MESSRS. PADUBIDRI BROS.,
Chief Agents,
MAHARASHTRA AND KARNATAKA,
East & West Insurance Co., Ltd.,
BOMBAY No. 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ವಿ. ಪಿ. 11 ಆಣೆ.

ಸ್ಪ್ಲೀನೋಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚಕ್ರಬಿಂದು ದಿವ್ಯೌಷಧವು.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ವಿ. ಪಿ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುತ್ತವೆ. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಲ್ಪಡುವುದಿಗಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

(೬ನೇ ಪುಟದಿಂದ)

ಶಿವಾಜಿಯು ತಾನು ಸಂಗ್ರಹಿಸಿದ ಹಣವನ್ನು ಗಟ್ಟಿದ ಗುಪ್ತ ಗವಿಗಳಲ್ಲಿ ಇಡುತ್ತಿದ್ದನು. ಕ್ರಮೇಣ ಅಖಂಡ ಧನಸಂಗ್ರಹ, ವಿಪುಲ ಶಸ್ತ್ರಾಸ್ತ್ರಗಳು, ತಾರುಣ್ಯದ ಕೆಚ್ಚನ್ನು ಬಸಿರಿನೊಳಾಂತ ತರುಣರ ತಂಡವು ವಿಾರಲು ಇನ್ನು ಗವಿಗಳಲ್ಲಿರುವುದು ಕ್ಷೇಮವಲ್ಲವೆಂದು ನೆನಸಿ, ಒಂದು ದುರ್ಗವನ್ನು ಹಿಡಿಯಲು ಹೊಂಚು ಹಾಕಿಕೊಂಡಿದ್ದನು.

ಶಿವಾಜಿಯ ಪಿತ್ರಾರ್ಜಿತವಾದ ಆಸ್ತಿಯು ವಿಶೇಷವಾಗಿರಲಿಲ್ಲ. ಪೂನೆ, ಸೂಪ, ಬಾರಾಮತಿ, ಇಂದ್ರಾಪುರ ಇತ್ಯಾದಿ ಕೆಲವು ಪ್ರಾಂತಗಳಿಂದ ಕೂಡಿತ್ತು. ಇವೆಲ್ಲಾ ದಾದಾಜಿ ಕೊಂಡದೇವನ ಮೇಲ್ವಿಚಾರಣೆಯಲ್ಲಿದ್ದುದರಿಂದ ದಿನದ ಹೆಚ್ಚಿನ ವೇಳೆಯನ್ನೆಲ್ಲಾ ದೇವೀಧ್ಯಾನ ಮತ್ತೆ ಹೊಂಚಿನ ಸಂಚುಗಳಲ್ಲೇ ಕಳೆಯುತ್ತಿದ್ದನು.

ಶಿವಾಜಿಯ ಅಭ್ಯುದಯದ ಸಮಯವು ಬಂತು. ಕ್ರಿ. ಶ. ೧೬೪೬ರಲ್ಲಿ ಪ್ರಥಮ ಯತ್ನಕ್ಕೇ ತೋರಣ ದುರ್ಗವನ್ನು ನುಂಗಿ ನೀರು ಕುಡಿದು, ತನ್ನ ಸ್ವರಾಜ್ಯಸ್ಥಾಪನೆಯ ಮಹಾಕಾರ್ಯಕ್ಕೇ ತೋರಣ ಕಟ್ಟಿದನು. ಈ ಕೋಟೆಯು ನಾದುರಸ್ತಿಯಲ್ಲಿದ್ದುದರಿಂದ ಇದನ್ನು ವ್ಯವಸ್ಥೆಗೊಳಿಸಿ ತನ್ನ ವಿಪುಲ ಧನಸಂಗ್ರಹ, ಶಸ್ತ್ರಾಸ್ತ್ರಗಳನ್ನು ಕೋಟೆಗೆ ತರಿಸಿದನು. ಕೋಟೆಯೊಳಗೊಂದು ಭವಾನೀ ಗುಡಿಯನ್ನು ಕಟ್ಟಿಸಿ, ದುರ್ಗಕ್ಕೆ ಸಿಂಹಗಡ (ಪ್ರಚಂಡ ಗಡ)ವೆಂದು ಹೆಸರಿಟ್ಟನು. ಈ ಕೋಟೆಯ ಜೀರ್ಣೋದ್ಧಾರದ ಕಾಲದಲ್ಲೇ ಶಿವಾಜಿಗೆ ಹೇರಳ ದ್ರವ್ಯವು ಸಿಕ್ಕಿತು. ಇದರಿಂದ ಇವನ ಗರಿ ಚಿಗುರೊಡೆಯಿತು. ದುರ್ಗವು ಸ್ವಾಧೀನವಾದೊಡನೆಯೇ ಬಿಜಾಪುರದ ಸುಲ್ತಾನನಿಗೆ, ತನ್ನ ಪರವಾಗಿಯೇ ಕೋಟೆಯನ್ನು ಸ್ವಾಧೀನಮಾಡಿಕೊಂಡಿದ್ದೇನೆ.—ಎಂದು ಹೇಳಿ ಕಳುಹಿಸಿದನು. ಸುಲ್ತಾನನು, ಷಹಾಜಿಯ ಮಗನೆಂಬ ಕಾರಣದಿಂದಲೂ, ಹುಡುಗನೆಂಬ ತಿರಸ್ಕಾರದಿಂದಲೂ ಸುಮ್ಮನಿದ್ದನು. ಅನಂತರ ಶಿವಾಜಿಯು ಮುರ್ಬಾದವೆಂಬ ಬಂಜರು ಪರ್ವತದಲ್ಲಿದ್ದ ರಾಯರಿ ದುರ್ಗವನ್ನು ತನ್ನ ಅಂಕೆಗೆ ತಂದುಕೊಂಡು ರಾಜಗಡವೆಂದು ಹೆಸರಿಟ್ಟನು.

ಶಿವಾಜಿಯ ಸೇನಾನಾಯಕರಾದ ಹವಲ್ದಾರ್ ಗೋಮಾಜಿ ನಾಯಕ, ಆಬಾಜಿ ಸೋನದೇವ ಮೊದಲಾದವರು ಯುಕ್ತಿ ಪರಾಕ್ರಮಗಳಿಂದ ಕಾಂಗೇರಿ, ತುಂಗ, ತಿಕೋಣೆ, ಲೋಹಗಡ, ರಾಜಮಾಚಿ, ಕುವರಿ, ಭೋರಪ, ಘಾನಗಡ, ಕಲ್ಯಾ, ಮಾವುಳಿ ಮುಂತಾದ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡರು. ಪ್ರಸಿದ್ಧವಾದ ಕಲ್ಯಾಣದುರ್ಗವನ್ನು ಗೆದ್ದ ಕಾಲದಲ್ಲೇ ಅವನ ಅಭ್ಯುದಯಸಸಿಯು ಗೆಲ್ಲುಬಿಟ್ಟಿತೆಂದು ನಿರ್ವಿವಾದವಾಗಿ ಹೇಳಬಹುದು.

ಕಲ್ಯಾಣದುರ್ಗವು ಮೌಲಾನಾ ಅಹಮ್ಮದನ ಸ್ವಾಧೀನದಲ್ಲಿತ್ತು. ಆಬಾಜಿ ಸೋನದೇವನು ಮಾವಳಿಗಳ ಸಹಾಯದಿಂದ ಕೋಟೆಯನ್ನು ಲಗ್ಗೆಹತ್ತಿ ಒಳ ಹೊಕ್ಕು, ಒಳಗಿನ ಮುಸಲ್ಮಾನರನ್ನು ತುಂಡರಿಸಿ ಮೌಲಾನಾ ಅಹಮ್ಮದನನ್ನು ಸೆರೆಹಿಡಿದನು. ಈ ವಿಜಯದಲ್ಲಿ ಆಬಾಜಿಗೆ ಒಂದು ಸ್ತ್ರೀರತ್ನವು ಸಿಕ್ಕಿತು. ಇವಳು ಅಹಮ್ಮದನ ಮಗಳಾಗಿದ್ದಳು. ಬಹು ಸುಂದರಿ; ತ್ರಿಲೋಕಸುಂದರಿ. ಇವಳನ್ನು ಆಬಾಜಿಯು ತನ್ನಲ್ಲೇ ಬಲಾತ್ಕಾರದಿಂದ ಇಟ್ಟುಕೊಂಡಿದ್ದನೆಂದು ಚಿಟ್ಣೀಸನ ಬಖರದಲ್ಲಿಯೂ, ಅಹಮ್ಮದನೇ ತನ್ನ ಮಗಳನ್ನು ಆಬಾಜಿಗೆ ಕೊಟ್ಟಿದ್ದನೆಂದು ಶಿವದಿಗ್ವಿಜಯ ಗ್ರಂಥದಲ್ಲಿಯೂ ಹೇಳಿದೆ. ಆದರೆ ನಾವು ಇಷ್ಟು ಹೇಳಬಹುದು. ಅವಳ ರೂಪರಾಶಿಯನ್ನು ಕಂಡು ಆಬಾಜಿಯು ಮುಗ್ಧನಾದನೆಂಬುದು ನಿರ್ವಿವಾದ. ಛತ್ರಪತಿಯು ಕಲ್ಯಾಣಕ್ಕೆ ಬಂದಾಗ, ಆಬಾಜಿಯು ಶಿವಾಜಿಗೆ ಈ ಸ್ತ್ರೀಯನ್ನು ಕಾಣಿಕೆಯಾಗಿ ಒಪ್ಪಿಸಿದನು. ಆಬಾ ಸಾಹೇಬನು (ಶಿವಾಜಿ) ತನ್ನ ಕಾರ್ಯಕ್ಕೆ ಮೆಚ್ಚುವನೆಂದು ಸೋನದೇವನು ತಿಳಿದಿದ್ದನು. ಕಾರಣ, ಶಿವಾಜಿಯು ಜನ್ಮನಿಗನಾಗಿದ್ದನು. ಅವನ ಕಠೋರ ಬ್ರಹ್ಮಚರ್ಯಪಾಲನದಿಂದ ಸಮಗ್ರ ಶರೀರವೂ ತಾರುಣ್ಯದ ಹೊಳಪಿನಿಂದ ನಳನಳಿಸುತ್ತಿದ್ದಿತು. ಇದರಿಂದ ಶಿವಾಜಿಯು ಸ್ತ್ರೀಸಂಗಕ್ಕಾಗಿ ಬಾಯಿನೀರು ಸುರಿಸುವನೆಂದು ಸೋನದೇವನು ಮನಸ್ಸಿನಲ್ಲೇ ಮುಂಡಿಗೆ ತಿಂದನು. ಆ ಸ್ತ್ರೀಯು ಶಿವ ಪ್ರಭುವಿನ ಎದುರಿನಲ್ಲಿ ಮುಸುಕನ್ನು ತೆರೆದೊಡನೆಯೇ, ಅವಳ ಮುಖವು ಮೋಡಗಳ ಎಡೆಯಿಂದ ಬೆಳಗುವ ಕೋಲ್ಮಿಂಚಿನಂತೆ ತೋರಿ ಶಿವಾಜಿಯೆಂಬ ದಾರಿಗನನ್ನು ಚಕಿತನಾಗುವಂತೆ ಮಾಡಿಬಿಟ್ಟಿತು. ಶಿವಾಜಿಯು ಒಂದು ಕ್ಷಣ ದಂಗಾದನು; ಆ ಸ್ತ್ರೀಯಲ್ಲಿ ಮಾತೃಭಾವನೆಯುದಯಿಸಿತು. ಅನನು ತನ್ನ ಸೇವಕರ ಸುಖಲೋಲುಪತೆಗಾಗಿ ಒಂದು ಕ್ಷಣ ಚಿಂತಿಸಿದನು. ಕಡೆಗೆ ಆ ಸ್ತ್ರೀಯೊಡನೆ 'ಅಮ್ಮಾ! ನಿನ್ನಂಥ ಸುಂದರಿಯು ನನ್ನ ತಾಯಿಯಾಗಿದ್ದರೆ ನಾನು ಇನ್ನೆಷ್ಟು ಸುಂದರನಾಗುತ್ತಿದ್ದೆನೋ!' ಎಂದು ಅವಳಿಗೆ ಅರಸಿನ ಕುಂಕುಮವನ್ನು ಕೊಟ್ಟು, ಅವಳ ತಂದೆಯ ಬಳಿಗೇ ಕಳುಹಿಸಿಬಿಟ್ಟನು; ಅಲ್ಲದೆ ಆಬಾಜಿಯನ್ನು ಎಚ್ಚರಿಸಿದನು; ಅವನ ದುರ್ವರ್ತನೆಗಾಗಿ ಒಳಿತಾಗಿ ಛೀಗುಟ್ಟಿದನು. ಇನ್ನು ಇಂಥ ನೀಚ ಪ್ರಸಂಗವನ್ನು ಮೈಮೇಲೆ ತಂದುಕೊಳ್ಳಬೇಡವೆಂದು ಸಾಲ್ಮ ಬುದ್ಧಿಯ ಮಾತುಗಳನ್ನು ಹೇಳಿ, ಅವನನ್ನು ಅಲ್ಲಿಂದ ಕಳುಹಿಸಿಬಿಟ್ಟನು. ತುಳಸೀದಾಸರು ಹೇಳುತ್ತಿದ್ದರು-'ಕಾಮುನಿದ್ದಲ್ಲಿ ರಾಮನಿರಲಾರನೆ'ಂದು. ಈ ಮಾತು ಅಕ್ಷರಶಃ ಸತ್ಯವಾಗಿದೆ. ಶಿವಾಜಿಯು ಕಾಮುನನ್ನು ಹೊಡೆದಟ್ಟಿ, ತಾರುಣ್ಯದ ಕೆಚ್ಚನ್ನು ಶರೀರದಲ್ಲಿ ಇಂಗಿಸಿಕೊಂಡುದರಿಂದಲೇ ಮಾವಳಿಗಳ ಅಖಂಡ ಮುಖಂಡನಾದುದಲ್ಲದೆ ದೇವಿಯ ಕೈಗೂಸಾದನು. ಅವನು ಅಂದಿನ ಸಭೆಯಲ್ಲಿ ಆಬಾಜಿಯು ಕಾಣಿಕೆಯನ್ನು ತಿರಸ್ಕರಿಸಿದುದರಿಂದಲೇ, ಅವನಿಗೆ ಶರೀರಮನೋನಿಗ್ರಹದ ಸಾಧನದಲ್ಲಿ ಸಿದ್ಧಿಯು ಲಭಿಸಿದಂತಾಯಿತು. ಈ ವಿಜಯದಿಂದಲೇ ಅವನ ಅಭ್ಯುದಯಸಸಿಯು ಹೂಬಿಟ್ಟಿತು.

ಪುರಂದರದುರ್ಗವೂ ಇವರ ನೆರೆಕರೆಯ ಪ್ರಾಂತಗಳೂ ಅಹಮ್ಮದನಗರ ಸಂಸ್ಥಾನದಿಂದ ನೀಲಕಂಠ ಹೈಬತರಾಯನಿಗೆ ಇನಾಮಾಗಿ ದೊರಕಿತ್ತು. ನೀಲಕಂಠನೂ, ಇವನ ಮಗ ನೀಲೋಪಂತನೂ ಶಿವಾಜಿಗೆ ಅನುಕೂಲರಾಗಿಯೇ ಇದ್ದರು. ನೀಲೋಪಂತನಿಗೆ ಪಿಲಾಜಿ ಮತ್ತು ಶಂಕ್ರಾಜಿ ಎಂಬಿಬ್ಬರು ತಮ್ಮಂದಿರಿದ್ದರು. ಈ ಮೂವರು ಸಹೋದರರಲ್ಲಿ ಗೃಹಕಲಹವಾರಂಭವಾಯಿತು. ಶಿವಾಜಿಯು ಪಿಲಾಜಿಯ ಪಕ್ಷವನ್ನು ವಹಿಸಿ, ಪುರಂದರ ಕೋಟೆಯನ್ನು ಜಯಿಸಿ ತಾನಿಟ್ಟುಕೊಂಡು, ಅದರ ಸುತ್ತ ಮುತ್ತಲಿನ ಪ್ರಾಂತಗಳನ್ನು ಪಿಲಾಜಿ ಮತ್ತು ಶಂಕ್ರಾಜಿಗೆ ಹಂಚಿಕೊಟ್ಟನು.

ಶಿವಾಜಿಯ ಸೇನಾಪತಿಯಾದ ಮಂಕೋಜಿ ಧಾತೊಂಡೆ ಎಂಬ ಸೇನಾಪತಿಯು ವಿಸಾಪುರ ಕೋಟೆಯನ್ನು ಜಯಿಸಿ ಒಡೆಯನಿಗೆ ಕಾಣಿಕೆಯಾಗಿ ಕೊಟ್ಟನು.

ಅಫ್ಝಲ್ ಖಾನನನ್ನು ವಧಿಸಿದಾಗೆಲ್ಲೇ ಶಿವಾಜಿಯ ಅಭ್ಯುದಯಸಸಿಯು ವೃಕ್ಷವಾಗಿ ಕಾಯಿಗಳಿಂದ ಕಿಕ್ಕಿರಿಯಿತು. ಕನ್ನಡಿಗರ ಎದೆಗುಂಡಿಗೆಯಾದ ವಿಜಯನಗರವು ಅಳಿದು ಒಂದು ಶತಮಾನವಾಗಿರದು. ವಿಜಯನಗರದ ಸಂಪತ್ತಿನಿಂದ ಸೊಕ್ಕೇರಿದ ವಿಜಾಪುರವು ಇಬ್ರಾಹಿಮ್ ರೋಝಾ, ಬೋಲ್ ಇಗು ಮರ್ಝು, ಜುಮ್ಮಾ ಮಸೀದಿ ಮುಂತಾದ ಕಟ್ಟಡಗಳಿಂದ ಮೆರೆಯುತ್ತಿತ್ತು. ನನ್ನ ಕಥೆಯ ಕಾಲದಲ್ಲಿ ೨೧ ವರ್ಷ ಪ್ರಾಯದವನಾದ ಅಲ್ಲೀ ಆದಿಲಶಹನು ವಿಜಾಪುರ ಸಂಸ್ಥಾನದ ಒಡೆಯನಾಗಿದ್ದನು. ಅವನು ಶಿವಾಜಿಯ ಅಭ್ಯುದಯವೃಕ್ಷವನ್ನು ಕಂಡು ಬೆದರಿ, ಒಮ್ಮೆಯೇ ಇದನ್ನು ನಾಶಪಡಿಸಿಬಿಡಬೇಕೆಂದು ಅಮಾನುಷ ಪರಾಕ್ರಮಿ ಅಫ್ಝಲ್ ಖಾನನಿಗೆ ಸೇನಾಪತಿಪಟ್ಟವನ್ನು ಕಟ್ಟಿ ೧೦,೦೦೦ ಕುದುರೆಸವಾರರೊಂದಿಗೆ ತಕ್ಕಷ್ಟು ಕಾಲಾಳು, ತೋಪು, ಮದ್ದುಗುಂಡು ಮುಂತಾದ ಎಲ್ಲಾ ಸಹಾಯವನ್ನೂ ಸಜ್ಜುಗೊಳಿಸಿ, ಇವರೊಂದಿಗೆ ಎರಡು ಮೂರು ಸಾವಿರ ಮಾವಳಿಗಳ ಸೈನ್ಯವನ್ನೂ ಕಳುಹಿಸಿದನು. ಖಾನನ ಗುರುವಾದ ಟಿಕ್ಕೆಯ ಷಿಂದಗೀ ಶಹನು 'ನಿನಗೆ ಈ ವರ್ಷ ಅಶುಭವಿದೆ' ಎಂದು ಖಾನನನ್ನು ಎಚ್ಚರಿಸಿದರೂ ಕೇಳದೆ ಮುಂದರಿದನು. ಶಿವಾಜಿಯು, ಗೂಢಚರ ವಿಶ್ವಾಸರಾಯನಿಂದ ಖಾನನ ಸೈನ್ಯದ ಸಂಗತಿಯನ್ನು ತಿಳಿದುಕೊಂಡು, ಯುದ್ಧವು ಪ್ರಯೋಜನವಿಲ್ಲವೆಂದು, ಯುಕ್ತಿಯಿಂದಲೇ ಖಾನನನ್ನು ಕೊಂದು ಅವನ ಯುದ್ಧಸಾಮಗ್ರಿಗಳನ್ನೆಲ್ಲಾ ಪ್ರತಾಪಗಡಕ್ಕೆ ಸಾಗಿಸಿದನು. ಇದನ್ನು ಕೇಳಿದೊಡನೆಯೇ ಬಿಜಾಪುರದ ಸುಲ್ತಾನನು ಸಿಂಹಾಸನದಿಂದ ಕೆಳಗೆ ಬಿದ್ದನಂತೆ! ಈ ಯುದ್ಧದಿಂದ ಶಿವಾಜಿಗೆ ೧೦೦ ಆನೆಗಳೂ, ೭-೮ ಸಾವಿರ ಕುದುರೆಗಳೂ, ೧,೦೦೦ ಒಂಟೆಗಳೂ, ದೊಡ್ಡ ತೋಪು ಖಾನೆಯೂ, ಸುಮಾರು ೧೨ ಲಕ್ಷ ರೂಪಾಯಿಯೂ, ೨,೦೦೦ ವಸ್ತ್ರದ ಗಂಟುಗಳೂ, ಡೇರೆ ಮುಂತಾದ ಸಾಮಾನುಗಳೂ ಅನಾಯಾಸವಾಗಿ ಸಿಕ್ಕಿದುವು.

ಶಿವಾಜಿಯ ಅಭ್ಯುದಯಕ್ಕೆ ಅವನ ಸೂಕ್ಷ್ಮಬುದ್ಧಿ, ಪರೇಂಗಿತಗಳನ್ನು ಅವರ ಮುಖಭಾವದಿಂದಲೇ ಕಂಡುಹಿಡಿಯುವ ಅನ್ಯಾದೃಶ ಶಕ್ತಿಯೇ ಮುಖ್ಯ ಕಾರಣ. ಇದರಿಂದ ಅವನ ಅನುಯಾಯಿಗಳ ಗುಂಪಿಗೆ ಸ್ವರಾಜ್ಯಸ್ಥಾಪನೆ-ಗೋಬ್ರಾಹ್ಮಣ ರಕ್ಷಣೆಗಾಗಿ ಕಂಕಣ ಕಟ್ಟಿಕೊಂಡು, ಮನೆ-ಮಠ-ಸ್ತ್ರೀ-ಪುತ್ರರನ್ನು ತೊರೆದು ಕಠಿಣ ತಪಸ್ಸು ಮಾಡುವ ವೀರತ್ಯಾಗಿಗಳೇ ಸೇರಿಕೊಂಡಿದ್ದರು. ಜನರ ಪರೀಕ್ಷೆಯಲ್ಲಿ ಶಿವಾಜಿಯು ಅಗ್ರೇಸರನಾಗಿದ್ದನು. ಇವನು ತನ್ನ ಸೇವಕರ ಯೋಗ್ಯತೆಯನ್ನು ನೋಡಿದೊಡನೆ—ಮಾತುಕಥೆಗಳಿಂದ—ಹಾವಭಾವಗಳಿಂದ—ಪತ್ರಲೇಖನಗಳಿಂದಲೂ, ತೂಕಮಾಡುತ್ತಿದ್ದನು. ಇವನು, ಸುಪ್ರಸಿದ್ಧ ಸ್ವಾಮಿಭಕ್ತನಾದ ಬಾಳಾಜಿ ಆವಜಿ,—ಇವನ ಸೋದರ ಚಿಮಣಾಜಿ, ಮತ್ತು ಶ್ಯಾಮಜಿಯರನ್ನು ಸಂಗ್ರಹಿಸಿದ ಕಥೆಯು ಮಹಾರಾಷ್ಟ್ರದ ಇತಿಹಾಸದಲ್ಲಿ ಸ್ವರ್ಣರಂಜಿತವಾಗಿದೆ. ಬಾಳಾಜಿ ಆವಜಿ, ಚಿಮಣಾಜಿ ಮತ್ತು ಶ್ಯಾಮಜಿ ಎಂಬವರು ಆಬಾಜಿ ಹರಿಚಿತ್ರೆಯ ಮಕ್ಕಳು. ಆಬಾಜಿ ಹರಿಚಿತ್ರೆಯು ದಕ್ಷಿಣ ಕಲ್ಯಾಣದ ಸುಭೇದಾರನಾದ ಹಬ್ಸಿ ಪಾಳೆಯಗಾರನ ದಿವಾನನಾಗಿದ್ದನು. ಪಾಳೆಯಗಾರನ ಅವಿವೇಕದಿಂದ ಆಬಾಜಿಯು ಕೊಲ್ಲಲ್ಪಡಲು, ಅವನ ಮಕ್ಕಳು ಅಲ್ಲಲ್ಲಿ ಅಲೆದು ಕಡೆಗೆ ಒಬ್ಬರೆವಿನ್ಯೂ ಆಫೀಸರನ ಕಾರಕೂನರಾಗಿ ಸೇರಿದರು. ಅದೇ ಸಮಯದಲ್ಲಿ ಶಿವಾಜಿಯು ಕೊಂಕಣಕ್ಕೆ ದಿಗ್ವಿಜಯಕ್ಕಾಗಿ ಬಂದಿದ್ದನು. ಬಾಳಾಜಿ ಆವಜಿಯು ತಮ್ಮ ಪರಿಚಯ, ಚರಿತ್ರೆಯನ್ನೆಲ್ಲಾ ಪತ್ರಮುಖಾಂತರ ಶಿವಾಜಿಗೆ ತಿಳಿಸಿ, ತಮ್ಮನ್ನು ನಿಮ್ಮ ತರಪಿನ ವರನ್ನಾಗಿ ಮಾಡಿಕೊಳ್ಳಬೇಕೆಂದೂ, ದೈನ್ಯದಿಂದ ಪ್ರಾರ್ಥಿಸಿಕೊಂಡಿದ್ದನು. ಶಿವಾಜಿಯು, ಬಾಳಾಜಿಯ ಒಕ್ಕಣೆಯ ಸರಳತೆಯಿಂದಲೇ ಅವನ ಶಕ್ತಿಯನ್ನಳೆದು, ಕೂಡಲೇ ಅವನನ್ನೂ ಅವನ ಸಹೋದರನನ್ನೂ ತನ್ನೆಡೆಗೆ ಬರಮಾಡಿಕೊಂಡು, ಬಾಳಾಜಿ ಆವಜಿಯನ್ನು ಚಿಟ್ಣೀಸನನ್ನಾಗಿ ನಿಯಮಿಸಿದನು. ಬಾಳಾಜಿ ಚಿಟ್ಣೀಸನು ಶಿವಾಜಿಯ ಬಲಗೈಯಾಗಿದ್ದು, ಛತ್ರಪತಿಯ ವಿಶಾಲ ಚರಿತ್ರೆಯಲ್ಲಿ ತನ್ನ ಚರಿತ್ರೆಯೊಂದನ್ನು ಇತಿಹಾಸಗಾರರಿಂದ ಬರೆಸಿಕೊಂಡಿರುವರು. ಧನ್ಯ ಚಿಟ್ಣೀಸ! ನಿನ್ನಂಥ ಸ್ವಾಮಿಭಕ್ತರಿಂದಲೇ ಶಿವಾಜಿ ಮಹಾರಾಜನ ಸ್ವರಾಜ್ಯಸಂಸ್ಥಾಪನೆಯ ಕಾರ್ಯವು ಸುಸೂತ್ರವಾಗಿ ಮುಗಿದು, ಪ್ರಜೆಗಳು, ಸ್ವಾತಂತ್ರ್ಯ ಸುಖಸಂತೋಷಗಳನ್ನು ಬಾಯಿ ಚಪ್ಪರಿಸಿ ಸವಿಯುವಂತಾಯಿತು.

ಶಿವಾಜಿಯು ಉಚ್ಚತರ ಸಾಧಕನಾಗಿದ್ದನು. ಇವನು ರಾಮದಾಸರ (ಕ್ರಿ. ಶ. ೧೬೦೮—೧೬೮೧) ಶಿಷ್ಯಕೋಟಿಗೆ ಸೇರುವ ಮೊದಲು, ಮಹಾಮಾತೆ ಭವಾನಿಯು ಅಪ್ಪಣೆಯಿಲ್ಲದೆ ಯಾವ ಕಾರ್ಯಕ್ಕೂ ಕೈ ಹಾಕುತ್ತಿರಲಿಲ್ಲ. ಸಾಕ್ಷಾತ್ ದೇವಿಯೇ ಇವನ ಮೈಮೇಲೆ ಬಂದು, ಮುಂದಿನ ಕಾರ್ಯಗಳನ್ನು ಶಿವಾಜಿಯು ಬಾಯಿಯಿಂದಲೇ ನುಡಿಸುತ್ತಿದ್ದಳಂತೆ! ಶಿವಾಜಿಯನ್ನು ಸಾಣೆಗಿಕ್ಕಿ ಛತ್ರಪತಿಯನ್ನಾಗಿ ಮಾಡಿದ ಕೀರ್ತಿಯು ಮುಕ್ಕಾಲು ಪಾಲು ಜೀಜಾಬಾಯಿಯ ಮಡಿಲಿಗೂ, ಕಾಲು ಪಾಲು ದಾದಾಜಿ ಕೊಂಡದೇವನ ಸೆರಗಿಗೂ ಬೀಳಲಿ! ಮಿತಾಹಾರ, ಮಿತವಾದ ನಿದ್ರೆ, ಸತತೋದ್ಯೋಗ, ಉಚ್ಚಧ್ಯೇಯ, ಇಂದ್ರಿಯನಿಗ್ರಹ ಇವೈದು ಶಿವಾಜಿಯ ಪಂಚಾಕ್ಷರಿ ಮಂತ್ರವಾಗಿತ್ತು. ಛತ್ರಪತಿಯು ದಿನಕ್ಕೆ ಮೂರೇ ತಾಸು ನಿದ್ರಿಸುತ್ತಿದ್ದನು. ಶಿವಾಜಿಯನ್ನು ಹೆತ್ತ ಮಹಾರಾಷ್ಟ್ರಮಾತೆಯೇ ನೀನೇ ಧನ್ಯೆ! ಶಿವಾಜಿಯನ್ನು ಛತ್ರಪತಿಯಾಗುವಂತೆ ತಯಾರುಮಾಡಿದ ಮಾತೆ ಜೀಜಾ ನೀನೇ ಧನ್ಯೆ! ಶಿವಾಜಿಯನ್ನು ವೀರನನ್ನಾಗಿ ರಚಿಸಿದ ದಾದಾಜಿ ದೇವ ನೀನೇ ಧನ್ಯ! ಶಿವ ಪ್ರಭುವಿನ ಸ್ವರಾಜ್ಯಸಂಸ್ಥಾಪನೆಯ ಮಹಾಕಾರ್ಯಕ್ಕೆ ಪುಣ್ಯವನ್ನು ಕೊಟ್ಟ ಶ್ರೀ ಸಮರ್ಥದೇವ ನೀನೇ ಧನ್ಯ! ಈ ಮಹಾಪುರುಷರೆಲ್ಲಾ ಧನ್ಯರಾದ ಮೇಲೆ ಈ ಶಕಪುರುಷನ ಅಭ್ಯುದಯವನ್ನು ಬರೆದ ನಮ್ಮ ಲೇಖನಿಯೂ ಧನ್ಯವಲ್ಲವೇ? ವಾಚಕವೃಂದ! ನೀವೇನೆನ್ನುವಿರಿ?

Have you heard of THE GOLDEN SCHEME
OF
The Guardian of India Insurance Co., Ltd., Madras?

A scheme best suited for the middle and poor class who cannot insure for a large sum.

Another unique scheme is the **SPLENDID FAMILY PROTECTION POLICY** under which the interests of your wife and children are best safeguarded—by an immediate cash payment of ¼ of the insured amount if the assured dies and an annual pension of 1/10 the insured amount to the wife till the expiry of the period of the policy and **then, the payment of the full insured amount** over and above the preceeding two benefits! If the assured survives the period of the policy, he gets the insured amount or a free paid-up policy for a large amount.

IS NOT THIS SCHEME AN IDEAL ONE FOR EVERY FAMILY MAN?

Full details can be had, without any obligation, from:—

V. D. Heranjal,
District Organizer,
MANGALORE.

OR FROM

M. T. Kordale & Co.,
Hampankatta,
MANGALORE.

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೆಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣವಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,—

ಲಿವರ್‌ಕ್ಯೂರ್ (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜಮ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ, ಮದ್ರಾಸು. } ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ. { ಹ್ಯಾರಿಸನ್ ರೋಡ್, ಕಲ್ಕತ್ತಾ.

The Canara Industrial & Banking Syndicate, Ltd.

ESTD. *(INCORPORATED IN BRITISH INDIA.)* 1925.

HEAD OFFICE: "Mukund Nivas" UDIPI.

SERVICE.

No force can destroy or argument refute the statement that we give best Banking service to public.

WHEN YOU WANT to open a Current or Savings Bank account remember us as you will find our rates and terms most advantageous.

WHEN YOU WANT to invest your monies in short or long term period deposits, consult our rates and you will always find them more favourable.

WHEN YOU WANT loans on Gold and other Ist class securities, you will find our terms most remunerative.

IF YOU DESIRE prompt collection of your bills, cheques and drafts on principal cities and towns of India, send them on to us for collection and we will collect at best rates.

WHEN YOU WANT a responsible Executor or Trustee to manage the affairs of your properties, we reccmmend your attention to 'Agency, Trustee and Executorship Department' of the Syndicate, who will be pleased to collect rents etc., on payment of a nominal fee.

Please remember that by co-cperatirg with this institution, ycu will be getting maximum service at minimum cost.

Further particulars can be had from the Head Office or Branches at:

1. Mangalore.	2. Bangalore.	3. Hubli.	4. Bellary.	5. Belgaum.
6. Hungarcutta.	7. Hospet.	8. Adoni.	9. Udipi.	10. Karwar.
11. Coondapoor.	12. Ankola.	13. Kumta.	14. Honavar.	15. Cannanore.
16. Kanhangad.	17. Sirsi.	18. Bhatkal.	19. Brahmavar.	20. Payyanur.

Paid-up Capital. Rs. 2,16,500/— Reserve Fund. Rs. 52,500/— Deposits exceed. Rs. 14,79,000/— Total Working Capital exceeds. Rs. 23,00,000/—

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್



ಡಾ. ವಾಮನ್ ಗೋಪಾಲರ

ಸರ್ಸಪರಿಲ್ಲಾ

ಬ್ರೇಡ್‌ಮಾರ್ಕ್.

೬ ತಪ್ಪಗಳ ಅಸುಧಪಡಿಂದ ತಿಂಗಳಿಗೆಷ್ಟು ಜನರು, ರಕ್ತ ಶುದ್ಧಿಕಾರಕ ಔಷಧಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ। ಗೌತಮರಾವ್ ಕೇಶವರಾವ್‌ರವರ ಟೊನಿಕ್ ಪೌಷ್ಟರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ। ಗೌತಮರಾವ್ ಕೇಶವ್ ಎಂಡ್ ಸನ್ಸ್, ಥಾಕೂರ್‌ದ್ವಾರ್ 2, ಬೊಂಬಾಯಿ.

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಆಶ್ಚರ್ಯಕರ ಕಾರ್ಯಗಳು ವಾಚಕರಿಗೆ ಸುಸಂಬದ್ಧವಾಗುವಂತೆ ಸ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಾಕೃತಿಗಳಿಂದ ಕೂಡಿದೆ.

ಸುಂದರವಾದ ಮುದ್ರಣ.

ಬೆಲೆ ರೂಪಾಯಿ ೧—೪—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗೀಯ ಶ್ರೀರಾಜ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಷಾಂತರಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುಕೂಲಕರವಾದ ಪಠಣ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಗುಪ್ತಮಂತ್ರ

100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸಲು ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಅದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಅಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು, ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಮ್ಮ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7—0.

ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Siddha Manthra Ashram,
No. 174, P. O. Katri Sarai, (GAYA.)

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಪುರಾಣ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನ್‌ಗಳಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.

ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK.
Fort. MIRAJ, (S.M.C.)

ಪದವಿಗಳು! ಔಷಧಗಳು! ಪುಸ್ತಕಗಳು!

ಎಚ್. ಎಲ್. ಎಂ. ಎಸ್. ಎಚ್. ಎಂ. ಬಿ., ಎಚ್. ಯಂ. ಡಿ., ವೈದ್ಯರಾಜ ಮೊದಲಾದ ಹೋಮಿಯೋ-ಆಯುರ್ವೇದ, ಯುನಾನಿಗಳಲ್ಲಿ ಟಪ್ಪಾಲಿನ ಮೂಲಕ ಬೋಧನೆ ಪಡೆಯಬಹುದು. ಡಿಗ್ರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಹೋಮಿಯೋ-ಮೆಟೀರಿಯ ಮೆಡಿಕ ಇದರ ಬೆಲೆ ರೂ. 5. ಹೋಮಿಯೋ ಪ್ರಾಕ್ಟಿಸ್ ಓಫ್ ಮೆಡಿಸಿನ್ ಬೆಲೆ ರೂ. 4-೩ ಆಣೆಯ ಸ್ಟಾಂಪುಗಳನ್ನಿಡಿರಿ.

ಇಂಡಿಯನ್ ಹೊಮಿಯೋಪೆತಿಕ್ ಇನ್ಸ್‌ಟಿಟ್ಯೂಟ್ ಮತ್ತು ಸೊಸ್ಯಾಟಿ (ರಿಜಿಸ್ಟರ್ಡ್),
ಪೋಸ್ಟು ಸಬರ್ಮತಿ, ಅಹಮ್ಮದಾಬಾದ್, (ಇಂಡಿಯಾ).

ಇದೀಗ ನಿಮಗೆ ಒಳ್ಳೆಯ ಸುಸಂದರ್ಭ!

ಇಂದಿನ ನಮೂನೆ! ಇಂದಿನ ಮ್ಹಾಲು!! ಇಂದಿನ ಕ್ರಯ!!!

ನಮ್ಮಲ್ಲಿ ಬೆನಾರಸ್, ಬೆಂಗಳೂರು, ಕೋಂಜೀವರಂ, ಹುಬ್ಬಳ್ಳಿ ಇಲಕಲ್ಲು, ಪುಲ್ಲಂಪೇಟು, ಪೋಂಡಿಚೇರಿ, ಬಡೋದೆ ವಗೈರೆ ಪ್ರಸಿದ್ಧ ಊರ ಹೊಸ ನಮೂನೆಯ ಶೀರೆಗಳು ಈಗಲೇ ಬಂದಿರುತ್ತವೆ. ತಮ್ಮಲ್ಲಿ ನೆರವೇರುವ ಶುಭಕಾರ್ಯಗಳಿಗೆ ಬೇಕಾಗುವ ಜವುಳಿಯನ್ನು ಈಗಲೇ ಬಂದು

ನೋಡಿರಿ! ಪಡೆಯಿರಿ!! ಆನಂದ ಪಡೆಯಿರಿ!!!

ಹೊಸ ನಮೂನೆ! ಹೊಸ ಮ್ಹಾಲು!! ದರ ಅತೀ ಸುಲಭ

ವಿ. ಸೂ.—ಒಮ್ಮೆ ಮುಂಚಿತವಾಗಿ ನಮ್ಮಲ್ಲಿ ಬಂದು ನೋಡಿದರೆ ಆಗ ತಮಗೆ ತಾನೆ ಸಮಾಧಾನವಾದೀತು.

ಸೂಜೀಕಾರ್ ಬ್ರದರ್ಸ್, ಜವುಳಿ ವ್ಯಾಪಾರಿಗಳು,

ಮಾರ್ಕೆಟು ರಸ್ತೆ, ಮಂಗಳೂರು, ದ. ಕ.

ಹೆಂಗಸರಿಗಾಗಿ

ಕೆಲವು ಕೈಕೆಲಸಗಳನ್ನು ಮಾಡುವ ವಿಧಾನ

(ಲೇಖಿಕಾ:—ಶ್ರೀಮತಿ ಎಸ್. ಆರ್. ಜಯಲಕ್ಷ್ಮೀ, ಬೆಂಗಳೂರು.)

(೧) ನೆಟ್ ವರ್ಕ್ ಎಂಬ್ರಾಯ್ಡರಿ

ಹೆಸರು ಸೂಚಿಸುತ್ತಿರುವಂತೆ ಇದು ಒಂದು ಕಸೂತಿಯ ಕೆಲಸ. ಬಹಳ ಸುಲಭವಾದುದಾದರೂ ಬಲು ಎಚ್ಚರಿಕೆಯಿಂದ ಮಾಡಬೇಕು. ಬಲೆಯಂತಿರುವ ಬಟ್ಟೆಯ ಮೇಲೆ ಈ ಚಿತ್ರ ಕೆಲಸವನ್ನು ಮಾಡುವುದರಿಂದ ಇದಕ್ಕೆ 'ನೆಟ್‌ವರ್ಕ್ ಎಂಬ್ರಾಯ್ಡರೀ' ಎಂಬ ಈ ಹೆಸರು ಬಂದಿದೆ.

ಸಾಧಾರಣವಾಗಿ ಈ ತರಹೆಯ ಚಿತ್ರದ ಕೆಲಸಗಳನ್ನು ಮಕ್ಕಳ ಜಂಪರ್‌ಗಳ ಅಂಚಿಗೂ, ರವಿಕೆಯ ಅಂಚಿಗೂ, ಟೇಬಲ್‌ಕ್ಲಾತ್, ಕುಷನ್ ಕವರುಗಳ ಮೇಲೆಯೂ ಹಾಕುವುದುಂಟು.

ಈ ಕೆಲಸಕ್ಕಾಗಿಯೇ ಬೇಕಾಗುವ ಬಟ್ಟೆಯೂ, ದಾರವೂ ಎಲ್ಲಾ ಎಂಬ್ರಾಯ್ಡರೀ ಸ್ಟೋರ್ಸುಗಳಲ್ಲಿಯೂ ಸಿಗುತ್ತದೆ. ಇದಕ್ಕೆ ಉಪಯೋಗಿಸುವ ಬಟ್ಟೆಯು ನೋಡಲು ಸೊಳ್ಳೆಯ ಪರದೆಯ ಬಟ್ಟೆಯಂತಿದ್ದರೂ, ಇದು ನಾಜೂಕಾಗಿ ಮಾಡಲ್ಪಟ್ಟುದು. ಸೊಳ್ಳೆಯ ಪರದೆಯಂತೆ ಇದು ಮಂದವಾದ ದಾರದಿಂದ ಜಾಳಜಾಳವಾಗಿ ಹೊಲೆಯಲ್ಪಡದೆ, ನಯವಾದ ದಾರದಿಂದ ಹೊಲೆಯಲ್ಪಟ್ಟು ಹತ್ತಿರಹತ್ತಿರ ರಂಧ್ರಗಳುಳ್ಳದಾಗಿದೆ. ಇದು ತರಹೇವಾರಿ ವರ್ಣಗಳಲ್ಲಿ ಸಿಗುವುದು. ನೀವು ಯಾವ ವರ್ಣದ ಬಟ್ಟೆಯಲ್ಲಿ ಕಸೂತಿಮಾಡಬೇಕೆಂದಿರುವಿರೋ ಅದೇ ಬಣ್ಣದ ಒಟ್ಟೆಯನ್ನೇ ಉಪಯೋಗಿಸಿದರೆ ಅಂದವಾಗಿರುವುದು. ಹೂ ಎಲೆಗಳನ್ನು ತೋರಿಸುವ ಚಿತ್ರಕ್ಕೆ ಹೊಂದುವ ವರ್ಣದ ಬಟ್ಟೆಯನ್ನುಪಯೋಗಿಸಿದರೂ ಸೊಗಸಾಗಿರುವುದು. ಬಟ್ಟೆಗೆ ಸರಿದೂಗುವ ದಾರವನ್ನು ಉಪಯೋಗಿಸಬೇಕು. D. M. C No. 25ನೇ ದಾರವಾದರೆ ಉತ್ತಮ. ಹಾಗಿಲ್ಲದಿದ್ದರೆ ರೇಷ್ಮೇ ದಾರವನ್ನು ಉಪಯೋಗಿಸಬಹುದು.

ನೀವು ಕಸೂತಿ ಮಾಡಬೇಕೆಂದಿರುವ ಬಟ್ಟೆಯಲ್ಲಿ ಮೊದಲು ನೀವು ಬರೆದಿಟ್ಟುಕೊಂಡಿರುವ ಚಿತ್ರವನ್ನು ಕಾರ್‌ಬನ್ ಪೇಪರ್ ಮೂಲಕವಾಗಿ ಬದಲಾಯಿಸಿಕೊಳ್ಳಬೇಕು. ಅನಂತರ ಒಂದೇ ಬಣ್ಣದಲ್ಲಿ ಎಲ್ಲವನ್ನೂ ಹೊಲೆಯುವುದಾಗಿದ್ದರೆ ಚಿತ್ರದ ಹಿಂದುಗಡೆ ಆ ನೆಟ್ ಬಟ್ಟೆಯನ್ನು (ಚಿತ್ರಕ್ಕೆ ಬೇಕಾದಷ್ಟು ಮಾತ್ರ ನೆಟ್ ಒಟ್ಟೆಯನ್ನು) ಟಾಕ್ ಹಾಕಿಕೊಳ್ಳಬೇಕು. ಆ ಮೇಲೆ ಆ ಚಿತ್ರಗಳಿಗನುಸರಿಸಿ ಅದರ ಹೊರ ಸುತ್ತಲೂ (Out-line) ನೆಟ್ ಬಟ್ಟೆಯನ್ನೂ ಸೇರಿಸಿ ತಾಜ್ ಹೊಲಿಗೆ (Button hole stitch) ಹೊಲೆಯಬೇಕು. ಹೊಲೆಯುವುದು ಒಂದು ಹೂವಿನ ಗಿಡವೆಂದು ಭಾವಿಸೋಣ. ಮೊದಲು ಹೂ, ಎಲೆಗಳ ಹೊರಸುತ್ತನ್ನೆಲ್ಲಾ ಹೊಲಿದುಕೊಂಡು ಇವುಗಳ ಮಧ್ಯಭಾಗದ ಬಟ್ಟೆಯನ್ನು ನೆಟ್ ಬಟ್ಟೆಯಿಂದ ಎಳೆದುಕೊಂಡು ಎಂಬ್ರಾಯ್ಡರೀ ಸಿಸರ್ಸ್‌ನಿಂದ ಸೂಕ್ಷ್ಮವಾಗಿ ಕತ್ತರಿಸಬೇಕು. ಹೀಗೆ ಸಾದಾ ಬಟ್ಟೆಯನ್ನು ತೆಗೆದರೆ ಒಳಗಿನಿಂದ ನೆಟ್ ಒಟ್ಟೆಯು ಅಂದವಾಗಿ ಕಾಣುವುದು. ಕುಸುಮವಿಡಬೇಕಾದರೆ ಕ್ಯಾನ್ವಾಸ್ ಒಟ್ಟೆಯಲ್ಲಿ ಹೊಲೆಯುವಂತೆ ನೆಟ್ ಬಟ್ಟೆಯ ಮಧ್ಯ ಭಾಗದಲ್ಲಿ ಹಳದೀ ನೂಲಿನಿಂದ ಕೆಲವು ರಂಧ್ರಗಳನ್ನು ಮಾತ್ರ ಮುಚ್ಚಿದರೆ ಸಾಕು. ಈ ರೀತಿಯಲ್ಲಿ ಹೂ, ಎಲೆಗಳಾದ ಮೇಲೆ ಬಳ್ಳಿ ಕೊಟ್ಟುಗಳನ್ನು ಓರೆ ಹೊಲಿಗೆಯಲ್ಲೂ (Stem stitch) ತಟ್ಟೇ ಹೊಲಿಗೆಯಲ್ಲೂ (Satur stitch) ಹೊಲೆದು ತೋರಿಸಬೇಕು. ಒಂದೇ ಚಿತ್ರಕ್ಕೂ ಎರಡು ಮೂರು ಬಣ್ಣಗಳನ್ನು ಉಪಯೋಗಿಸಬಹುದು. ಹೂವು ಎಲೆಗಳಿಗೆ ಪ್ರತ್ಯೇಕವಾಗಿ ನೆಟ್ ಬಟ್ಟೆ ಕತ್ತರಿಸಿ ಟಾಕ್ ಹಾಕಿ, ಒಂದಾದ ನಂತರ ಒಂದು ಹೊಲೆದರೆ ವಿಧವಿಧ ವರ್ಣಗಳಿಆ್ಲ ತೋರುವುವು.

ಈ ರೀತಿಯಾದ ನೆಟ್ ವರ್ಕ್ ಎಂಬ್ರಾಯ್ಡರಿಯು ಬಹು ಸುಂದರವಾಗಿರುವುದರಲ್ಲಿ ಸಂಶಯವಿಲ್ಲ.

(೨) ಅಪ್ಲಿಕೇ ವರ್ಕ್ (Apleque Work)

ಮನೆಯಲ್ಲಿ ಕೆಲಸ ಮುಗಿದನಂತರ ಏನುಮಾಡುವುದೆಂದು ತೋಚದೆ ಮಟನುಟ ಮಧ್ಯಾಹ್ನದಲ್ಲಿ ಮುದುಕಿಯರಂತೆ ಅನೇಕ ಯುವತಿಯರೂ ಸಹ ಮಲಗಿಕೊಂಡು ಗೊರಕೆಹೊಡೆಯುಕ್ತಾರೆ. ಪಾಪ! ಇದು ತರುಣವಯಸ್ಕರಿಗೆ ತಕ್ಕುದಲ್ಲ. ಆ ಹೊತ್ತಿನಲ್ಲಿ ಮನಸ್ಸಿಗೆ ಹರ್ಷ ತೋರುವಂತಹ ಕಸೂತಿ ಕೆಲಸ, ಚಿತ್ರ ಬರವಣಿಗೆ, ಓದುವುದು ಮುಂತಾದ ಅಭ್ಯಾಸವನ್ನು ನಮ್ಮ ನಾರಿಯರು ಇಟ್ಟುಕೊಳ್ಳುವದು ಅವಶ್ಯಕವೂ ಹೌದು; ಅವರ ಬುದ್ಧಿವಿಶಾಲತೆಗೆ ಸಹಕಾರಿಯೂ ಹೌದು. ಇಂಥಾ ಕೆಲಸಗಳಲ್ಲಿ ಅಪ್ಲಿಕೇ ವರ್ಕ್ ಎಂಬ ಕಸೂತಿ ಕೆಲಸವೂ ಒಂದು. ಇದು ಬಹಳ ಸುಲಭವಾದ ಕೆಲಸವಾದರೂ, ನೋಡಲು ಬಹು ಅಂದವಾಗಿಯೂ, ಸುಂದರವಾಗಿಯೂ ಇರುವುದು. ಬಹಳ ಬೇಗ ಆರಂಭಿಸಿ ಹೊಲಿದು ಮುಗಿಸಿಬಿಡ ಬಹುದು. ಈ ಕಸೂತಿ ಕೆಲಸಕ್ಕೆ ಬೇಕಾದ ಸಾಮಗ್ರಿಗಳನ್ನು ಇಲ್ಲಿ ಬರೆಯುವೆನು. ಅದಕ್ಕೆ ಬಣ್ಣ ಹೋಗದ ಒಳ್ಳೊಳ್ಳೆಯ ವರ್ಣದ ಬಟ್ಟೆಗಳು ಬೇಕು. ಇವು ರೇಷ್ಮೆಯ ಬಟ್ಟೆಯಾಗಿದ್ದರೆ ಒಳ್ಳೆಯದು. ಈ ಬಟ್ಟೆಗಳನ್ನು ಹೊಸದಾಗಿ ಕೊಂಡುಕೊಳ್ಳದೆ ಸುಲಭ ರೀತಿಯಲ್ಲಿ ಶೇಖರಿಸಿಕೊಳ್ಳುವ ರೀತಿಯನ್ನು ಹೇಳಲೇ? ನಿಮಗೂ, ನಿಮ್ಮ ಮಕ್ಕಳಿಗೂ ಲಂಗ, ರವಿಕೆ ಮುಂತಾದುವನ್ನು ಹೊಲಿದುಕೊಂಡು ಮಿಕ್ಕಿದ ಬಣ್ಣದ ಅಂದರೆ ಹೂ, ಎಲೆ ಮುಂತಾದುವು ಆಚ್ಚಿಡದೆ ಸಾದಾ ಬಣ್ಣದ ರೇಷ್ಮೆ ಬಟ್ಟೆಗಳ ತುಂಡು ಬಟ್ಟೆಗಳನ್ನು ಶೇಖರಿಸುತ್ತಾ ಬನ್ನಿ. ಬಟ್ಟೆಗಳು ಸುಮಾರಾಗಿ ಸೇರಿದನಂತರದಲ್ಲಿ ನಿಮ್ಮಲ್ಲಿರುವ ಒಟ್ಟೆಗಳ ವರ್ಣಗಳಲ್ಲಿಯೇ ಡಿ. ಎಂ. ಸಿ. ಕಸೂತಿ ಹಾಕುವ ೨೫ನೇ ನಂಬರ್ ದಾಭವನ್ನೂ ಕೊಂಡುಕೊಳ್ಳಿ. ಈ ಕಂಪೆನಿಯ ದಾರವೇ ಕಸೂತಿ ಕೆಲಸ ಮಾಡಲು ಉಚಿತವಾದ ದಾರವೆಂದು ಹೆಸರು ವಾಸಿ ಪಡೆದಿರುವುದು ನಿಮ್ಮಲ್ಲನೇಕರಿಗೆ ತಿಳಿದಿರಬಹುದು. ಅನಂತರ ಒರಗುವ ದಿಂಬಿನ ಚೀವೋ, ಕುರ್ಚಿಗೆ ಹಿಂದೆ ಒರಗುವ ಸ್ಥಳಕ್ಕೆ ಹಾಕುವ ಜಾಕವೋ, ಮೇಜಿನ ಒಟ್ಟೆಯೋ, ಮಕ್ಕಳ ಅಂಗಿ, ಅಥವಾ ಜಾಕಟ್ ಒಟ್ಟೆಗೋ ನೀವು ಹೂ ಹೊಲಿಗೆ ಹಾಕಬೇಕೆಂದು ಇಚ್ಛಿಸಿರುವ ಬಟ್ಟೆಯನ್ನು ತಯಾರಾಗಿ ತೆಗೆದಿಟ್ಟುಕೊಂಡು (ಒಟ್ಟೆಯು ಬಿಳಿಯ ಒಟ್ಟೆಯಾಗಿದ್ದರೆ ಉಚಿತ, ರೇಷ್ಮೆ ಒಟ್ಟೆಯಾದರೂ ಚಿಂತೆಯಿಲ್ಲ. ಅದೇ ಒಟ್ಟೆಯಾದರೂ ಚಿಂತೆಯಿಲ್ಲ.) ಅದರಲ್ಲಿ ಮೊದಲು ನೀವು ಹೊಲೆಯಬೇಕೆಂದು ಕಾಗದದಲ್ಲಿ ಬರೆದಿಟ್ಟುಕೊಂಡಿರುವ ಚಿತ್ರವನ್ನು ಕಾರ್‌ಬನ್ ಪೇಪರು ಮೂಲಕ ಬದಲಾಯಿಸಿ (Transfer) ಕೊಳ್ಳಬೇಕು. ನೀವು ಅಪ್ಲಿಕೇ ವರ್ಕನ್ನು ಚೆನ್ನಾಗಿ ಕಲಿಯಬೇಕಾದರೆ ಪ್ರಾರಂಭದಲ್ಲಿ ಪುಷ್ಪಗಳು, ಎಲೆಗಳು ಮುಂತಾದ ಚಿತ್ರವನ್ನು ಹೊಲಿಯಲು ಕಲಿತರೆ ಅನಂತರ ಮನುಷ್ಯರು, ಪಶು ಪಕ್ಷಿ, ಮನೆ ಮಠ ಮೊದಲಾದ ಎಲ್ಲಾ ಚಿತ್ರಗಳನ್ನೂ ಹೊಲಿಯಲು, ಕ್ರಮವಾಗಿಯೂ, ಸುಲಭವಾಗಿಯೂ ಬರುವುದು. ಮೊದಲು ಚಿತ್ರವನ್ನು ಕಾಗದದಲ್ಲಿ ಬರೆದು ನಿಮಗೆ ಚಿತ್ರ ಬರೆಯಲು ಬಾರದಿದ್ದರೆ ಬಲ್ಲವರನ್ನು ಕೇಳಿ ಬರೆದುಕೊಂಡು ಅದನ್ನು ಬಟ್ಟೆಗೆ ಕಾರ್‌ಬನ್ ಪೇಪರ ಮೂಲಕವಾಗಿ ಬದಲಾಯಿಸಿಕೊಂಡು ಹಾಕುವುದಕ್ಕೆ ಇಟ್ಟುಕೊಳ್ಳಬಹುದು. ಇಷ್ಟು ಕಷ್ಟಗಳಿಗೊಳಗಾಗುವುದಕ್ಕೆ ಬದಲಾಗಿ ನಾನೊಂದು ಸುಲಭರೀತಿಯನ್ನು ನಿಮಗೆ ಸೂಚಿಸುತ್ತೇನೆ. ಕಸೂತಿ ಕೆಲಸಕ್ಕೆ ಬೇಕಾದ ಸಾಮಗ್ರಿಗಳನ್ನು ಮಾರುವ ಅಂಗಡಿಯಲ್ಲಿ (Embroidery stores) ನಾನಾ ವಿಧವಾದ ಚಿತ್ರಗಳು ಬರೆದ ಕಾಗದಗಳನ್ನು ಮಾರುತ್ತಾರೆ. ಇಂಥಾ ಅಂಗಡಿಯೊಂದನ್ನು ನಿಮಗೆ ಪರಿಚಯವಡಿಸಲೇ? ಬೆಂಗಳೂರಿನಲ್ಲಿರುವ ಹೊಸ ಮಾರ್ಕೆಟ್ಟಿನ ಮುಂದುಗಡೆ ಒಂದು ಅಂಗಡಿಯಿದೆ. ಅಲ್ಲಿಂದ ನಮಗೆ ಬೇಕಾದ ಚಿತ್ರವನ್ನು ಆರಿಸಿಕೊಂಡು ಕೊಂಡು ಬರಬಹುದು. ಈ ಚಿತ್ರ ಬರೆದ ಕಾಗದದಗಳಿಗೆ ಅಷ್ಟೇನು ಬೆಲೆಯು ಕೂಡಾ ಇಲ್ಲ. ಈ ಚಿತ್ರವನ್ನು ಬಟ್ಟೆಗೆ ಬದಲಾಯಿಸಬೇಕಾದರೆ ಒಟ್ಟೆಯನ್ನು ಒಂದು ನಯವಾದ ಮೇಜಿನ ಮೇಲೋ, ಹಲಗೆಯ ಮೇಲೋ ಸುಕ್ಕಿಲ್ಲದೆ ಹಾಸಿ ಅದರ ಮೇಲೆ ಚಿತ್ರ ಬರೆದ ಕಾಗದದ ಮುಂಭಾಗವು ಬಟ್ಟೆಯ ಮೇಲೆ ತಗಲುವಂತೆ ಹಾಸಿ ಅದರ ಮೇಲೆ ಒಂದೇ ಮಾರ್ಗವಾಗಿ ಇಸ್ತ್ರಿ ಪೆಟ್ಟಿಗೆಯಿಂದ ಇಸ್ತ್ರಿ ಮಾಡಬೇಕು. ಇಸ್ತ್ರಿ ಪೆಟ್ಟಿಗೆ ಇಲ್ಲದವರು ತಳಭಾಗವು ಸಮನಾಗಿರುವ ಒಂದು ಪಾತ್ರೆಯಲ್ಲಿ ಬಿಸಿ ಬಿಸಿ ನೀರನ್ನು ತುಂಬಿ ಪಾತ್ರೆಯಿಂದ ಇಸ್ತ್ರಿ ಮಾಡಬಹುದು. ಆಗ ಬಟ್ಟೆಯ ಮೇಲೆ ಚಿತ್ರವು ಅಂಟಿಕೊಳ್ಳುವುದು! ನಾವು ಈಗ ಒಂದು ಗುಲಾಬಿ ಹೂವಿನ ಗೊಂಚಲನ್ನು ಬಟ್ಟೆಯಲ್ಲಿ ಚಿತ್ರಿಸಿದ್ದೇವೆ ಎಂದು ಇಟ್ಟುಕೊಳ್ಳೋಣ. ಗುಲಾಬಿ ಹೂವನ್ನು ದೇವರು ಸೃಷ್ಟಿಸಿರುವ ಸ್ವಾಭಾವಿಕ ಬಣ್ಣಗಳಲ್ಲಿ ಅಂದರೆ ನಿಮ್ಮಿಷ್ಟ ಬಂದಂತೆ ಹಳದೀ, ಕೆಂಪು, ಬಿಳೀ ಮೊದಲಾದ ಬಣ್ಣಗಳಲ್ಲೊಂದು ಬಣ್ಣದ ಒಟ್ಟೆಯಲ್ಲಿ ನೀವು ಈಗ ಹೊಲಿಯುವ ಹೂವಿನ ಚಿತ್ರವನ್ನೆ ಮಾತ್ರ ಕಾರ್‌ಬನ್ ಪೇಪರ ಮೂಲಕ ಚಿತ್ರಿಸಿಕೊಳ್ಳಬೇಕು. ಅನಂತರ ಆ ಬಟ್ಟೆಯಲ್ಲಿ ಚಿತ್ರಿಸಿರುವ ಹೂವನ್ನು ಮಾತ್ರ ಎಂಬ್ರಾಯ್ಡರೀ ಕತ್ತಿಯಿಂದ ಸುತ್ತಲೂ ನಾಜೂಕಾಗಿ ಕತ್ತರಿಸಿಕೊಳ್ಳಬೇಕು. ಅನಂತರ ಈ ಕತ್ತರಿಸಿದ ಬಟ್ಟೆಯ ಹೂವನ್ನು ಬಿಳೀ ಬಟ್ಟೆಯ ಮೇಲೆ ಬರೆದಿರುವ ಅದೇ ಹೂವಿನ ಚಿತ್ರದ ಮೇಲೆ ಸರಿಯಾಗಿ ಇಟ್ಟು ಆ ಒಟ್ಟೆಯೊಂದಿಗೆ ಹೊಂದಿಸಿ ಟಾಕಾ ಹೊಲಿಗೆ ಹಾಕಿಕೊಳ್ಳಬೇಕು.

ಅನಂತರ ಆ ಹೂವಿನ-ಸುತ್ತಲೂ, ಎರಡು ಒಟ್ಟೆಯನ್ನೂ ಹೊಂದಿಸಿ, ಆ ಹೂವಿನ ಬಟ್ಟೆ ಬಣ್ಣದ ದಾರದಿಂದಲೇ ನಾಜೂಕಾಗಿ ಕಾಜಾಹೊಲಿಗೆ (Button hole stitch) ಹಾಕಬೇಕು. ಬಟ್ಟೆಯ ಮೇಲೆ ಎಸಳುಗಳನ್ನು ತೋರಿಸಲು ಬರೆದಿರುವ ಗೆರೆಯ ಮೇಲೆ ಕಾಜಾಹೊಲಿಗೆಯಲ್ಲೋ, ಅಥವಾ ಓರೆ ಹೊಲಿಗೆಯಲ್ಲೋ (Stem stitch) ಹೊಲಿಯಬೇಕು. ಕುಸುಮಗಳು ಇರುವ ಹೂಗಳಿಗೆ ಕುಸುಮಗಳನ್ನು ತೋರಿಸಲು,

(೨೩ನೇ ಪುಟಕ್ಕೆ ಮುಂದರಿಸಿಯಡೆ.)

ಅತ್ಯಾಶ್ಚರ್ಯಕರವಾದ ಇಲೆಕ್ಟ್ರೋ-ಟಾನಿಕ್ ಉಪಚಾರ

ಇಂದ್ರಿಯದೌರ್ಬಲ್ಯ, ಎಲ್ಲಾ ತರದ ನರ್ವಸ್ ರೋಗಗಳು, ನಿದ್ರೆಯಿಲ್ಲದಿರುವಿಕೆ ಮೆದುಳಿನ ಅಶಕ್ತತೆ, ನೆನಪು ಮತ್ತು ಮನೋದಾರ್ಢ್ಯ ಕಡಿಮೆಯಾಗುವಿಕೆ ಇತ್ಯಾದಿಗಳಿಗೆ

ಚೈತನ್ಯ, ಮೆದುಳಿನ ಶಕ್ತಿ ಮತ್ತು ಆರೋಗ್ಯವನ್ನು ತೀವ್ರವಾಗಿಯೂ, ಏನೊಂದು ಬಾಧೆಯಿಲ್ಲದ ರೀತಿಯಲ್ಲಿಯೂ ಉಂಟುಮಾಡುವ, ಶಕ್ತಿವಂತವಾದ ಚೈತನ್ಯದಾಯಕ ಪದಾರ್ಥಗಳನ್ನುಳ್ಳ ಈ ಅಶ್ಚರ್ಯಕರವಾದ ಟಾನಿಕ್ ಗುಳಿಗೆಗಳ ವಿಸ್ಮಯಕರವಾದ ಗುಣಕಾರಿ ಪರಿಣಾಮವನ್ನು ಒಂದೇ ದಿನದಲ್ಲಿ ಕಂಡುಕೊಳ್ಳುವಿರಿ. ಉಷ್ಣಕಾಲದ ಅಶಕ್ತತೆಯು ಮಾಯವಾಗುವುದು ನಿಮ್ಮ ಜೀರ್ಣಶಕ್ತಿ, ಜೀವಸದ ಸುಖ ಮತ್ತು ಮುಖದ ಕಾಂತಿ ಎಣಿಕೆಗಿಂತಲೂ ಅಪರಿಮಿತವಾಗಿ ವರ್ಧಿಸುವುದು—ಚುರುಕಾದ ಮಾನಸಿಕ ಮತ್ತು ಶಾರೀರಕ ಉದ್ಯೋಗಗಳಲ್ಲಿ ನಿರತರಾದವರಿಗೆ ಅದರ್ಶಪ್ರಾಯವಾದುದು. ಅವನ್ನು ಇಂದೇ ಉಪಯೋಗಿಸಿರಿ—ಹೊಸ ಮನುಷ್ಯರಾಗಿರಿ!

ಕ್ರಯ: 25 ಮಾತ್ರೆಗಳ ಒಂದು ಬಾಟಲಿಗೆ ರೂ. 1—4—0. 40 ಮಾತ್ರೆಗಳ ಒಂದು ಬಾಟಲಿಗೆ ರೂ. 2—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಪ್ರೊ. ಜೇಮ್ಸರ ಇಲೆಕ್ಟ್ರೋ ಟೋನಿಕ್ ಪಿಲ್ಸ್

ಉಚಿತ ಮಾದರಿ. 2 ದಿನಗಳ ಉಪಯೋಗದ ಮಾದರಿ ಬಾಟ್ಲಿಯು 4 ಆಣೆಗಳ ಅಂಚೆ ಚೀಟುಗಳನ್ನು ಕಳುಹಿದಲ್ಲಿ ಧರ್ಮಾರ್ಥವಾಗಿ ರವಾನಿಸಲ್ಪಡುವುದು.
ವೇದನೆಯನ್ನು ಕೂಡಲೇ ಉಪಶಮನಗೊಳಿಸುತ್ತದೆ.

"ಆಡ್‌ಮನ್ಸ್ ಸ್ಯಾಪ್ರೆಸ್ಸ್ ಸಾಲ್ವ್" (ಬಾಮ್) (ರಿಜಿಸ್ಟರ್ಡ್)

ನೀವು ಅದರ ಪರಿಣಾಮವನ್ನು ಕಂಡು ಆಶ್ಚರ್ಯಪಡುವಿರಿ. ಅದು ಯಾವದೇ ತರದ ಹೊರ ವೇದನೆಯಾಗಿಲಿ, ಈ ಅಶ್ಚರ್ಯಕರವಾದ ಬಾಮನ್ನು ಕೂಡಲೇ ಸವರಿದಲ್ಲಿ ತೀವ್ರ ಉಪಶಮನವು ಸಿಗುವುದು. ಇಂದೇ ಒಂದು ಭರಣಿಯನ್ನು ಉಪಯೋಗಿಸಿರಿ. ಆ ಮೇಲೆ ನೀವು ಅದನ್ನು ಬಿಡಲಾರಿರಿ. ಅದು ಆಶ್ಚರ್ಯಕರವಾಗಿದೆ. ಎಲ್ಲೆಲ್ಲಿಯೂ ಸಿಗುತ್ತದೆ.
ಕ್ರಯ: ಭರಣಿಯೊಂದರ ರೂ. 1-0-0, ವಿ. ಪಿ. ಚಾರ್ಜು ಪ್ರತ್ಯೇಕ. ಟಪ್ಪಾಲು ಖರ್ಚಿಗಾಗಿ 2 ಆಣೆಗಳ ಅಂಚೆಚೀಟಿನೊಡನೆ ಬರೆದರೆ ಉಚಿತವಾದ ಮಾದರಿಯು ಸಿಗುವುದು.

Sole Agents:—**Anglo-Indian Drug & Chemical Co.,**
285, Juma Masjid, Bombay No. 2.

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ

ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ

ವಿಜಯನಗರಂ ಔಷಧ.

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರ ದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯಾ ಫ್ರಾತೃಾಡು ಮತ್ತು ಸಹೋದರ,

(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),

98—99 ಜ್ಯೋಡೀಸ್ ರೋಡ್, ಮೈಳಾಪುರ್, :: ಮದ್ರಾಸು.

(ರಾಮಕೃಷ್ಣ ಮಠದ ಎದುರು).

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಕ್ಲೈಮ್ ಹಣ ರೂ. 300,000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟ ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಠೇವಣಾತಿ (Deposit) ಇಟ್ಟು, ಅದರ ನಿಯಮಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಮತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ಪರ್ಷ ಒಂದಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯಾದ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90% ರಷ್ಟು ಸಾಲ ಪಡೆಯುವಿಕೆ. (3) ಇಮ್ಮಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಅಶಕ್ತತೆಯ ರಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮಕ್ಕಳ ಹೆಸರಿನಲ್ಲಿ 5000 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವನ ವಿಮಾ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

ಹೆಚ್ಚಿನ ವಿವರಗಳಿಗೆ ಬರೆಯಿರಿ.

1936ನೇ ಮೇ ತಿಂಗಳಲ್ಲಿ 12 ಮರಣಗಳು ರಿಪೋರ್ಟಾಗಿರುವುದರಿಂದ, ಮ್ಯೂಚುಯಲ್ ಬೆನಿಫಿಟ್ ಸ್ಕೀಮಿನ ಎಲ್ಲಾ ಸರ್ಟಿಫಿಕೇಟು ದಾರರೂ ಆವರವರ ಮಾಸಿಕ ಚಂದಾವನ್ನು ಮರಣಹೊಂದಿದವರ ನಾಮಿನಿಗಳ ಸಹಾಯಕ್ಕಾಗಿ ಎಂದಿನಂತೆ ಒಂದು ತಿಂಗಳೊಳಗಾಗಿ ಕಳುಹಿಸತಕ್ಕುದ್ದು. ಮ್ಯೂಚುಯಲ್ ಬೆನಿಫಿಟ್ ಸ್ಕೀಂ ಮೆಂಬರುಗಳು ತಾವು ಇಷ್ಟಪಟ್ಟಲ್ಲಿ ತಮ್ಮ ಸರ್ಟಿಫಿಕೇಟುಗಳನ್ನು ಜೀವನವಿಮೆ ಪಾಲಿಸಿಗಳಿಗೆ ಬದಲಾಯಿಸಬಹುದು.

ತಿರುಪತಿ ಬಲಿಜಾ ಅಂಡ್ ಕಂಪೆನಿ,

ಮ್ಯಾನೇಜಿಂಗ್ ಏಜಂಟರುಗಳು.

ಅಶಕ್ತ ಮಕ್ಕಳು

ಡೊಂಗರ

ಇವರ

ಬಾಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷಚಿತ್ತರೂ ಆಗುವರು.

ಕೆ. ಟೀ. ಡೊಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

PAINTERS

Do you require the service of a painter?
Please call or write to:

THE MANGALORE ART WORKS,
Hampankatta, Mangalore.

ಖಾತ್ರಿಯಾದ ತೃಪ್ತಿಯೂ, ವಿಜಯವೂ ಉಂಟೆಂದು ಗ್ಯಾರಂಟಿ.

ಜಾಹೀರಾತಿನಂತೆ ಇಲ್ಲವೆಂದು ಕಂಡುಬಂದರೆ, ಕೊಟ್ಟ ಹಣ ಹಿಂದೆ.

ಇಂದ್ರಜಾಲದ ಉಂಗುರ

ಅತ್ಯದ್ಭುತನಾದ ಈ 'ಮೆಸ್ಮರಿಜಮ್ಮಿನ' ಉಂಗುರವು, ಬಹಳ ಪರಿಶ್ರಮದೊಡನೆ ತಯಾರಿಸಲಾಗಿದೆ. ಇದರಲ್ಲಿ ಅಶ್ಚರ್ಯಕರವಾದ, ಸೂಜಿಕಲ್ಲಿನ ಗುಣಗಳುಳ್ಳ, ವಿದ್ಯುಚ್ಛಕ್ತಿಯುಳ್ಳ ಪದಾರ್ಥಗಳಿವೆ. ವಿಸ್ಮಯಜನಕವಾದ ಈ ಉಂಗುರದಲ್ಲಿ, ವಿಚಿತ್ರವಾದ ಇಂದ್ರಜಾಲ ಶಕ್ತಿಯು ತುಂಬಿದೆ. ಈ ಉಂಗುರದ ಮೂಲಕ, ಕ್ಷಣಮಾತ್ರದಲ್ಲಿ, ವರ್ತಮಾನ, ಭೂತ, ಭವಿಷ್ಯತ್ತಿನ ವಿಷಯಗಳನ್ನು ಬಹಳ ಸುಲಭವಾಗಿ ನಿರ್ಧರಿಸಬಹುದು. ಸತ್ತವರನ್ನು ಅಥವಾ ಇದ್ದವರನ್ನು ಸಂದರ್ಶಿಸುವುದು, ಸಾವಿರಾರು ಮೈಲುಗಳ ದೂರದ ಸಂಗತಿಗಳನ್ನು ತಿಳಿದುಕೊಳ್ಳುವುದು, ಹುಗಿದ ನಿಧಿಯ ಶೋಧನೆ, ರೋಗಿಯ ಕಾಹಿಲೆಯ ವಾರ್ತೆ, ಕಳೆದು ಹೋದ ಪದಾರ್ಥ ತಿರುಗಿ ದೊರಕೋಣ, ಬಂದು ಮಾಡಿದ ಕವರಿನ ವಿಚಾರ ತಿಳಿಯೋಣ, ಅಲ್ಲದೆ ಸೋಡ್ತಿಯಲ್ಲಿ ಬಹುಮೂಲ ಸಿಕ್ಕುವ ನಂಬರು, ಗುಪ್ತ ದ್ರವ್ಯದ ಕುರುಹು, ಗುಪ್ತ ಪ್ರಶ್ನೆಗಳಿಗೆ ಉತ್ತರಗಳು—ಇವೇ ಮೊದಲಾದ ಇತರ ಸಾವಿರಾರು ಆತ್ಯಾಶ್ಚರ್ಯಕರವಾದ ಕಾರ್ಯಗಳೂ ಈ ಉಂಗುರದ ಮೂಲಕ ಕ್ಷಣಕಾಲದಲ್ಲಿ ಸಾಧ್ಯವಾಗುತ್ತದೆ. ಪ್ರತಿ ಉಂಗುರದೊಡನೆ ಸೂಚೀಪತ್ರವೂ. ಬೆಲೆ ರೂ. 2/- ಪೋಸ್ಟೇಜ್ ಆಣೆ 8. ಸಿಕ್ಕುವ ವಿಳಾಸ:—



KRISHNA MAGICAL HOUSE,
No. 2, Aligarh, U. P.

ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ಅಖಿಲ ಹಿಂದುಸ್ಥಾನದಲ್ಲಿ ಪ್ರಖ್ಯಾತಿಪಟ್ಟ

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್‌ರವರ ತ್ರಿಲೋಕ (ನಾರದ) ಮಾರ್ಕಿನ

ಸ್ಟೀಲು ಟ್ರಂಕುಗಳು, ಮತ್ತು ಸೂಟ್ ಕೇಸುಗಳು

ಅನೇಕ ವರ್ಷಗಳ ಮಾಹಿತಿಯಿಂದಲೂ, ಒಳ್ಳೇ ಕೆಲಸಗಾರರಿಂದಲೂ ಬಹಳ ನಾಜೂಕಾಗಿ ತಯಾರಿಸಲ್ಪಡುತ್ತಿವೆ. ನಮ್ಮಲ್ಲಿ ನಿಮ್ಮ ಬಟ್ಟೆಗಳು ಕೆಟ್ಟುಹೋಗದಂತೆಯೂ, ಬಹುಕಾಲ ಬಾಳಿಕೆ ಬರುವಂತೆಯೂ, ಮನಸ್ಸಿಗೆ ತೃಪ್ತಿಕರವಾಗುವ ರೀತಿಯಲ್ಲಿ ನಾನಾ ತರದ ಸ್ಟೀಲು ಟ್ರಂಕುಗಳೂ, ಸೂಟ್ ಕೇಸುಗಳೂ, ಕ್ಯಾಬಿನ್ ಸೂಟ್ ಕೇಸುಗಳೂ, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳೂ, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳೂ, ಕ್ಯಾಷ್‌ಬೋಕ್ಸ್ ಇವೇ ಮೊದಲಾದುವುಗಳು ವಿಕ್ರಯಕ್ಕೆ ಸಿದ್ಧವಿರುವವು. ತ್ರಿಲೋಕ (ನಾರದ) ಟ್ರೇಡ್‌ಮಾರ್ಕಿನ ಮುದ್ರೆಯು ಮತ್ತು ಒಳಗಡೆ ಲೇಬಲ್ ನಮ್ಮ ಪ್ರತಿಯೊಂದು ಪೆಟ್ಟಿಗೆಯಲ್ಲೂ ಇರುವುದು. ಕ್ರಯಕ್ಕೆ ತಕ್ಕ ಮ್ಹಾಲು ಬೇಕಾದಲ್ಲಿ ಈ ಟ್ರೇಡ್‌ಮಾರ್ಕು ಇರುವ ಪೆಟ್ಟಿಗೆಗಳನ್ನು ಪರೀಕ್ಷಿಸಿ ಪಡಕೊಂಡು ಸಂತೋಷಪಡೆಯಿರಿ.



ವ್ಯಾಪಾರಸ್ಥರಿಗೆ ಸುಸಂದರ್ಭ. **ನಮ್ಮ 'ಷೊ' ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ, ನಿಮಗೆ ಖಚಿತವಾಗುವುದು.**

ಹೆಚ್ಚಿನ ಮಾಹಿತಿ ಬಗ್ಗೆ ಈಕೆಳಗಿನ ವಿಳಾಸಕ್ಕೆ ಬರೆಯಿರಿ:—

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು: 22, ಬೇಕರ್ ಸ್ಟ್ರೀಟ್, ಜಿ. ಟಿ. ಮದ್ರಾಸು. ಬ್ರಾಂಚ್ ಆಫೀಸು: ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

ಬೆಲೆ ಬಹು ಸುಲಭ! | ಒಂದೇ ದರ!! | ಹೊಸ ಜವುಳಿಗಳು!!!

ಮ್ಹಾಲುಗಳ ಬಣ್ಣ, ಮೊಳ ಮುಂತಾದ ನಿಜಸ್ಥಿತಿಗಳನ್ನು ಹೇಳಿಯೇ ಮಾರಲ್ಪಡುತ್ತದೆ.

ಒಮ್ಮೆ ದಯಮಾಡಿ ಬಂದು ನಮ್ಮ ಮಳಿಗೆಯನ್ನು ಸಂದರ್ಶಿಸಿದ್ದಲ್ಲಿ ಮನಸ್ಸಿಗೆ ಸಮಾಧಾನ ಕಂಡೀತು.

ಈಗಿನ ಹೊಸ ಹೊಸ ಫೇಶನುಗಳಿಗೂ, ಮದುವೆ ಮೊದಲಾದ ಶುಭಕಾರ್ಯಗಳಿಗೂ ಬೇಕಾದ ನಮೂನೆವಾರು ರೇಶ್ಮೆ ಜರಿ ಶೀರೆಗಳೂ, ಬೇರೆ ಬೇರೆ ಪ್ರಾಂತದ ಕೈಮಗ್ಗಗಳಲ್ಲಿ ತಯಾರಾದ ಅನೇಕ ವಿಧದ ಸ್ವದೇಶಿ ಶೀರೆಗಳೂ, ಮಂಗಳೂರು ಉದ್ಯಿಯಲ್ಲಿ ತಯಾರಾದ ಮಿಶನ್ ಮಗ್ಗದ ಶೀರೆಗಳೂ ರಖಂ ಮತ್ತು ಚಿಲ್ಲರೆಯಾಗಿ ದೊರೆಯುತ್ತವೆ.

ಸಿಲ್ಕು, ಜರಿ ಮತ್ತು ನೂಲಿನ ನಾಜೂಕಾದ ಧೋತಿಗಳು, ಶಾಲು, ರುಮಾಲುಗಳು, ಮಡಿಗಳು, ಕೋಟಿಂಗ್ ಮತ್ತು ಶರ್ಟಿಂಗ್ ಬಟ್ಟೆಗಳೂ, ಇನ್ನೂ ಅನೇಕಾನೇಕ ನಮೂನೆವಾರು ಜವುಳಿಗಳೂ ಕೂಡಾ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕಿವೆ.

☞ **ವಿ. ಸೂ:**— ನಮ್ಮಲ್ಲಿ ಪಡೆದ ಮ್ಹಾಲು ಬೇರೆ ಕಡೆಗಳಿಗಿಂತ ಬೆಲೆ ಸುಲಭವಲ್ಲವೆಂತ ಕಂಡುಬಂದಲ್ಲಿ ಯಾ ಇತರ ಕಾರಣಗಳಿಂದಾಗಲಿ ಬೇಡವೆಂತ ತೋರಿದ್ದಲ್ಲಿ ಹಾಳು ಮಾಡದೆ **8** ದಿವಸದೊಳಗೆ ವಾಪಾಸು ಮಾಡಬಹುದು.

ಸೇಲಂಕಾರ್ ಎ. ವರದರಾಜು ಚೆಟ್ಟಿಯಾರ್, ಜವುಳಿ ಅಂಗಡಿ, ಮಾರ್ಕೆಟು ರಸ್ತೆ, ಮಂಗಳೂರು.

ಪತ್ರವ್ಯವಹಾರ

ಸೂಚನೆ:—[ಬಾತಮಿದಾರರ ಅಭಿಪ್ರಾಯಗಳು ಕಂಠೀರವನ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ವಿಳಾಸ ಕೊಡಬೇಕಾಗಿದೆ—ಸಂ.]

ಇದೇ ಜೂನ್ ೨ನೇ ತಾರೀಕಿನ ನಿಮ್ಮ ಪತ್ರಿಕೆಯಲ್ಲಿ ಶ್ರೀ. ಬಿ. ಶಿವರಾಯರು ಬರೆದ ಲೇಖನವನ್ನು ಆಮೂಲಾಗ್ರವಾಗಿ ಓದಿ ನೋಡಿದರೂಒಂದಿಷ್ಟೂ ಆಶ್ಚರ್ಯವಾಗಲಿಲ್ಲ. ಹಾಗೆ ಬರೆಯುವುದಕ್ಕೆ ಕೇವಲ ಪಕ್ಷಪಾತದೃಷ್ಟಿ ಕಾರಣವಿರಬಹುದೇ ಹೊರತು ಇನ್ನಿತರ ಯಾವ ಕಾರಣವೂ ಇರಲಿಕ್ಕಿಲ್ಲ. ಮಾತ್ಸರ್ಯದ ಫಲಿತಾಂಶವಾಗಿ ಆರೋಪಿಸಿದ ಸಂಗತಿಗಳ ನಿಜಸ್ಥಿತಿಯನ್ನು ಬಯಲಿಗಿಡುವ ಕಾರಣ ಒಂದಲ್ಲದಿದ್ದರೆ ಅದಕ್ಕೆ ಉತ್ತರ ಬರಿಯುವ ಗೊಡವೆಗೆ ನಾನು ಹೋಗುತ್ತಿದ್ದಿಲ್ಲ. ಅಂಥಾ ಆರೋಪಣೆಗಳ್ಯಾವುವೆಂದರೆ:—

೧. ಶ್ರೀ. ಬಿ. ಶಿವರಾಯರ ಆರಾಧ್ಯ ದೇವತೆಯಾಗಿರುವ ಶ್ರೀ. ಕಾರಂತರು ಮತ್ತು ಇತರ ಕಾಂಗ್ರೆಸು ಧುರೀಣರು ಮದ್ರಾಸು ನ್ಯಾಯವಿಧಾಯಕ ಸಭೆಯನ್ನು ಬಹಿಷ್ಕರಿಸಿದಾಗ ನಾನು ಎಲ್ಲರ ಮನಸ್ಸಿಗೂ ವಿರೋಧವಾಗಿ ಸಭೆಯನ್ನು ಪ್ರವೇಶಿಸಿ ಸ್ವೇಚ್ಛೆಯಿಂದ ಕೆಲಸಮಾಡಿದೆನೆಂದೂ ಈಗ ಕಾಂಗ್ರೆಸು ಅಂತಹ ಬಹಿಷ್ಕಾರವನ್ನು ತೆಗೆದಿದ್ದರಿಂದ ಸ್ವತಂತ್ರವಾಗಿ ನಿಲ್ಲಲು ಹೆದರಿ 'ಹುಲಿಯು ಬಣ್ಣ ಬರಬೇಕೆಂಬ ಹಾಗೆ ಮೈ ಸುಟ್ಟು ಕೊಂಡ ನರಿಯಂತೆ' ಕಾಂಗ್ರೆಸ್ಸಿನೊಳಗೆ ಸೇರಿ ಕಾಂಗ್ರೆಸು ಉಮೇದ್ವಾರನಾಗಿ ಆರಿಸಲ್ಪಡಬೇಕೆಂದು ಹಾರೈಸುತ್ತಿದ್ದೇನೆಂದೂ ಒಂದು. ಅವರ ಈ ಮಾತುಗಳಿಂದ ನಾನು ದೇಶಭಕ್ತನಲ್ಲ ವೆಂಬುದೂ ವ್ಯಕ್ತವಾಗುತ್ತದೆ. ಬರೇ ಅಯೋಗ್ಯರಿಗೆ ಸಹಜವಾದ ರೀತಿಯಲ್ಲಿ ಬರೆಯಲಿಕ್ಕೆ ಶ್ರೀ ಶಿವರಾಯರಂತಹ ಜನರು ನನ್ನ ಬಳಿಯಲ್ಲಿಲ್ಲದಿರುವುದರಿಂದಲೂ ಅದರಿಂದ ಏನೂ ಉಪಯೋಗವಿಲ್ಲದಿರುವುದರಿಂದಲೂ ನಾನು ನಿಜವಾದ ಕೆಲವು ಸಂಗತಿಗಳನ್ನು ಮಾತ್ರ ವಾಚಕರ ಮುಂದಿರಿಸುತ್ತೇನೆ—

ಕಾಂಗ್ರೆಸು ಉಮೇದ್ವಾರರಾದ ಶ್ರೀ ಕಾರಂತರು ಕೊಂಗ್ರೆಸ್ ಕಡೆಯಿಂದ ಬಿಟ್ಟ ಸ್ಥಾನಕ್ಕೆ ನಾನು ನಿಂತಿದ್ದೇನೆಂದು ಹೇಳುವುದಕ್ಕಿಂತ ಹೆಚ್ಚಿನ ಸುಳ್ಳು ಬೇರೊಂದಿರಲಿಕ್ಕಿಲ್ಲ. ಆ ಸ್ಥಾನಕ್ಕೆ ನಿಂತವರು ಶ್ರೀ ನಗರ್ ಶ್ರೀನಿವಾಸರಾಯರು. ನಾನು ಆ ಬಳಿಕ ನಡೆದ ಚುನಾವಣೆಯಲ್ಲಿ ಆರಿಸಲ್ಪಟ್ಟಾಗ, ಶ್ರೀ ಕಾರಂತರೇ ಅಧ್ಯಕ್ಷರಾಗಿದ್ದ ಕಾಂಗ್ರೆಸ್ ಸಿವಿಕ್ ಬೋರ್ಡ್ ಕಳೆದ ಜಿಲ್ಲಾ ಬೋರ್ಡಿನ ಅಧ್ಯಕ್ಷ ಸ್ಥಾನಕ್ಕೆ ನಿಲ್ಲಿಸಿದ ಶ್ರೀ ಎ. ಬಿ. ಶೆಟ್ಟರೂ ಮಾಜಿ ಕಾಂಗ್ರೆಸ್ ಎಂ. ಎಲ್. ಸಿ. ಯವರಾದ ಶ್ರೀ ನಾಗಣ್ಣ ಹೆಗ್ಡೆಯವರೂ ಚುನಾವಣೆಯ ಕ್ಷೇತ್ರದಲ್ಲಿ ನನ್ನ ವಿರೋಧಿಗಳಾಗಿದ್ದರು.

ನ್ಯಾಯವಿಧಾಯಕ ಸಭೆಯನ್ನು ಬಹಿಷ್ಕರಿಸಬೇಕೆಂಬುದನ್ನು ವಿರೋಧಿಸುವವರಲ್ಲಿ ನಾನೂ ಒಬ್ಬನಾಗಿದ್ದೆನು. ೧೯೨೯ನೇ ಇಸವಿಯಲ್ಲಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಈಗ ಕಾಂಗ್ರೆಸ್ಸಿಗೆ ಅಂದು ಅನರು ಮಾಡಿದ ಕೆಲಸವು ತಪ್ಪೆಂದು ತಿಳಿದುಬಂದಿದೆ. ಯಾಕೆಂದರೆ ಅಂಥಾ ಸಭೆಯಿಂದ ಹೆಚ್ಚಿನ ಪ್ರಯೋಜನ ಸಿಕ್ಕದಿದ್ದರೂ ಸ್ವಾರ್ಥಿಗಳ ಕೈಯಲ್ಲಿ ಸಿಕ್ಕಿದರೆ ದೇಶಕ್ಕೆ ಅನ್ಯಾಯ ಮತ್ತು ಕೇಡನ್ನುಂಟುಮಾಡುವ ಯಂತ್ರವಾಗಿ ಪರಿಣಮಿಸಬಹುದೆಂದು ಈಗ ವ್ಯಕ್ತವಾಗಿದೆ. ಆದ್ದರಿಂದಲೇ ಈಗಿನ ಕಾಂಗ್ರೆಸು ಎಂ. ಎಲ್. ಎ. ಶ್ರೀ ಸತ್ಯಮೂರ್ತಿ ವೆಂಕಟಾಚಲ ಚೆಟ್ಟಿ ಮತ್ತು ಶ್ರೀ ಕೋಟಿರೆಡ್ಡಿ ಮೊದಲಾದವರಂತೆ ಆ ಸಭೆಯಿಂದ ದೇಶಕ್ಕಾಗುವ ಕಷ್ಟನಷ್ಟಗಳನ್ನು ತಪ್ಪಿಸುವುದಕ್ಕಾಗಿ ನಾನೂ ಪ್ರವೇಶಿಸಿದೆನು. ನಾನು ಈ ಜಿಲ್ಲೆಗಾಗಿ, ಹೆಚ್ಚೇಕೆ? ಈ ಸಂಸ್ಥಾನಕ್ಕಾಗಿ, ಮಾಡಿದ ಕೆಲಸವು ಪ್ರತಿಯೊಬ್ಬ ವ್ಯಕ್ತಿಗೂ ಗೊತ್ತಿದೆ. ನಾನು ಇಡೀ ಸಂಸ್ಥಾನದ ಶ್ರೇಯೋಭಿವೃದ್ಧಿಗಾಗಿ ಮಾಡಿದ ಪ್ರಯತ್ನವನ್ನು ನಿಷ್ಪಕ್ಷಪಾತಿಗಳು, ಗುಣಗ್ರಾಹಿಗಳು, ಒಪ್ಪಬಹುದಲ್ಲದೆ, ಕೃತಘ್ನನೂ ವಕ್ರಪಾತಿಯೂ ಆದ 'ಕೂಪಮಂಡೂಕ'ನಂತಿರುವ—ನನ್ನ ಗುಣದೋಷ ಪರೀಕ್ಷಕನು ಹೇಗೆ ತಾನೇ ಒಪ್ಪಬಲ್ಲನು? ನಾನು ಮಾಡಿರುವ ಕೆಲಸಗಳನ್ನು ಪುನಃ ಪುನಃ ಹೇಳಲಿಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲವಾದರೂ ಸಂಸ್ಥಾನದ ಪ್ರಸಿದ್ಧ ಪುರುಷರು ಕೆಲವರು ಪದೇ ಪದೇ ನನಗೆ ಬರೆದ ಕಾಗದಗಳ ಅಭಿಪ್ರಾಯವನ್ನು ಶ್ರೀ ಶಿವರಾಯರಿಗೋಸ್ಕರವಾಗಿ ಈ ಕೆಳಗೆ ಕೊಡುತ್ತೇನೆ.

೧. ಈ ಜಿಲ್ಲೆಯಲ್ಲಿ ಅಸಹಕಾರ ಚಳವಳಿಯ ಕಾಲದಲ್ಲಿ ಪೋಲೀಸರು ಅತ್ಯಾಚಾರವನ್ನು ನಡೆಸಿದಾಗ ನಾನು ನ್ಯಾಯವಿಧಾಯಕ ಸಭೆಯಲ್ಲಿ ಮತ್ತು ಬೇರೆ ರೀತಿಯಲ್ಲಿ ಅದನ್ನು ತೀವ್ರವಾಗಿ ಖಂಡಿಸಿ ಮಾಡಿದ ಕೆಲಸಕ್ಕಾಗಿ ಸುಪ್ರಸಿದ್ಧ ದೇಶಭಕ್ತರಾದ ಶ್ರೀ ಕಾರ್ನಾಡು ಸದಾಶಿವರಾಯರು ಹೀಗೆಂದಿರುವರು. 'ಅಸಹಕಾರ ಚಳವಳಿಯ ಕಾಲದಲ್ಲಿ ಮದ್ರಾಸ್ ಸರಕಾರವು ಮಿತಿಮೀರಿ ಉಪಯೋಗಿಸಿದ ಕಾನೂನುಗಳ ವಿಷಯ ನೀವು ಈ ಜಿಲ್ಲೆಗಾಗಿ ಮಾಡಿದ ಅಮೂಲ್ಯವಾದ ಕಾರ್ಯಕ್ಕೆ ನಾನು ಸಂತೋಷಪಡುತ್ತೇನೆ.'

೨. ಅದೇ ವಿಷಯದಲ್ಲಿ (a) ನವಯುಗದ ಸಂಪಾದಕರಾದ ಶ್ರೀ ಕಾಂತಪ್ಪ ಶೆಟ್ಟರು 'ಪೋಲೀಸರ ಅತ್ಯಾಚಾರವನ್ನು ಧೈರ್ಯದಿಂದ ಖಂಡಿಸಿದ್ದಕ್ಕಾಗಿ ಜನರು ನಿಮಗೆ ಋಣಿಗಳಾಗಿದ್ದಾರೆ' ಎಂದಿರುವರು. (b) ಕರ್ನಾಟಕದ ಕಾಂಗ್ರೆಸು ನಾಯಕರಲ್ಲೊಬ್ಬರಾದ ಶ್ರೀ ಕೃಷ್ಣರಾಯ ಕೊಡಗಿಯವರು ಹೀಗೆಂದಿರುತ್ತಾರೆ—'ನಿಮ್ಮ ನ್ಯಾಯವಿಧಾಯಕ ಸಭೆಯ ಕಾರ್ಯಗಳಿಗಾಗಿ ಅಭಿವಂದನೆಗಳು.' (c) ತಲ್ಚೇರಿಯ ಶ್ರೀ ಎಲ್. ಎಸ್. ಪ್ರಭುಗಳ ಪತ್ರಿಯು ತಾಳಿಯು ಮೇಲೆ ಕೈಮಾಡಿದ ಅತ್ಯಾಚಾರದ ವಿಷಯದಲ್ಲಿ ನಾನು ಕೈಕೊಂಡ ಕೆಲಸಕ್ಕೆ ಶ್ರೀ. ಆರ್. ಎಸ್. ಪ್ರಭುಗಳು 'ಸರ್ವಶಕ್ತನಾದ ಭಗವಂತನೇ ನೀವು ಮಾಡಿದ ಈ ಕೆಲಸಕ್ಕೆ ಬಹುಮಾನವನ್ನು ಕೊಡಲಿ. ಬೆಂಗಾರ ಎಂಬ ಹೆಸರು ಅಕ್ಷರಶಃ ನಿಮಗೊಪ್ಪಲಿ' ಎಂದು ಬರೆದಿರುವರು. (d) ಪಯೋಡಿ ಬಾರ್ ಎಸೋಸಿಯೇಶನಿನ ಅಧ್ಯಕ್ಷರಾದ ವಕೀಲ ಶ್ರೀ ವಿ. ಎಸ್. ವೆಂಕಟಾಚಲಮ್ ಅವರು ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ನಾನು ಮಾಡಿದ ಪ್ರಯತ್ನವನ್ನು ಕುರಿತು 'ಕರ್ಬನರ್ನಾಡು ತಾಲೂಕಿನ ವರ್ಗದಾರರು ಭೂಕಂದಾಯದ ವಿಷಯದಲ್ಲಿ ಪಡುತ್ತಿರುವ ಕಷ್ಟವನ್ನು ಮುಂದಿನ ಸಭೆಯಲ್ಲಿ ನಿಮ್ಮ ಸಂಪೂರ್ಣ ಸಾಹಸದಿಂದ ನಿವಾರಿಸುವಿರಾಗಿ ಬಯಸುತ್ತೇವೆ. ನೀವು ಈ ಸಂಸ್ಥಾನದ ಜನರ ಸಂಕಷ್ಟ ನಿವಾರಣೆಗಾಗಿ ಪ್ರಯತ್ನಪಡುವವರಾದ್ದರಿಂದ ಮಲಬಾರಿನ ಮೆಂಬರರನ್ನು ಸಹ ಬಿಟ್ಟು ನಿಮ್ಮಲ್ಲಿಯೇ ಈ ವಿಷಯವನ್ನು ಅರಿಕೆಮಾಡಿಕೊಂಡಿದ್ದೇವೆ' ಎಂದು ಹೇಳಿರುತ್ತಾರೆ. ಈಗ ಮದ್ರಾಸು ಹಿಂದೂ ರಿಲೀಜಿಯಸ್ ಎಂಡೊಮೆಂಟ್ ಬೋರ್ಡಿನ ಅಧ್ಯಕ್ಷರಾದ ಮತ್ತು ಆಗ್ಗೆ ಅನಂತಪುರ ಜಿಲ್ಲೆಯ ಪಬ್ಲಿಕ್ ಪ್ರೊಸಿಕ್ಯೂಟರ್ ಮತ್ತು ಅನಂತಪುರ ತಾಲೂಕು ಬೋರ್ಡ್ ಪ್ರೆಸಿಡೆಂಟರಾಗಿದ್ದ ಶ್ರೀ ಎ. ಕೊಂಡಸ್ವ, ಎಡ್ವೊಕೇಟ್ ಅವರು ನಾನು ಕೌನ್ಸಿಲಿನಲ್ಲಿ ಮಾಡುತ್ತಿರುವ ಕೆಲಸಗಳ ಕುರಿತು—'ನೀವು ನ್ಯಾಯಕ್ಕಾಗಿ ಹೋರಾಡುವ ಶೂರ ಧುರಂಧರರೆಂದು ನನಗೆ ತಿಳಿದಿದೆ' ಎಂದು ಬರೆದಿರುತ್ತಾರೆ. ಇವರಲ್ಲದೆ ಇನ್ನೂ ಅನೇಕ ಧುರೀಣರೂ ಇದೇ ರೀತಿಯಲ್ಲಿ ಬರೆದಿರುತ್ತಾರೆ.

ಆದ್ದರಿಂದ ೧೯೨೨ನೇ ಇಸವಿಯಿಂದ್ದ ನನ್ನ ಎಲ್ಲಾ ಕಾರ್ಯಗಳಲ್ಲಿ ನಾನು ಕಾಂಗ್ರೆಸ್ ಪಕ್ಷದವನಾಗಿದ್ದರೂ, ಅದನ್ನೊಪ್ಪಿ ಕಾಂಗ್ರೆಸ್ಸಿನವರು ಮುನ್ಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ನನ್ನನ್ನು ನಿಲ್ಲಿಸಿದ್ದರೂ ನ್ಯಾಯವಿಧಾಯಕ ಸಭೆಯನ್ನು ಬಹಿಷ್ಕರಿಸಿದ ಒಂದು ವಿಷಯದಲ್ಲಿ ನನಗೆ ಭಿನ್ನಾಭಿಪ್ರಾಯವಿದ್ದುದರಿಂದ ಅದಕ್ಕೆ ನಾನು ಸಮ್ಮತಿಸಲಿಲ್ಲ. ನಾನು ಹೇಗೆ ನ್ಯಾಯವಿಧಾಯಕ ಸಭೆಯನ್ನು ಪ್ರವೇಶಿಸಿದ್ದೇನೆಂಬ ಸಂಗತಿಯು ಇದರಿಂದ ವ್ಯಕ್ತವಾಗುತ್ತದೆ. ನಾನು ಸ್ವತಂತ್ರವಾಗಿ ನಿಂತು ಸಭೆಯನ್ನು ಹೊಕ್ಕರೂ ಕಾಂಗ್ರೆಸ್ಸಿಗಾಗಿ, ಈ ದೇಶಕ್ಕಾಗಿ ವಿವಿಧ ರೀತಿಯಲ್ಲಿ ಕಾದಾಡಿರುವೆನು. ಸತ್ಯಾಗ್ರಹಿಗಳ ಮೇಲೆ ಪೋಲೀಸರು ಅತ್ಯಾಚಾರ ನಡೆಸಿದಾಗ ಸತ್ಯಾಗ್ರಹಿಗಳು ಕಾರಾಗೃಹದಲ್ಲಿರುತಿದ್ದಾಗ ಅವರ ಸಾಕಲ್ಯಕ್ಕಾಗಿ ಹೆಚ್ಚು ಪ್ರಯತ್ನಪಟ್ಟಿರುವೆನು. ಪೋಲೀಸರು ಅತ್ಯಾಚಾರ ನಡಿಸಿದ್ದಾಗ ಅವರ ಮೇಲೆ ತನ್ಮಿ ನಡಿಸಿ ಅವನ್ನು ಶಿಕ್ಷಿಸುವಂತೆ ಮಾಡುವುದಕ್ಕೆ ನಾನೆ ಮುಖ್ಯ ಕಾರಣನು ಎಂಬುದು ಎಲ್ಲರಿಗೂ ತಿಳಿದದ್ದೆ. ಹೀಗೆ ನಿಸ್ವಾರ್ಥಬುದ್ಧಿಯಿಂದ ನಾನು ಮಾಡಿರುವ ಕೆಲಸವು ಪಕ್ಷಕಟ್ಟಿ ನಿಲ್ಲದ ಪ್ರತಿಯೊಬ್ಬನಿಗೂ ತಿಳಿದೇ ಇದೆ. ಆದರೆ ದೇಶದಲ್ಲಿ ಅಂತಹ ಕ್ಷೋಭೆಯುಂಟಾದ ಕಾಲದಲ್ಲಿ ಶ್ರೀ ಕಾರಂತರು ಈ ಹೊಗಳುಭಟ್ಟರೂ ಅವರ ಇತರ ಅನುಯಾಯಿಗಳೂ ಯಾವ ಮೂಲೆಯಲ್ಲಿದ್ದರು? ಅವರು ಕೊಂಗ್ರೆಸ್ಸಿನ ಕೋರ್ಟು ಬಹಿಷ್ಕಾರ, ಸತ್ಯಾಗ್ರಹ, ಕಾನೂನುಭಂಗ ಇತ್ಯಾದಿ ಧೋರಣೆಗಳನ್ನು ಆಚರಿಸುತಿದ್ದರೆ? ಈಗ ಮಾತ್ರ ಕೊಂಗ್ರೆಸ್ಸಿನವರು ಕೌನ್ಸಿಲ್ ಬಹಿಷ್ಕಾರವನ್ನು ಬಿಟ್ಟು ಕೌನ್ಸಿಲಿಗೆ ಜನರನ್ನು ಕಳುಹಿಸುವಾಗ ಮಾತ್ರ ತಾವೂ ನಿಜವಾದ ಕೊಂಗ್ರೆಸಿನವರು ಎಂದು ಹೇಳಿಕೊಳ್ಳುವವರು ಶಿವರಾಯರು ಮತ್ತು ಅವರ ಅನುಯಾಯಿಗಳಲ್ಲವೆ? ಶಿವರಾಯರು ಮತ್ತು ಅವರ ಅನುಯಾಯಿಗಳಲ್ಲವೇ ಸಿಂಹದಂತೆ ಕಾಣ್ಣಬೇಕಂತ ನರಿಯು ಸಿಂಹದ ಚರ್ಮವನ್ನು ಹೊದ್ದುಕೊಂಡಂತೆ ಎದಿರು ಬಂದಿರುವುದು?

೨. ತ್ರಿಯಂಬಕ ರಾಯಸೆಂಬ ಹೆಸರಿನಿಂದ ರಾಷ್ಟ್ರಬಂಧು ವಿನಲ್ಲಿ ಬರೆದವನು ನಾನೆ ಎಂಬ ಆರೋಪಣೆ ಕೇವಲ ಸುಳ್ಳು. ಅದರ ಯಾಪ್ತುದೊಂದು ಸಂಗತಿಗೂ ನಾನು ಹೊಣೆಯಲ್ಲ. ಆ ಸಮಯದಲ್ಲಿ ನಾನು ಉದಕಮಂಡಲದಲ್ಲಿರುತ್ತಿದ್ದೆನು.

೩. ಕಾಡಿನ ಸಂಕಷ್ಟಗಳನ್ನು ನಿವಾರಿಸುವುದಕ್ಕಾಗಿ ನಾನು ಏನೂ ಪ್ರಯತ್ನಿಸಿಲಿಲ್ಲವೆಂದು ನನ್ನ ಮೇಲೆ ಮೂರನೇ ಆರೋಪಣೆ. ಶ್ರೀ ಕಾರಂತರೇ ಈ ಕೆಲಸವನ್ನು ಮಾಡಿದವರೆಂದು ಹೇಳಿ ಈ ವಿಷಯವನ್ನು ಅವರು ಸಿದ್ಧಾಂತಪಡಿಸುತ್ತಾರೆ. ಸತ್ಯಕ್ಕೆ ಇದಕ್ಕಿಂತ ದೂರವಾದ ಸಂಗತಿಯು ಬೇರೊಂದಿರಲಿಕ್ಕಿಲ್ಲ. ಕಳೆದ ೬ ವರ್ಷಗಳಲ್ಲಿ ನಾನು ಸದಾಕಾಲವೂ ಕಾಡಿನ ಸಂಕಷ್ಟವನ್ನು ಕುರಿತು ಸರಕಾರಕ್ಕೆ ಒತ್ತಿ ಒತ್ತಿ ಹೇಳಿದ್ದೂ ಮಾತ್ರವಲ್ಲದೆ ಬಹುಮಟ್ಟಿಗೆ ಅದನ್ನು ನಿವಾರಿಸುವುದರಲ್ಲಿ ಜಯಪ್ರದನಾಗಿರುವೆನು. ಪ್ರತಿಯೊಂದು ಸಭೆಯಲ್ಲಿಯೂ ಈ ಸಂಕಷ್ಟಗಳ ವಿಷಯ ಒಂದೆರಡು ಪ್ರಶ್ನೆಗಳನ್ನು ಕೇಳಿಯೇ ಕೇಳಿರುವೆನು. ಕಾಡಿನ ಸಂಕಷ್ಟಗಳ್ಯಾವುವೆಂದರೆ (೧) ಕೋವಿಗಳ ಲೈಸನ್ಸನ್ನು ರದ್ದುಪಡಿಸಿದ್ದೂ (೨) ಕಾಡಿನ ರಿಯಾಯ್ತಿಗಳನ್ನು ಹಿಂತೆಗೆದದ್ದೂ. ಕಲೆಕ್ಟರರು ಕೋವಿಗಳ ಲೈಸನ್ಸನ್ನು ರದ್ದುಪಡಿಸಿದ್ದನ್ನು ಸರಕಾರದವರು ಖಂಡಿಸಿ ಪುನಃ ಲೈಸನ್ಸನ್ನು ಕೊಡುವ ಹಾಗೆ ತೀವ್ರವಾಗಿ ವಿರೋಧಿಸಿದವನು ನಾನೇ—ಈ ವಿಷಯ ಬೇರೆಯಾರಾದರೂ ಏನು ಮಾಡಿರುವರೆಂದು ಶಿವರಾಯರು ಹೇಳುವರೆ? ಶ್ರೀ ಶಿವರಾಯರು ನಾನು ಯಾವ ಕಾಡನ್ನೂ ಸಂದರ್ಶಿಸಿದವನಲ್ಲವೆಂದು ಹೇಳಿದರೂ ಕಾಡಿನ ರಿಯಾಯ್ತಿಯ ವಿಷಯದಲ್ಲಿ ಹೆಚ್ಚಿನ ತಿಳುವಳಿಕೆಗೋಸ್ಕರ ಕೊಡ್ಯಮಲೆ ಮೊದಲಾದ ಹಲವು ರಿಸರ್ವ ಕಾಡುಗಳಿಗೆ ಹೋಗಿ ಅಲ್ಲಿಯ ಹಳ್ಳಿಗರೊಡನೆ ಸಂಭಾಷಿಸಿರುವೆನು. ಆ ಕಷ್ಟವನ್ನು ನಿವಾರಿಸುವುದಕ್ಕಾಗಿ ಸರಕಾರವನ್ನು ಪ್ರಶ್ನಿಸಿ ಮಾನ್ಯ ಲಾ ಮೆಂಬರರು ೧೯೩೫ನೇ ಇಸವಿಯಲ್ಲಿ ಕಾಡಿನ ಪರಿಸ್ಥಿತಿಯು ಬಹಳ ಭಯಂಕರವಾಗಿದೆಯೆಂದು ಒಪ್ಪುವಂತೆ ಮಾಡಿರುವೆನು. ೧೯೩೫ರಲ್ಲಿ ಕಾಡಿನ ಸತ್ಯಾಗ್ರಹಿಗಳನ್ನು ಹೊಡೆದುದಕ್ಕಾಗಿ ನಾನು ಪ್ರಶ್ನಿಸಿದ್ದೆನು. ೧೯೩೫ನೇ ಇಸವಿಯಲ್ಲಿ ಕೋವಿ ಲೈಸನ್ಸುಗಳ ಕುರಿತು ೨ ಪ್ರಶ್ನೆಗಳನ್ನೂ ಅರಣ್ಯ ಸಂಕಷ್ಟಗಳ ಕುರಿತು ೯ ಸವಾಲುಗಳನ್ನೂ ೧೯೩೫ರಲ್ಲಿ ಇನ್ನೂ ಅನೇಕ ಸವಾಲುಗಳನ್ನೂ ಕೇಳಿದ್ದಲ್ಲದೆ ಒಂದು ಕಟ್ ಮೋಶನ್ (Cut Motion)ನನ್ನು ತಂದು ಸರಕಾರದ ಅರಣ್ಯದ ಕುರಿತ ವರ್ತನೆಗಳನ್ನು ಖಂಡಿಸಿರುವೆನು. ಇದಕ್ಕೆ ಮಾನ್ಯ ಲಾ ಮೆಂಬರರು ಕೊಟ್ಟ ಉತ್ತರವನ್ನು ನೋಡಿದರೆ, ನಾನು ೬ ವರ್ಷಗಳಲ್ಲಿ ಅರಣ್ಯಕ್ಕಾಗಿ ಮಾಡಿದ ಕೆಲಸ ಎಷ್ಟೆಂತ ವ್ಯಕ್ತವಾಗುವುದು. ಅವರು 'ದಕ್ಷಿಣ ಕನ್ನಡದ ಅರಣ್ಯರೋದನವು ವರ್ಷಕ್ಕೊಮ್ಮೆ ಬೆಳೆಯುವ ಪೈರಿನಂತಲ್ಲ. ಅದು ಪ್ರತಿ ದಿನವೂ ಬೆಳೆಯುವ ಸಸಿಯಂತೆ ನಾವು ಯಾವಾಗಲೂ ಕೌನ್ಸಿಲಿನಲ್ಲಿ ಕೇಳುತ್ತೇನೆ' ಎಂದು ನಾನು ಈ ವಿಷಯದಲ್ಲಿ ನಡಿಸಿರುವ ಕೆಲಸಗಳ ಕುರಿತು ಹೇಳಿರುವರು. ಸಭೆಯೊಳಗೆ ಇಷ್ಟೆಲ್ಲಾ ಮಾಡಿದ್ದಲ್ಲದೆ ಸ್ವತಃ ಮಾನ್ಯ ಲಾ ಮೆಂಬರರೊಡನೆಯೂ ಗವರ್ನರ ಸಾಹೇಬರೊಡನೆಯೂ ಮಾತಾಡಿ ೧೯೩೫ರಲ್ಲಿ ಈಗಿನ ಮಾನ್ಯ ಲಾ ಮೆಂಬರರು ನನ್ನ ಜಿಲ್ಲೆಯ ಜನರ ಸಂಕಷ್ಟಗಳನ್ನು ನೋಡುವುದಕ್ಕೋಸ್ಕರ ಸಂದರ್ಶಿಸುವಂತೆ ನಾನು ಮಾಡಿರುವೆನು. ಅವರೊಂದಿಗೆ ನಾನೂ ಸಂದರ್ಶಿಸಿ ಅರಣ್ಯ ಸಂಕಷ್ಟಗಳನ್ನು ತೋರಿಸಿಕೊಟ್ಟೆನು. ಅವರು ಜನರ ದುಃಖಗಳನ್ನು ಮನವಾರೆ ಕಂಡು ಹೆಚ್ಚಿನ ರಿಯಾಯ್ತಿಗಳನ್ನು ಹಿಂದೆ ಕೊಡಿಸಿರುತ್ತಾರೆ. ಇಷ್ಟೆಲ್ಲಾ ಕಾರ್ಯಗಳನ್ನು ಶ್ರೀ. ಶಿವರಾಯರು ಹೇಳುವಂತೆ ಕಾಡುಗಳನ್ನು ಸಂದರ್ಶಿಸದೆ ಅಥವಾ ಜನರ ಸಂಕಷ್ಟಗಳನ್ನು ತಿಳಿದುಕೊಳ್ಳದೆ ಅಥವಾ ಬಡವರಿಗಾಗಿ ಸಹಾನುಭೂತಿಯನ್ನು ತೋರಿಸದೆ ಮಾಡಿದ್ದೇ? ಅಲ್ಲವೆಂದು ಹೇಳುವವರು ಶ್ರೀ. ಶಿವರಾಯರೇ ಅಥವಾ ಕೃತಘ್ನರೇ?

ಹೀಗೆಯೇ ರಿಸರ್ವೆ ಮತ್ತು ರಿಸೆಟ್ಲುಮೆಂಟುಗಳಿಂದ ಜಿಲ್ಲೆಗಾದ ಕಷ್ಟಗಳನ್ನು ನಿವಾರಿಸುವುದಕ್ಕಾಗಿ ಮೇಲಿಂದ ಮೇಲೆ ಸರಕಾರವನ್ನು ಪ್ರಶ್ನಿಸಿದ್ದೆನು. ಆಗಾಗ್ಯೆ ಮಾನ್ಯ ಗವರ್ನರರನ್ನು, ಲಾ ಮೆಂಬರರನ್ನು ಮತ್ತು ಕಲೆಕ್ಟರರನ್ನು ಕಂಡು, ಅವರಿಗೆ ಜ್ಞಾಪಕ ಪತ್ರಗಳನ್ನು ಕಳುಹಿಸಿ 'ಈಗಿನ ಸೆಟ್ಲುಮೆಂಟಿನ ವ್ಯವಸ್ಥೆಯು ಕೇವಲ ಅನ್ಯಾಯ; ಇದರಿಂದ ದೇಶವ ಜನರಿಗೆ ಹೆಚ್ಚಾದ ಹಾವಳಿಯಿದೆ.' ಎಂದು ತೋರಿಸಿಕೊಟ್ಟಿರುವೆನು. ನೆಲ ತೆರಿಗೆಯನ್ನು ವೃತ್ತಿ ತೆರಿಗೆ ನಿಯಮಿಸುವ ಕ್ರಮಕ್ಕೆ ಬದಲಾಯಿಸದಿದ್ದರೆ ದೇಶಕ್ಕೆ ಕ್ಷೇಮವಿರದು ಮತ್ತು ಅದಕ್ಕೆ ಒಂದು ಆಕ್ಟ್ ಅಥವಾ ಕಾನೂನನ್ನೆ ಮಾಡಬೇಕು; ಹಾಗೆ ಮಾಡಿದರೆ ನ್ಯಾಯಸ್ಥಾನದಲ್ಲಿ ಪ್ರಶ್ನಿಸಬಹುದು. ಅದಕ್ಕಾಗಿಯೇ ನಾನು ಹೊಸ ಬೀಲೊಂ (Bill)ದನ್ನು ಸಿದ್ಧಪಡಿಸುತಿದ್ದೇನೆ. ದೇವರು ಅನುಗ್ರಹಿಸಿದರೆ ಮತದಾರರು ನನ್ನನ್ನಾರಿಸಿದರೆ ನಾನು ಅದನ್ನು ಮುಂದಿನ ಸಭೆಯಲ್ಲಿಡುತ್ತೇನೆ. ಕಾಸರಗೋಡು ತಾಲೂಕಿನಲ್ಲಿ ವಸೂಲು ಮಾಡತಕ್ಕ ರಿಸರ್ವೆ ಹಣಗಳನ್ನು ಎರಡು ಕಂತುಗಳಲ್ಲಿ ವಸೂಲು ಮಾಡುವಂತೆಯೂ ಮಿಕ್ಕ ೪ ತಾಲೂಕುಗಳ ರಿಸರ್ವೆಯನ್ನು ಬಿಟ್ಟು ಬಿಡುವಂತೆಯೂ ಆ ಬಗ್ಗೆ ಚಳವಳನನ್ನೆಬ್ಬಿಸಿ ಸರಕಾರವನ್ನು ಖಂಡಿಸುವರೆ ಮುಖ್ಯವಾಗಿ ಪ್ರಯತ್ನಿಸಿದವನು ನಾನೇ ಎಂಬುದು ನಾನು ಸರಕಾರಕ್ಕೆ ಕೇಳಿದ ಸವಾಲುಗಳಿಂದಲೂ, ಸರಕಾರ್ಯಕ್ಕೂ ನನಗೂ ನಡೆದ ಪತ್ರವ್ಯವಹಾರದಿಂದಲೂ ಆಗಿನ ರೆವಿನ್ಯೂ ಸೆಕ್ರೆಟರಿಗಳವರಾಗಿದ್ದ ಶ್ರೀ. ಎಚ್. ಆರ್. ಪೇಟ್ I.C.S. ರವರು ನನಗೆ ತಾ. ೩—೪—'೩೧ರಲ್ಲಿ ಬರೆದ ಕಾಗದದಿಂದಲೂ ಮತ್ತು ಈ ಕಾಗದ ಪ್ರಕಾರ ನಾನು ಕಲೆಕ್ಟರರನ್ನು ಸಂದರ್ಶಿಸಿ ಅವರನ್ನು ಸಮಾಧಾನ ಮಾಡಿ ರಿಸರ್ವೆಯನ್ನು ಬಿಟ್ಟು ಬಿಡುವರೆ ನಿಶ್ಚೈಸುವಂತೆ ಮಾಡಿದ ಕಾರ್ಯಗಳಿಂದಲೂ ವ್ಯ

ನಾನು ಮೊದಲೇ ಹೇಳಲಿಲ್ಲವೇ?

ಮೈದಾನಿನಲ್ಲಿ ಕಾಲ್ಚೆಂಡಾಟ (football match). ನಾಲ್ಕೈದು ಸಾವಿರ ನೋಟಕರು. ಅವರಲ್ಲೊಬ್ಬ ಕೊನೆಗೆ ಬಂದವ ಹೊರಸುತ್ತಿನಲ್ಲಿದ್ದು ನೋಡುತಿದ್ದ. ಒಂದು ಗುರಿ (goal) ಬಿತ್ತು. 'ಹಾಗೇ ಆಗಬೇಕು ನಾನು ಹೇಳಿದ್ದೇಕೆ ಕೇಳಲಿಲ್ಲ?' ಎಂದು ಆ ಮನುಷ್ಯನ ಟೀಕೆ. ಹೇಳಿದುದು ಎಂದೋ, ಹೇಳಿದ್ದರೆ ಆಡುವವರಿಗೆ ಹೇಗೆ ಕೇಳೀತೊ?

ಹೀಗೆಯೇ ಈಗಿನ ಪ್ರಪಂಚವೆಲ್ಲ. ತನ್ನ ಮಾತನ್ನು ಕೇಳಿದ್ದರೆ ಲೋಕದಲ್ಲಿ ಯಾರೂ ಜಾರಿ ಬೀಳರೆಂಬ ಅಭಿಪ್ರಾಯ ಬಹುಶಃ ಪ್ರತಿಯೊಬ್ಬನದು. ಅಂದರೆ, ತಾನೊಬ್ಬನೇ ಬುದ್ಧಿವಂತನೆಂದಾಯ್ತು. ನನಗೆ ಅಷ್ಟೇ ಬೇಕಾದುದು. ಬುದ್ಧಿ ಒಲವುಂಟೇವುಂಟು, ಅನುಭವ ಅಗತ್ಯವೇ ಇಲ್ಲ. ನಾಲ್ಕಕ್ಷರ ಕಲಿತ ಹುಡುಗರಿಗೂ ತಂದೆತಾಯಿಗಳ, ವಯೋವೃದ್ಧರ, ಅನುಭವದ ಮೇಲೆ ಅತೃಪ್ತಿ. ಹಳೆಯ ಪುರಾಣ, ಈಗ ನಡೆಯದು, ಎಂದು. ಹುಟ್ಟುವಾಗಲೆ ಜ್ಞಾನಿಗಳು, ವೇದವ್ಯಾಸ ನಂತೆ. ಇದೆಲ್ಲ ಸಭೆಯಲ್ಲಿ ಹೇಳಿಕೊಡುವರು, ಅಥವಾ ಸಾಲೆಯಲ್ಲಿ ಈಗ ಹೇಳಿಕೊಡುವುದು ಇಷ್ಟೆ, ಎಂದು ನಾವು ನಂಬಲಾರೆವು.

ಎಫ್. ಎಲ್. ಪರೀಕ್ಷೆಗೆ ಹೋಗಿ ರೋಮನ್ ಲೋ ಎಂಬುದರಲ್ಲಿ ಸೋತುಹೋದನೊಬ್ಬ ವಕೀಲರ ಮಗ. 'ನಾನು ಮೊದಲೇ ಹೇಳಲಿಲ್ಲವೇ? ಸರ್ವ ಕಾನೂನಿನ ಉದ್ಭವದು ರೋಮನ್ ಲೋ ಎಂದರೆ, ಅದನ್ನು ಚೆನ್ನಾಗಿ ಕಲಿಯಬೇಕೆಂದು?'–ವಕೀಲನ ಗುಮಾಸ್ತನ ಹೇಳಿಕೆ. ಯಾವಾಗ ಹೇಳಿದ್ದೋ, ಕನಸಿನಲ್ಲಿಯೋ, ಶಿವನೇ ಬಲ್ಲ; ಹೇಳುವ ಅನುಭವವೆಲ್ಲಿ? ಇಂಗ್ಲೀಷು ಮಾಮಿಯಾಸು.

ಮನೆ ಕಟ್ಟುತ್ತಿರಲಿ, ಬಾವಿ ತೋಡುತ್ತಿರಲಿ—ಈ ಕೆಲಸಗಳಲ್ಲಿ ಯಾವುದೊಂದು ತೊಂದರೆ ಬರಲಿ. ಬಂದ ನನ್ನು ಜಾಣ. 'ನಾನು ಮೊದಲೇ ಹೇಳಿಲ್ಲವೆ ಆ ಜಾಗದಲ್ಲಿ ಬಾವಿ ತೋಡಿಸ ಬಾರದೆಂದು?' ಅಥವಾ 'ಮನೆ ಆ ರೀತಿಯಲ್ಲಿ ಕಟ್ಟಿಸಬಾರದೆಂದು?' ಎನ್ನುವ. ಆ ತೊಂದರೆಯೊಳಗೆ, ನಷ್ಟದೊಳಗೆ, ಇವನದೊಂದು ಉಪದ್ರವ. ಕೆಲಸ ನಡಿಸುವಾಗ ಅತನನ್ನು ನೋಡಿದವರಿಲ್ಲ. ಎಲ್ಲಿ ಯಾರೊಡನೆ ಹೇಳಿದನೋ? ಅವನ ಯೋಗ್ಯತೆ ಎಷ್ಟೊ? ಕಟ್ಟಿಸಿದವರು ಎಂಜಿನಿಯರು.

ವೈದ್ಯರು ರೋಗವನ್ನು ಪರಿಶೋಧಿಸಿ ಔಷಧಿ ಕೊಟ್ಟರು, ಅಥವಾ ಶಸ್ತ್ರಚಿಕಿತ್ಸೆ ಮಾಡಿದರು. ನಿರೀಕ್ಷಿಸಿದ ನಿವೃತ್ತಿ ಸಿಗಲಿಲ್ಲ. ಬಂದ ನನ್ನ ಮಹಾನುಭಾವ, ವೈದ್ಯವೇನೆಂದು ಅರಿಯದವ—'ನಾನು ಮೊದಲೇ ಹೇಳಿದ್ದೇನೆ, ರೋಗ ಹಿಡಿಯದಲ್ಲ, ಆ ಚಿಕಿತ್ಸೆ ಆಗದು, ಎಂದು.'

ಕೋರ್ಟಿನಲ್ಲಿ 'ನಂಬ್ರ' ನಡೆಯುತ್ತದೆ, ಸಿವಿಲ್ ದಾವೆಯೋ ಕ್ರಿಮಿನಲ್ ಮೊಕದ್ದಮೆಯೋ. ದೊಡ್ಡ ಬೆರಿಸ್ಟರರನ್ನು ಕರತಂದಿದ್ದಾರೆ. ಅವರಿಗೆ ಅವಗುಣವಾಗಿ ತೀರ್ಪು. ನಾಡ ವಕೀಲ್ ತ್ಯಾಂಪಣ್ಣನಿಗೆ ಸ್ವಲ್ಪ ಹೇಳಲಿಕ್ಕುಂಟು—'ನಾನು ಮೊದಲೇ ಹೇಳಿಲ್ಲವೇ ಈ ರೀತಿಯಾಗಿ ಹೋಗಬೇಕೆಂದು? ನನ್ಮಂತವರ ಮಾತು ಕೇಳುವವರು ಯಾರು?'

Whate'er you might do or say,
Or else forbear, the critic gay,
To indolence a willing prey,
Declares that that is not the way.
Heed not the carping chattering jay,
At God's feet all your actions lay.

ತಾವೊಂದು ಮಾಡಿದವರಲ್ಲ ಹೇಳಿದವರಲ್ಲ, ಬೇರೆಯವರು ಮಾಡಿದುದರಲ್ಲಿ ಮಾಡದಿದ್ದುದರಲ್ಲಿ ಹೇಳಿದುದರಲ್ಲಿ ಹೇಳದಿದ್ದುದರಲ್ಲಿ ತುಂಬ ದೋಷಗಳನ್ನು ಕಂಡುಹಿಡಿಯ ಬಲ್ಲವರು ಅನೇಕರಿರುವರು. ಈ 'ವಿಮರ್ಶೆಗೆ 'ನಾನು ಮೊದಲೇ ಹೇಳಲಿಲ್ಲವೇ' ಎಂದು ಕೂಡಿಸದಿದ್ದರೆ ಅಷ್ಟೊಂದು ಉಪಕಾರ. ಇಲ್ಲದ ಸಿಟ್ಟು ಬರುವುದು, ಪರಮಯೋಗಿಗಾದರೂ. ಸಮಾಧಾನದ ರಕ್ಷಣೆ ಬೇಕೇ? ಬರೇ ತತ್ವಜ್ಞಾನ ಸಾಕೇ? ಏನು ಸುಮ್ಮನಿದ್ದೀರಿ?

ಇದನ್ನು ನಿಲ್ಲಿಸಿಬಿಡುವ ಬಗೆಯೇನು? ಸರಕಾರದ ಸಹಾಯ ಬೇಕು. ಹಾಗೆ ಹೇಳಿದವರಿಗೆ ಪ್ರಥಮತಃ ಮೇಜಿ ಸ್ಟೇಟರ ಮುಂದೆ ಏನೂರು ರೂಪಾಯಿಗಳಿಗೆ ವಿಚಾರದಷ್ಟು ದಂಡ, ಅಥವಾ ಆರು ತಿಂಗಳುಗಳಿಗೆ ವಿಚಾರದಷ್ಟು ಸಜೆ, ಅಥವಾ ಎರಡೂ; ಆ ಮೇಲೆ ಎರಡನೆಯ ಅಥವಾ ಆ ಮೇಲಿನ ತಪ್ಪಿ ತಕ್ಕೆ ಏಳು ವರ್ಷಕ್ಕೆ ಕಡಮೆಯಾಗದ ಸಜೆ; ಹೀಗೆ ವಿಧಿಸಿದರೆ ಲೋಕದಲ್ಲಿಯ ಮುಕ್ಕಾಲೂ ಮೂರು ವೀಸ ಪಾಲು ಜನರು ಕಾರಾಗೃಹವಾಸಿಗಳಾಗಿ ಬರಬಹುದು. ಆದುದರಿಂದ ಅಷ್ಟು ಬೇಡ. ಹಾಗೆ ಹೇಳುವವನಿಗೆ ಹೇಳಿದ ಒಂದು ತಾಸಿನೊಳಗಾಗಿ ಮೂರಕ್ಕೆ ವಿಚಾರದಂತೆ ಬರಿಗೈಯಿಂದ ಎಡ ಕೆನ್ನೆಗೆ ಅಥವಾ ದವಡೆಗೆ ಕೊಟ್ಟವರ ಮೇಲೆ ಅದಕ್ಕಾಗಿ ಕೋರ್ಟಿನಲ್ಲಿ ದಾವೆಯೊ ಮೊಕದ್ದಮೆಯೊ ಹಿಡಿಯದೆಂದಾದರೆ ಸಾಕು. ಸರ್ವಾಧಿಕಾರವುಳ್ಳ ಸರಕಾರಕ್ಕೆ ಇದೊಂದು ದೊಡ್ಡ ಮಾತಲ್ಲ. ನನ್ಮಷ್ಟು ಎಮ್ಮೆನುಸಿಗಳಲ್ಲಾರಾದರೂ ಈ ಕಾರ್ಯವನ್ನು ಕೈಕೊಂಡು ಲೋಕಹಿತವನ್ನೂ ಸಮಾಧಾನರಕ್ಷಣೆಯನ್ನೂ ಮಾಡಬಾರದೇಕೆ? 'ಏಕೆ?' ಎಂದು ಪ್ರತಿಧ್ವನಿ ಹುಟ್ಟುತ್ತದೆ. (Echo answers, why?)

N. G.

ಹೊಲಿಗೆ ಕೆಲಸ ಮಾಡುವವರಿಗೂ ಹೊಸದಾಗಿ ಕಲಿಯುವವರಿಗೂ ಸುವರ್ಣಲಾಭ!

ಸಚಿತ್ರ ಕರ್ತನ ಕಲಾ ವಿಜ್ಞಾನ

ಭಾಗ ೧. (ದೊಡ್ಡ ಟೈಪು) (ಮರಾಠಿ) (ಸಂಣ ಟೈಪು)

ನ್ನು ಪ್ರಸಿದ್ಧಿಸಿದ್ದೇವೆ. ಮೊದಲನೇ ಭಾಗದಲ್ಲಿ

೬ ತರದ ವೈರಣ, ೧೯ ತರದ ಶರ್ಟ
೨ ತರದ ಶೇಪರೇಟ ಕೋಲರ ೨ ತರದ ಬನಿಯನ
೪ ತರದ ಇಜಾರು

ಮತ್ತು ೫೬ ಫೆಷನ್ ಫೊಟೊಗಳ ಸಹಿತ ಪ್ರತಿ ಒಂದರ ಅಳತೆ, ಕತ್ತರಿಸುವ ನಮೂನೆ, ಮಾಪ ತೆಗೆದುಕೊಳ್ಳುವ ನಮೂನೆಯ ಶಾಸ್ತ್ರೋಕ್ತ ಪದ್ಧತಿಯನ್ನು ಸುಲಭ ರೀತಿಯಿಂದ ವಿವರಿಸಿರುತ್ತದೆ. ಯಾರಿಗೂ ಸಹಜವಾಗಿ ಕತ್ತರಿಸುವ (ಕಟಿಂಗ) ಕಲೆಯನ್ನು ಕಲಿಯಲು ಅತ್ಯಂತ ಸುಲಭವಾಗಿರುತ್ತದೆ. ಈ ಪುಸ್ತಕವು ಪ್ರಮುಖ ಹೊಲಿಗೆಯ ಕ್ಲಾಸುಗಳಲ್ಲಿ ಕಲಿಸುವ ಬಗ್ಗೆ ಪಾಸಾಗಿರುತ್ತದೆ. ವಸ್ತ್ರದ ಬ್ಯಾಂಡಿಂಗ ಸಮೇತ ಜೆಲೆ ರೂಪ್ಯಾ ೩–೮–೦. ವ್ಹಿ. ಪಿ. ಪೋಸ್ಟೇಜ ಪ್ರತ್ಯೇಕ.

ಸೂಚನೆ:–ಇದೇ ಪುಸ್ತಕವನ್ನು ಕನ್ನಡದಲ್ಲಿಯೂ ತೆಗೆಯಬೇಕೆಂತ ಮಾಡಿದ್ದೇವೆ. ಇಂಥ ಪುಸ್ತಕಗಳು ಕನ್ನಡದಲ್ಲಿ ಇದೇ ಮೊದಲನೆದಾದ್ರಿಂದ ಬೇಕಷ್ಟೇ ಪ್ರತಿಗಳನ್ನು ತೆಗೆಯುವವರಿದ್ದೇವೆ. ಕಟಿಂಗದ ಶಾಸ್ತ್ರೋಕ್ತ ಜ್ಞಾನವನ್ನು ಮಾಡಿಕೊಳ್ಳಲಿಚ್ಛಿಸುವವರು ಇದೇ ಜೂನ್ ತಿಂಗಳ ಆಪ್ಟರ ಅಡಿಯಾಗಿ ರೂಪ್ಯಾ ೩–೮–೦ನ್ನು ಮನಿಯಾರ್ಡರ ಮಾಡಿ ಕೆಳಿಸಿಕೊಟ್ಟು ಹೆಸರು ರಾಖಲುಪಡಿಸಿಡವರಿಗೆ ಟಪಾಲು ಖರ್ಚು ಮಾಫಿಯಿಂದ ಜುಲ್ಯಾ ತಿಂಗಳಲ್ಲಿ ಪುಸ್ತಕವನ್ನು ಕಳಿಸಿಕೊಡುತ್ತೇವೆ.

ನಾವು ಟೇಲರ್‌ಸರಿಗೆ ಬೇಕಾಗುವ ಫೇಶನ್ ಬೂಕ್ಸ, ಫೇಶನ್ ಪ್ಲೇಟ್ಸಗಳು, ದರ್ಜಾಜಿಯ ಮೇಲೆ ಹಚ್ಚುವ ದೊಡ್ಡ ರಂಗಿತ ಫೋಟೊಗಳನ್ನು ಮತ್ತ ಇತರ ಅವಶ್ಯಕ ಸಾಮಾನುಗಳನ್ನು ಯೋಗ್ಯ ದರದಿಂದ ಕಳಿಸಿಕೊಡುತ್ತೇವೆ. ಮುಂದಿನ ಎರಡು ಭಾಗಗಳನ್ನು ಆದಷ್ಟು ಬೇಗನೆ ಪ್ರಸಿದ್ಧಿಸುವವರಿದ್ದೇವೆ. ಹೆಚ್ಚಿನ ಮಾಹಿತಿ ಪತ್ರದ್ವಾರಾ.

ಪತ್ತೆ: Royal Art Publishers,
Amir Building,
Tribhuvan Road, BOMBAY 4.

ಶ್ರೀ ದುರ್ಗಾಪರಮೇಶ್ವರೀ ಮೋಟರ್ ಸರ್ವೀಸ್,
ಮಂಗಳೂರು

ಸ್ಥಾಪಿತವಾದುದು 1927ರಲ್ಲಿ!

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತಿನಿತ್ಯವೂ ಮಂಗಳೂರಿಂದ ಮರವೂರು, ಬಜಪೆ, ಕಟೀಲ್, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಬಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ; ಮರವೂರು, ಬಜಪೆ, ಕಟೀಲ್ ಮತ್ತು ಮುಂಡ್ಕೂರಿಗಾಗಿ ಬೆಳ್ಮಣ್ಣಿಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಬಂಟ್ವಾಳಕ್ಕೂ; ಮೂಲ್ಕಿಯಿಂದ ಪದುಬಿದ್ರೆ, ಬೆಳ್ಮಣ್ಣು, ಕಾರ್ಕಳಕ್ಕೂ; ಕಾರ್ಕಳದಿಂದ ಬೆಳ್ಮಣ್ಣು, ಮಂಚಿ ಕಲ್ಲು ಮಾರ್ಗವಾಗಿ ಉಡುಪಿಗೂ ಚಲಾವಣೆಯಾಗುವುವು.

ನಮ್ಮ ಹೊಸ ಲೈನುಗಳು.

ಮೂಲ್ಕಿ–ಕಿನ್ನಿಗೋಳಿ–ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ನೀದಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತೂ ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ—ತೀರ್ಥಹಳ್ಳಿ—ಕೊಪ್ಪ—ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ತುಂಬ ಅನುಕೂಲ.

ವಿ. ಸೂ.—ಮಂಗಳೂರು, ಮೂಲ್ಕಿ, ಮಂಚಕಲ್, ಉಡ್ಪಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಗಿನ ಮತ್ತೂ ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯಧ್ಯೇಯ!
ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

ಶುದ್ಧರಕ್ತವು ಸಂಪೂರ್ಣ ಆರೋಗ್ಯವನ್ನೂ ದೇಹವ್ಯಾಪಾರವು ಯೋಗ್ಯವಾಗಿದೆ ಎಂಬುದನ್ನೂ ದೃಢಪಡಿಸುತ್ತದೆ.

NIMBIN

ಕಬ್ಬಿಣ, ಟಾನಿಕ್ಕುಗಳು ಮತ್ತೂ ಜೀರ್ಣಕಾರಿ ಪದಾರ್ಥಗಳೊಡನೆ ಕೂಡಿರುವ ಬೇವಿನ ಅವಿತೀಯವಾದ ಸಿದ್ಧೌಷಧ. ನಿಂಬಿನ್ ರೋಗದ ಮೂಲದ ವರೆಗೂ ಹೋಗಿ, ನಿಮ್ಮನ್ನು ಸಶಕ್ತರನ್ನಾಗಿಯೂ, ಉತ್ಸಾಹಿಗಳನ್ನಾಗಿಯೂ ಇರಿಸುತ್ತದೆ. ನಿಂಬಿನ್ ಎಲ್ಲ ಅಶುದ್ಧತೆಗಳನ್ನೂ ನಿರ್ಮೂಲಿಸಿ, ದೇಹವ್ಯಾಪಾರವು ಕ್ರಮವಾಗಿಯೂ, ಸಮತೂಕವಾಗಿಯೂ ಇರುವಂತೆ ಮಾಡುತ್ತದೆ.

ದೀರ್ಘಜೀವನಕ್ಕೆ, ಯಾವ ರೋಗವು ಇಲ್ಲದ ಶರೀರ ಸ್ಥಿತಿಗೆ, ಸಂಪೂರ್ಣ ಆರೋಗ್ಯಕ್ಕೆ, ದೇಹವ್ಯಾಪಾರದ ಯೋಗ್ಯ ಕೆಲಸಕಾರ್ಯಗಳಿಗೆ ಬೇವಿಗೆ ಸರಿಯಾದುದು ಇನ್ನೊಂದಿಲ್ಲ.

ರಕ್ತದ ಕೊರತೆ.

ರಕ್ತದ ಅಶುದ್ಧತೆ ಮತ್ತೂ ಶರೀರದ ಸಾಮಾನ್ಯ ನಿತ್ರಾಣ, ಎಲ್ಲಾ ಸಂದರ್ಭಗಳಲ್ಲಿಯೂ, ಡಾಕ್ಟರರು ವಿವೇಕ ಬುದ್ಧಿಯಿಂದ ಶಿಫಾರಸು ಮಾಡುವುದು ಇದನ್ನೇ. ಬೆಲೆ ಬಾಟಲಿ 1ಕ್ಕೆ ರೂ. 1—10—0.
ಪ್ಯಾಕಿಂಗ್ ಮತ್ತು ಪೋಸ್ಟೇಜ್ ಪ್ರತ್ಯೇಕ.

SOLE DISTRIBUTORS:
VARIETY TRADING CORPORATION, 257, Chickpet, Bangalore City.
Stockists: APPAH & CO., China Bazaar Road, Madras.

QUALITY IS THE BEST SELLING STORY!
THAT IS WHY
"RAJA CYCLE"
IS THE BEST SELLING BICYCLE.

The Specification includes the best of everything in materials, construction and finish.

STOCKISTS:-
MESSRS.
The City Cycle Co.,
Mangalore.

You know for certain:-

THAT AN ATTRACTIVE PHOTO WILL ALWAYS BE APPRECIATED BY EVERY PERSON.

You know also that a charming photo if taken at a moderate rate will be a bargain.

You know that nowadays any business should run so as to suit every man's pocket.

YOU KNOW THAT

Messrs. "ISHWAR PHOTO STUDIO"
GANAPATHY TEMPLE STREET,
have reduced their rates to suit you.

So we request you to kindly try us once before you place Your orders elsewhere.

THANKS!

ಮಂಗಳೂರು ಪೇಟೆಯ ಚಾಲತಿ ಧಾರಣೆ.

ರಾಶಿ	...	3— 8	3—12
ಮುಸ್ಕತಿ ಅಕ್ಕಿ ಮುಡಿ ೧ಕ್ಕೆ	...	3—14	4— 8
ಗುಮ್ಮು	...	3—10	3—14
ಅಷ್ಟಲ್ ಭಿಳ್ತಿಗೆ ,, ೧,,	...	4— 4	4—12
ಗುಮ್ಮು ಬೆಳ್ತಿಗೆ ,, ,,	...	3—10	3—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	6— 0	7— 0
ಗೋಣಿ ಗೋಣಿ ೧ಕ್ಕೆ	...	8— 8	10— 4
ಹುರುಳಿ ,, ,,	...	5—10	6— 0
ಕಡಲೆ ,, ,,	...	7—10	9— 0
ತೊಗರಿ ,, ,,	...	9— 0	9— 8
ತೊಗರಿಬೇಳೆ ಗೋಣಿ ೧ಕ್ಕೆ	...	11— 0	19— 0
ಉದ್ದು ಮುಡಿ ೧ಕ್ಕೆ	...	4— 6	—
ಹೆಸರು ,, ,,	...	4— 4	—
ರಾಗಿ ಗೋಣಿ ೧ಕ್ಕೆ	...	5— 0	6 - 4
ಊರು ಬೆಲ್ಲ ಖಂಡಿ ೧ಕ್ಕೆ	...	30— 0	35 - 0
ಉಪ್ಪು ಗೋಣಿ ,,	...	4— 8	4 - 12
ಹೊಬ್ರಿ ಖಂಡಿ ,,	...	60—	70 — 0
ಹೊಬ್ರಿ ಹಿಂಡಿ ಖಂಡಿ ೧ಕ್ಕೆ	...	26— 0	26 - 8
ಎಳ್ಳಿಂಡಿ ಖಂಡಿ ೧ಕ್ಕೆ	...	26— 4	28 - 12
ಹೊಬ್ರಿ ಎಣ್ಣೆ ಮಣ ೧ಕ್ಕೆ	...	4—12	5 - 12
ಎಳ್ಳೆಣ್ಣೆ ಡಬ್ಬಿಗೆ	...	—	6 — 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	—	6— 5
ವೋರಿಸ್ ಸಕ್ಕರೆ ಮಣ ೧ಕ್ಕೆ	...	3— 9	—
ಮಿಣಾಸಿಸ ಕಾಯಿ ಮಣ ೧ಕ್ಕೆ	...	2— 8	3— 2
ಸಾಸಿವೆ ಮುಡಿ ೧ಕ್ಕೆ	...	5— 4	6— 0
ಕೊತ್ತಂಬರಿ ಮುಡಿ ೧ಕ್ಕೆ	...	2— 8	3— 0
ನೇಟಿವ ಕಾಫಿ ಖಂಡಿ ೧ಕ್ಕೆ	...	145— 0	150— 0
ಪೇಟಿವ ಪೀಬರಿ ಕಾಫಿ ಖಂಡಿ ೧ಕ್ಕೆ	...	165— 0	175— 0
ಮೂನ್‌ಸೂನ್ ಏ ಏ ಕಾಫಿ ಖಂಡಿ ೧ಕ್ಕೆ...		170— 0	175— 0
ಬಿಳಿ ಗೋಟು ಅಡಿಕೆ ಖಂಡಿ ೧ಕ್ಕೆ (ಹಳ್ಳು)		100— 0	115— 0
ಕಾಳುಮೆಣಸು ಖಂಡಿ ೧ಕ್ಕೆ	...	95— 0	102— 8
ಯಾಲಕ್ಕಿ ಮಣ ೧ಕ್ಕೆ ಕೊಡಗು	...	40— 0	45— 0
,, ,, ,, ಸಕಲೇಶಪುರ	...	30— 0	35 — 0
,, ,, ,, ಬೀಜ	...	40— 0	50 — 0
ಗೇರುಬೀಜ ಮುಡಿ ೧ಕ್ಕೆ	...	3— 8	4— 4
ಬತ್ತ ಮುಡಿ ೧ಕ್ಕೆ	...	1— 8	1—10
ಎಳ್ಳು ಮುಡಿ ೧ಕ್ಕೆ	...	5— 2	5— 4
ತುಪ್ಪ ಮಣ ೧ಕ್ಕೆ	...	17— 0	18— 0
ಕೆಬ್ಬಣ ಖಂಡಿ ೧ಕ್ಕೆ	...	35— 0	37— 8
ತಾಂಬ್ರ ತಗಡು ಮಣ ೧ಕ್ಕೆ	...	9—12	9—14
ಪವಸು ೧ಕ್ಕೆ	...	22— 8	—
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	12— 8	14— 0
ಚೀನಿ ಬೆಳ್ಳಿ ಸೇರು ೧ಕ್ಕೆ	...	17— 8	18— 0
ಹಿತ್ತಾಳೆ ತಗಡು ಮಣ ೧ಕ್ಕೆ	...	10— 0	10— 0
ಹೊಸತ್ತು ಬಿಳಿಗೋಟು ಖಂಡಿ ೧ಕ್ಕೆ	...	75— 0	85— 0
ಮುಂಗಳೂರು ಹಂಚು I ಕ್ಲಾಸ್—1000ಕ್ಕೆ ರೂ. 26ರಿಂದ 30			
,, ದಂಬೆಗಳು ,, ,, ರೂ. 70ರಿಂದ 80			
ನೆಲಕ್ಕೆ ಹಾಸುವ ಇಟ್ಟಿಗೆಗಳು ,, ,, ರೂ. 35ರಿಂದ 40			

ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ	ಘಂಟೆ	ತಲಪುವ	ಘಂಟೆ
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-20
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸಂಜರ್	ಮಧ್ಯಾಹ್ನ	3-20	ಸಂಜೆ	6-15
ಶೆಟಲ್	ಸಂಜೆ	5-25	ಬೆಳಿಗ್ಗೆ	9-20

WANTED

In the South Kanara District young and ambitious men on very liberal terms, to represent the BHARAT INSURANCE COMPANY, LTD., LAHORE. An excellent opportunity to earn a decent living.

Apply to:—

DUTT & CO., *Chief Agents*, KARWAR.

ಲಕ್ಷ್ಮೀ ಕವಚ.

ಬಡತನದಿಂದ ಕಷ್ಟಪಡುತ್ತಿರುವವರು ಈ ರಕ್ಷಾಯಂತ್ರವನ್ನು ಧರಿಸತಕ್ಕದ್ದು. ಇದನ್ನು ಧರಿಸುವುದರಿಂದ, ದುಡ್ಡುಕಾಸಿನ ತಾಪತ್ರಯಗಳು ದೂರವಾಗುವುವು; ಮತ್ತು ದಿನದಿನಕ್ಕೂ ವೃದ್ಧಿಗತಿಯು ಸಂಭವಿಸುವುದು. ಅಲ್ಲದೆ, ಸಾಲದ ಮೂಲವಾದ ತೊಂದರೆಗಳ ಪರಿಹಾರವೂ, ಸಂಸಾರದಲ್ಲಿ ಐಕ್ಯವೂ, ವ್ಯಯತ್ನಿಸಿದ ಕಾರ್ಯಗಳಲ್ಲಿ ಜಯವೂ, ಶತ್ರುಗಳೊಡನೆ ರಾಜಿಯೂ, ಕೈಕೊಂಡ ಎಲ್ಲಾ ಕೆಲಸಗಳಲ್ಲಿಯೂ ಜಯವೂ, ಅಧಿಕಾರಿಗಳ ಅನುಗ್ರಹವೂ ಇನ್ನೂ ಅನೇಕ ಉಪಕಾರಗಳನ್ನೆಸಗುವ ಉಪಯೋಗಕರಗಳಾದ ಫಲಿತಾಂಶಗಳೂ ಸಿದ್ಧಿಸುವುವು. ವರ್ತಕವರ್ಗವೂ, ಕಸುಬುದಾರರೂ, ಇಬ್ಬರೂ ಈ ರಕ್ಷಾಯಂತ್ರವನ್ನು ಧರಿಸುವುದರಿಂದ, ತಮ್ಮ ತಮ್ಮ ವೃತ್ತಿಗಳಲ್ಲಿ ಅತಿಶಯವಾದ ಅಭಿವೃದ್ಧಿಯನ್ನು ಪಡೆಯುವರು. ಈ ರಕ್ಷಾಯಂತ್ರಗಳನ್ನು ಧರಿಸುವವರು, ತಮ್ಮ ಕಾಗದದಲ್ಲಿ, ಸ್ಪಷ್ಟವಾಗಿ, ತಮ್ಮ ಸಂಪೂರ್ಣವಾದ ಹೆಸರುಗಳನ್ನೂ, ಅಂದಾಜಿನ ಪ್ರಾಯವನ್ನೂ ನಮೂದಿಸತಕ್ಕದ್ದು.

ಚಾರ್ಜಿನ ವಿವರ.

ಲಕ್ಷ್ಮೀ ಕವಚ	ರೂ. 5—0—0
ವಿ. ಪಿ. ಪಾರ್ಸೆಲು	ರೂ. 0—5—0

ಹನುಮಂತ ಉಪಾಸಿ ವಿ. ಕೆ. ಸತಗೋಪಾಚಾರಿಯರ್,

ಹನುಮಾನ್ ಜ್ಯೋತಿಷ್ಯ ಆಶ್ರಮ, ತಿರುತ್ತಣ್ಣಿ, ದ. ಇಂಡಿಯಾ.

ಶಕ ೧೮೫೭ ಧಾತು ಸಂ। ೧೯೩೬ನೇ ಇಸವಿ ಜೂನ್ ಮಾಹೆ ಪಂಚಾಂಗ

ತಾರೀಕು	ವಾರಗಳ ಹೆಸರು	ಚಾಂದ್ರಮಾನ ಮಾಸ	ತಿಥಿ	ಕಾಲ	ಸೌರಮಾನ ಮಾಸ	ಕೇತಿ	ನಕ್ಷತ್ರಗಳು ಹೆಸರು	ಕಾಲ	ಸೂರ್ಯ ಉದಯ	ಅಸ್ತ
1	2	3	4	5	6	7	8	9	10	11
				ಘ.ವಿ				ಘ. ವಿ.	ಗಂ. ನಿ.	ಗಂ.ನಿ.
17	ಬುಧವಾರ	ಜ್ಯೇಷ್ಠ ಬಹುಳ	13	20 52	ಜ್ಯೇಷ್ಠಮಾಸ	4	ಕೃತ್ತಿಕೆ	25 23	5 58	6 48
18	ಗುರುವಾರ		14	15 56		5	ರೋಹಿಣಿ	22 40	5 58	6 48
19	ಶುಕ್ರವಾರ		30	11 44		6	ಮೃಗ.	20 24	5 58	6 48
20	ಶನಿವಾರ		1	8 28	ಆಷಾಢಮಾಸ	7	ಆರ್ದ್ರಾ	19 25	5 59	6 49
21	ಆದಿತ್ಯವಾರ	ಜ್ಯೇಷ್ಠ ಶುದ್ಧ	2	6 16		8	ಪುನರ್ವ.	19 20	5 59	6 49
22	ಸೋಮವಾರ		3	5 12		9	ಪುಷ್ಯ	20 25	5 59	6 49
23	ಮಂಗಳವಾರ		4	5 26	ಶ್ರಾವಣಮಾಸ	10	ಆಶ್ಲೇಷ	22 47	5 59	6 49

ರಾಹುಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ
ಭಾನು	ಸಾಯಂಕಾಲ	4½	6
ಸೋಮ	ಬೆಳಿಗ್ಗೆ	7½	9
ಮಂಗಳ	ಸಾಯಂಕಾಲ	3	4½
ಬುಧ	ಬೆಳಿಗ್ಗೆ	12	1½
ಗುರು	ಸಾಯಂಕಾಲ	1½	3
ಶುಕ್ರ	ಬೆಳಿಗ್ಗೆ	10½	12
ಶನಿ	ಬೆಳಿಗ್ಗೆ	9	10½

ಗುಳಿಕಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ.
ಭಾನು	ಸಾಯಂಕಾಲ	3	4½
ಸೋಮ	,,	1½	3
ಮಂಗಳ	ಬೆಳಿಗ್ಗೆ	12	1½
ಬುಧ	,,	10½	12
ಗುರು	,,	9	10½
ಶುಕ್ರ	,,	7½	9
ಶನಿ	,,	6	7½

(೧೯ನೇ ಪುಟದಿಂದ)

ಆ ಸ್ಥಳದಲ್ಲಿ ಗಂಟುಹೊಲಿಗೆಯನ್ನು (Knot stitch) ಒತ್ತಾಗಿ ಹೊಲಿದು ತೋರಿಸಬೇಕು. ಇದನ್ನು, ಆ ಪುಷ್ಪ ಜಾತಿಯ ಸ್ವಾಭಾವಿಕ ಕುಸುಮದ ಬಣ್ಣದ ದಾರದಲ್ಲಿ ಹೊಲಿಯಬೇಕು. ಇದೇ ತರಹದಲ್ಲಿ ಪ್ರತಿಯೊಂದು ಹೂವನ್ನೂ ಹೊಲಿಯಬೇಕು. ಕೆಲವರು ಹೂ ಉಬ್ಬಿಕೊಂಡು ಹಾಕಬೇಕೆಂದು ಒಳಗೆ ಸ್ವಲ್ಪ ಹತ್ತಿಯನ್ನಿಟ್ಟೂ ಹೊಲಿಯುತ್ತಾರೆ. ಅನಂತರ ಎಲೆಗಳನ್ನು ನೀವು ಹಾಕಬೇಕೆಂದಿರುವ ಹಸುರು ಬಣ್ಣದ ಬಟ್ಟೆಯಲ್ಲಿ, ಹೂವನ್ನು ಹೊಂದಿಸಿದಂತೆಯೇ ಎಲೆಯನ್ನೂ ಕತ್ತರಿಸಿ ಬಟ್ಟೆಗೆ ಹೊಂದಿಸಿ ಹೊಲಿಯಬೇಕು. ಎಲೆಯ ನರಗಳನ್ನು ತೋರಿಸಲು, ಆ ಎಲೆಯ ಬಣ್ಣಕ್ಕಿಂತ ಸ್ವಲ್ಪ ಬಿಳುಪು ಹಸುರು ಬಣ್ಣದ ದಾರದಲ್ಲಿ ನರದ ಪೆನ್ಸಿಲ್ ಗೆರೆಯ ಮೇಲೆ ಓರೆ ಹೊಲಿಗೆಯನ್ನು (either stem stitch or twisted chain stitch) ಹೊಲಿಯಬೇಕು. ಹೂವಿನ ಮತ್ತು ಎಲೆಗಳ ತೊಟ್ಟುಗಳಿಗೂ, ಕೆಳಭಾಗಕ್ಕೂ ಹಸುರು ದಾರದಲ್ಲಿ ಓರೆ ಹೊಲಿಗೆ ಹಾಕಬೇಕು. ಎಲ್ಲವೂ ಹೊಲಿದು ಮುಗಿದನಂತರ ಚಿತ್ರವನ್ನು ನೋಡಿ, ಎಷ್ಟು ಲಕ್ಷಣವಾಗಿ ತೋರುತ್ತದೆ!

ಈ ಪ್ರಥಮ ಕೆಲಸವನ್ನು ಚೆನ್ನಾಗಿ ಕಲಿತನಂತರ, ಇದೇ ರೀತಿಯಲ್ಲಿ ಮೃಗಗಳು, ಪಶುಪಕ್ಷಿಗಳು, ಮನುಷ್ಯರು ಮುಂತಾದ ಚಿತ್ರಗಳನ್ನೂ ನಮ್ಮ ಬುದ್ಧಿಶಕ್ತಿಯನ್ನುಪಯೋಗಿಸಿ ಅಸ್ಸಿಕೇ ವರ್ಕ್ ಮಾಡಿ ಮನೆಯ ಮೇಜು, ಕುರ್ಚಿಗಳನ್ನು ಅಲಂಕರಿಸ ಬಹುದು. ಇವುಗಳನ್ನು ಹೊಲಿಯುವ ವಿಧಾನವನ್ನು ಮತ್ತೊಂದು ಸಾರಿ ಬರೆಯುತ್ತೇನೆ. ಅದರೊಳಗೆ ನೀವು ಈ ಸುಲಭ ರೀತಿಯ ಹೊಲಿಗೆಯಿಂದ ಮನೆಯನ್ನಲಂಕರಿಸುತ್ತಿರಿ.

'ಸರಸ್ವತಿ

(೨೧ನೇ ಪುಟದಿಂದ)

ಪ್ಯೆಯವರು 'ನಿಮ್ಮ ಈ ಕಾರ್ಯಕ್ಕಾಗಿ ನನ್ನ ಹೃತ್ಪೂರ್ವಕ ವಂದನೆಗಳು. ಜನತೆಯ ಶ್ರೇಯಸ್ಸು ನಿಮ್ಮ ಕೈಯಲ್ಲಿ ಸುರಕ್ಷಿತವಾಗಿದೆ. ನಮ್ಮ ನಾಡಿನ ಅಭಿವೃದ್ಧಿಗಾಗಿ ಕೆಲಸ ಮಾಡಲು ದೇವರು ನಿಮಗೆ ಸಾಮರ್ಥ್ಯವನ್ನು ಕೊಡಲಿ' ಎಂದು ಬರೆದಿರುತ್ತಾರೆ.

ಇದಲ್ಲದೆ ವಿದ್ಯಾಸಂಬಂಧವಾಗಿಯೂ ನಾನು ಹೆಚ್ಚಿನ ಉತ್ಸಾಹವನ್ನು ತೆಗೆದುಕೊಂಡಿದ್ದೇನೆ. ಎಲಿಮೆಂಟರಿ ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಸಲ್ಲುತ್ತಿದ್ದ ಸುಮಾರು ೨ ಲಕ್ಷದ ಗ್ರಾಂಟನ್ನು ಒಂದು ಲಕ್ಷಕ್ಕೆ ತಂದು ನಿಲ್ಲಿಸಬೇಕೆಂದ ಶ್ರೀ। ಕೃಷ್ಣ ಸ್ವಾಮಿ, ಡಿ. ಇ. ಓ.ರವರು ಯೋಚಿಸಿದಾಗ ಶ್ರೀ। ಮಂಗೇಶರಾಯರೇ ಮೊದಲಾದ ವಿದ್ಯಾಪ್ರೇಮಿಗಳ ಹೇಳಿ ಮೇರೆಗೆ ಆದನ್ನು ಬಲವಾಗಿ ವಿರೋಧಿಸಿ ಶ್ರೀ। ಕೃಷ್ಣ ಸ್ವಾಮಿಯವರು ಹಿಂದಿನಂತೆ ಗ್ರಾಂಟು ಕೊಡಲೊಪ್ಪುವಂತೆ ನಾನು ಮಾಡಿರುವೆನೆಂದು ಶ್ರೀ। ಕೃಷ್ಣ ಸ್ವಾಮಿಯವರು ನನಗೊಪ್ಪಿ ಬರೆದ ಕಾಗದದಿಂದಲೇ ಸ್ಪಷ್ಟವಾಗುವುದು.

ಕರ್ನಾಟಕದ ಏಕೀಕರಣವಾದರೆ ಮಾತ್ರ ಜನರ ಹೆಚ್ಚಿನ ಕಷ್ಟ ನಿವಾರಣೆಯಾದೀತೆಂಬ ಭರವಸೆ ನನಗಿದ್ದುದರಿಂದ ಅದ ಆವಶ್ಯಕತೆಯನ್ನು ಕೌನ್ಸಿಲಿನಲ್ಲಿ ತೋರಿಸಿಕೊಟ್ಟಿದ್ದೇನೆ. ಕಾಯಕಾರಿ ಮಂಡಲದ ಸದಸ್ಯರಾದ ಶ್ರೀ। ಹೊಸಮನಿ, ಎಂ. ಎಲ ಎ.ರವರು 'ಕರ್ನಾಟಕದ ಏಕೀಕರಣಕ್ಕಾಗಿ ನೀವು ಮಾಡು ಕೆಲಸಕ್ಕಾಗಿ ನಾವು ಕೃತಜ್ಞರಾಗಿದ್ದೇವೆ' ಎಂದು ಬರೆದಿರುತ್ತಾರೆ.

ರಾಜಕೀಯ, ಕಾರಾಗೃಹದ ಸುಧಾರಣೆ, ಲೋಕಲ್ ಸೆಲ್ಫ್ ಗವರ್ನ್‌ಮೆಂಟು ಇವೇ ಮೊದಲಾದ ವಿಷಯಗಳ ಪ್ರಶ್ನೆ ಬಂದಾಗ ನಾನು ಯಾವಾಗಲೂ ದೇಶಹಿತವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೌನ್ಸಿಲಿನಲ್ಲಾಗಲಿ, ಕೌನ್ಸಿಲಿನ ಹೊರಗಾಗಲೀ ಕೆಲಸ ಮಾಡಿರುವೆನು. ನಾನು ೬ ವರ್ಷಗಳಲ್ಲಿ ಮಾಡಿದ ಕೆಲಸಗಳಲ್ಲಿ ಇವು ಕೆಲವು ಮಾತ್ರವಾಗಿವೆ. ನನ್ನ ಕಾರ್ಯದಿಂದ ಪ್ರಯೋಜನ ಹೊಂದಿದ ಜನರು ನಾನು ಮಾಡಿದ ಪ್ರಯತ್ನಗಳನ್ನು ಮನಃಪೂರ್ವಕವಾಗಿ ಒಪ್ಪಿದರೆ ಮಾತ್ರ ಸಾಕಾಯಿತೆಂದರೆ ಬಹುಮಾನವನ್ನಪೇಕ್ಷಿಸಿ ಅನ್ಯರಂತೆ ಸ್ವಾರ್ಥಿಯಾಗಿ ಕೆಲಸ ಮಾಡಿದವನು ನಾನಲ್ಲ. ಇಷ್ಟೆಲ್ಲಾ ವಿಷಯಗಳನ್ನು ಹೇಳಲಿಕ್ಕೆ ಶ್ರೀ। ಶಿವರಾಯರ ದೀರ್ಘವಾದ ಪತ್ರದಲ್ಲಿ ಒಂದಾದರೂ ಒಳ್ಳೇ ಶಬ್ದವಿರಲಿಲ್ಲವೇ? ಈ ಉತ್ತರವನ್ನು ಅವರಂತೆ ಕೆಟ್ಟ ಮಾತುಗಳನ್ನುಪಯೋಗಿಸಿ ಬರೆವ ಆವಶ್ಯಕತೆ ನನಗಿಲ್ಲ. ಯಾಕೆಂದರೆ ನಾನು ಮಾಡಿದ ಕೆಲಸವು ಕೆಸರುಗದ್ದೆಯಲ್ಲಿ ನೆಟ್ಟ ಕಂಬವಲ್ಲ ಅಥವಾ ಶ್ರೀ। ಶಿವರಾಯರಂತವರು ಅದನ್ನು ಎತ್ತಿ ಹಿಡಿದು ಜನರಿಗೆ ತೋರಿಸಬೇಕಾದ ಆವಶ್ಯಕತೆಯಿಲ್ಲ. ಅದು ಯಾ ಕಾಲಕ್ಕೂ ಸ್ವತಂತ್ರವಾಗಿ ನಿಂತು ಜನರ ಹೃದಯದಲ್ಲಿ ಪ್ರತಿಬಿಂಬಿಸುತ್ತ ಇದ್ದೀತು.

U. C. S. Bhat

ಮಾರ್ಗೊ ಸೋಪ್

ಬೇಸಿಗೆಯ ಕಾಲಕ್ಕೂ ಚರ್ಮದ ಮೃದುತ್ವಕ್ಕೂ
ಅತ್ಯುತ್ಕೃಷ್ಟವಾದುದು.

ಇದೇ ಪ್ರಥಮವಾದ ಮತ್ತೂ ಆಗಿರತಕ್ಕ ಒಂದೇ ಒಂದು "ನೀಮ್" ಸಾಬೂನು.

ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಮತ್ತು ಸ್ಥಳೀಯ ಸೆಕ್ರೀಕಿಸ್ಟರಲ್ಲಿ ದೊರೆಯುತ್ತದೆ

"ನೀಮ್" ಟೂತ್‌ಪೇಸ್ಟ್

ಭಾರತೀಯರು ಅನಾದಿಕಾಲದಿಂದಲೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವ "ನೀಮ್" ಬೇವಿನ ಕಡ್ಡಿಯ ವಿಷಹಾರಿಯೂ ಆದ ಮತ್ತು ಸ್ತಂಭಕವಾದ ಗುಣಗಳೆ ಅದರ ಆರೋಗ್ಯಕರವಾದ ಹಲ್ಲುಗಳ ಗುಟ್ಟೆಂದು ತಿಳಿಯಲಾಗಿದೆ.

ಕಾಲ್ಕೆಮಿಕೊ ನೀಮ್ ಟೂತ್‌ಪೇಸ್ಟ್

ಬೇವಿನ ಕಡ್ಡಿಯ ಎಲ್ಲಾ ಗುಣಗಳನ್ನು ಉಳ್ಳುದಾಗಿದೆಯಲ್ಲದೆ ಪರಿಣಾಮಕಾರಿಯೊಗಿ ಹಲ್ಲನ್ನು ಶುದ್ಧಗೊಳಿಸುವದಕ್ಕೆ ಆಧುನಿಕ ದಂತ ವೈದ್ಯ ಶಾಸ್ತ್ರಕ್ಕೆ ತಿಳಿದಿರುವ ಪದಾರ್ಥಗಳನ್ನು ಒಳಕೊಂಡಿದೆ.

ಸೀಸವಿಲ್ಲದ ಟಿನ್ನಿನ ಕೊಲ್ಲಾಪ್ಸಿಬಲ್ ಟ್ಯೂಬುಗಳಲ್ಲಿದೆ.

ದಂತಮಂಜನವನ್ನು ಅಪೇಕ್ಷಿಸುವವರ ಉಪಯೋಗಕ್ಕಾಗಿ ನಮ್ಮ

ಮಾರ್ಗೊಫಿಸ್ "ನೀಮ್ ಹಲ್ಲುಪುಡಿ"

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್.
ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ.
ಸ್ಕೂಲ್ ಬುಕ್ ಕೋ, ರಥಬೀದಿ.

ನಮ್ಮ ಬ್ಯಾಲೆನ್ಸ್ ಷೀಟುಗಳೇ ಇರುವ ವಿದ್ಯಮಾನಗಳನ್ನು ಪ್ರಕಟಿಸುತ್ತವೆ.

"ಸ್ವದೇಶಿ"ಯ ಜಾಗ್ರತಿಯ ಕಾಲದಲ್ಲಿ ಸ್ಥಾಪನೆಗೊಂಡ, ಕಲ್ಕತ್ತೆಯ "ನ್ಯಾಶನಲ್" ದಿನದಿನಕ್ಕೂ ಬಲಗೊಂಡು ಪುಷ್ಟಿಯಾಗಿ, ಪರಿಣಾಮದಲ್ಲಿ, ಅದು ಇಂದು ಪೂರ್ವದೇಶಗಳ ಜೀವವಿಮಾ ಕಾರ್ಯಾಲಯಗಳಲ್ಲಿ ಪ್ರಮುಖವೆನ್ನಿಸಿದೆ. ಈ ಸಂಸ್ಥೆಯು, ಈ ವ್ಯವಹಾರ ನಡೆಸಿರುವ ಸುಮಾರು 30 ವರ್ಷಗಳ ಕಾಲದಲ್ಲಿ, ಪಾಲಿಸಿದಾರರಿಗೂ, ಅವರ ಹಕ್ಕುದಾರರಿಗೂ ಇಪ್ಪತ್ತೊಂದು ಅಲ್ಪಾವಧಿಯಲ್ಲಿಯೇ "ಕ್ಲೈಮುಗಳ" ಪಾವತಿಗಾಗಿ 1,30,00,000 ರೂಪಾಯಿಗಳಿಗೂ ಮಿಕ್ಕು ಸಲ್ಲಿಸಿರುವ ದಷ್ಟೇ ಅಲ್ಲದೆ, ಕಂಪೆನಿಯ ಆಸ್ತಿಯ ರೂಪದಲ್ಲಿ ರೂಪಾಯಿ 2,50,00,000ಗಳಿಗೂ ಹೆಚ್ಚಾಗಿ ಸಂಗ್ರಹಿಸಿಡಲೂ ಸಮರ್ಥವಾಗಿದೆ. ಜೀವನದಲ್ಲಿ ಉಳಿಸಲಾವ ಗಂಟಿನೊಡನೆ ಜೂಜಾಡಲು ಬಯಸದವರ ಆತುರಪೂರ್ವಕವಾದ ಆಲೋಚನೆಗೆ ಒಳಗಾಗಲು ಈ ನಿಜ ವಿದ್ಯಮಾನಗಳೇ ಸಾಕೆನ್ನಬಹುದಾಗಿದೆ. ಇದು ನಿಮ್ಮ ಪರ್ಯಾಲೋಚನೆಗೂ ಏತಕ್ಕೆ ಒಳಗಾಗಬಾರದು?

ನಿಮಗೆ ಬೇಕಾದುದೇನೆಂದು ನೀವು ನನಗೆ ತಿಳಿಸಿದರೇ ಸಾಕು; ಮಿಕ್ಕ ವಿಚಾರಗಳನ್ನೆಲ್ಲ ನಾವೇ ನೋಡಿಕೊಳ್ಳುವೆವು.

ನ್ಯಾಶನಲ್ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್,
ಹೆಡ್ ಆಫೀಸು, ಕಲ್ಕತ್ತ.

ಏಜನ್ಸಿಯ ಶರ್ತಗಳಿಗೆ ಬರೆದುಕೊಳ್ಳಿ:—

ಬ್ರಾಂಚ್ ಸೆಕ್ರಟರಿ, **ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,**
362, ಚೈನಾ ಬಜಾರ್ ರೋಡ್, ಎಸ್ಪ್ಲನೇಡ್, ಮದ್ರಾಸ್.

ಅಥವಾ

ದಿ ಆರ್ಗನೈಜಿಂಗ್ ಸೆಕ್ರಟರಿ,
ಸಬ್ ಆಫೀಸ್,
171, ನ್ಯೂ ಸ್ಟ್ರೀಟ್, ಮಧುರೆ.

ದಿ ಚೀಫ್ ಏಜೆನ್ಸಿ,
ಅಕ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್,
ಬೆಂಗಳೂರು ಸಿಟಿ.

ಬೆಂಕಿ ಮತ್ತೂ ಮೋಟರ್ ಅವಗಡಗಳ ಇನ್ಶೂರೆನ್ಸಿಗಾಗಿ
ದಿ ಅಸೋಸಿಯೇಟೆಡ್ ನ್ಯಾಶನಲ್ ಫಯರ್ ಮತ್ತೂ ಜನರಲ್ ಇನ್ಶುರೆನ್ಸ್ ಕೋ., ಲಿಮಿಟೆಡ್,
ಎಂಬೀ ಸಂಸ್ಥೆಯೊಡನೆ ವಿಚಾರಿಸಿರಿ.

S. K. M.

ಸಿದ್ಧಕಲ್ಪ ಮಕರಧ್ವಜ

(ರಿಜಿಸ್ಟರ್ಡ್)

ನಿಶ್ಶಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು, ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಚಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೫೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ರೂ. ೧೦.

THE MADRAS
AYURVEDIC PHARMACY (LTD.),
Madras—P. O. Box 151, 289 Esplanade,
180, Mount Rd., MADRAS.

THE BANK OF MANGALORE, LTD.,

Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.

ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

Authorised Capital ಅಧಿಕೃತ ಮೂಲಧನ	Rs. 2,00,000.	Subscribed Capital ಚಂದಾ ಅರ್ಪಿಸಿದ್ದು	Rs. 30,175	Paid-up Capital ತೆತ್ತು ಬಂದದ್ದು	Rs. 6,915.

STATEMENT OF AFFAIRS AS ON 31ST DEC. 1935.

Capital ಶಾಲು ಷೇರ್‌ಗಳಿಂದ ಪಡೆದಲಾದ ಧನ	Rs.	6,915 — 0— 0	Furniture and Safe ಪ್ರೈಜರಿ ವಗೈರೆ	Rs. 1,058— 0— 0
Reserve Fund ಕ್ಷೇಮ ನಿಧಿ	Rs.	1,000— 0— 0	Authorised Investments ಜಿನ್ನಾಭರಣ, ವ ಇತರ ಜವಾಬ್ದಾರಿಯ ಮೇಲೆ	Rs. 112,508— 1— 8
Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಠೇವಣಾತಿಗಳು	Rs.	84,706 — 9 — 4	Bills per contra ಬಿಲ್ಸ್ ಜಮಾ ಇರುವಂತೆ ಬಹಾ	Rs. 17,779—10— 5
Due to Bankers ಬೇಂಕರರಿಗೆ ಸಲ್ಲುತಕ್ಕದ್ದು	Rs.	21,996— 1— 6	Sundries ಸಾದಿಲವಾರು	Rs. 1,642— 5— 7
Bills for Collection ಜಮಾ ಮಾಡುವರೆ ಇರುವ ಬೀಲುಗಳು	Rs.	17,779 —10— 5	Cash in hand and with Bankers ಕೈಯಲ್ಲಿ ಇರತಕ್ಕ ವ, ಬೇಂಕರರಲ್ಲಿರತಕ್ಕ ನಗದಿ ಶಿಲ್ಕು	Rs. 1,787 —14— 0
Sundries ಸಾದಿಲವಾರು	Rs.	2,378—10— 5		
	Rs.	134,775—15— 8		Rs. 134,775—15— 8

Fixed Deposits ನಿರಖು ಠೇವಣಾತಿ.

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. **For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.**
For 1 year 6% ಒಂದು ವರ್ಷ ,, **For 3 months 4½% ಮೂರು ತಿಂಗಳ ,,**

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಠೇವಣಾತಿಗಳು ಸ್ವೀಕರಿಸೋಣಾಗುವುವು.
Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲ್ಲಿಕೋಟೆ, ಮತ್ತು ಬೆಂಗಳೂರುಗಳಿಗೆ ಡ್ರೆಫ್ಟ್‌ಗಳು ಕೊಡಲಾಗುವುವು. ಚೆಕ್ಸ್ ಮತ್ತು ಬಿಲ್ಸ್ ಒಫ್ ಎಕ್ಸ್‌ಚೆಂಜ್ ಹಿಂದೂಸ್ಥಾನವಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ಪಟಾಯಿಸಿಕೊಡಲಾಗುವುದು. Savings Bank Deposits-Interest allowed on daily balances at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ಪ್ರತಿವಸಂಪ್ರತಿ ಶಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.
ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.

A FEW SHARES ARE STILL AVAILABLE AT PAR.
ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.

APPLY FOR PARTICULARS.
ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.

Printed and Published by U. Ganesh Shenoi, Proprietor at the Vani Vilas Press, Bangalore City.